1. The webinar on "Making Warriors out of Cadets" was held by NCC Army Wing of Mahatma Gandhi Memorial College, Udupi on 29th September 2020 with the aim of motivating the cadets to join the defence forces and help to serve the nation. More than 200 cadets of different wings of NCC participated in the webinar. The Chief Guest, Ex-Army Serviceman Naib Subedar Gilbert Braganza, addressed the gathering by motivating the cadets to join the defence forces and inspiring them through his rich 20 years of life experiences in the army.
2. The Webinar on "National Education Policy" was held by NCC Army Wing of Mahatma Gandhi Memorial College, Udupi on 30-09-2020 for the cadets with the aim of helping them to understand its aims and benefits. The spokes-person for this Webinar was Lt. Navya, Associate NCC Officer, M.G.M. College, Udupi.

Social Activities:

1. "Tree Plantation" programme was conducted on 11th July 2020 through online mode.
2. "Swachh Bharath" program was organized on 14th Aug. 2020 at M.G.M. College, Udupi. Organized "Shramadan – Cleaning of Historical Monuments" at Bannanje on 5th Dec. 2020.
3. Organized "Cleanliness Drive" at Udupi on 8th Dec. 2020.
4. Organized "Hand Wash Day" at M.G.M. College, Udupi on 9th Dec. 2020.
5. Organized "Cleaning of Public Area" at M.G.M. College, Udupi on 10th Dec. 2020.
6. Organized "Plogging for the theme Swachatha Pakhwada" at M.G.M. College, Udupi on 11th Dec. 2020.
7. Organized "Cleaning Beach in Local Area" on 12th Dec. 2020.
8. Cadets have participated in "Celebration of 75 years of Independence by cleaning of Statues by NCC cadets" organized by 21 KAR BN NCC Udupi at War Memorial, Ajjarakadu on 13th March 2021.
9. Cadets have participated in Swachatha Awareness program at Manipal on 13th March 2021 organized by NCC Army Wing, M.G.M. College, Udupi in collaboration with Udupi District Municipality.

Adventure Activity:

1. Conducted one day trekking camp at Kundaadri on 7th March 2021.

- **NSS has conducted the following activities during the year:**
    1. Rain water harvesting campaign inaugurated by Dr. Roshan Kumar Shetty on 10-01-2021.

2. Prof. K. Bhaskara Acharya inaugurated regular NSS Activities and gave a special lecture on 'Importance of NSS' on 23-01-2021.
3. Voluntary Blood Donor's group "Gift of Life" was inaugurated by Mr. Naveen Chandra N. H., Senior Research Officer and Associate Professor, SDM College of Ayurveda, Kuthpady on 06-02-2021.
4. A guest lecture on 'Disaster Management' by Dr. Ramachandra Kamath, Professor and Head, Kodagu Institute of Medical Sciences, Karnataka on 20-02-2021.
5. A special session on 'Find Your Leader in You' was conducted by Mr. Elson Hirgan, Assistant Professor, St. Agnes College, Mangalore on 27-02-2021.
6. Three Day Virtual Leadership training was conducted by JCI, Bilalkoppa in association with NSS Units of MGM College.
7. On the occasion of World Environment Day NSS Units conducted 'Selfie with Plant' event for the NSS Volunteers.
8. 'Yoga Day' was celebrated by organizing a Virtual One Day Yoga Camp. Ms. Supritha, Alumnus of MGM College was the resource person.
9. Workshop on 'Cloth Bag Making' was conducted by NSS Units in order to reduce the usage of Plastic.
10. Clean Udupi initiative was undertaken by NSS Units of MGM College and Udupi Municipality and conducted many Cleaning Programs.
11. 8 Lecture Series was conducted virtually by NSS during Covid Lockdown which included various topics on Environment, Health, Banking etc.
12. NSS Volunteers actively participated in Fit India Freedom Run 2.0 organised by Udupi District Authority.
13. 'Constitution Day' was observed on 26-11-2020.
14. 'Vigilance Awareness Week' was observed and Pledge was taken by the NSS Volunteers.
15. NSS Units initiated awareness on side effects of soft drinks by starting a campaign 'Say No to Soft Drinks'.
16. NSS Units conducted regular 'Shramadan' and other activities throughout the year as its main objective.

- **Rangers and Rovers conducted the following activities during the year:**

1. Kasturba Rangers unit headed by Mrs. Vanitha, Asst. Professor, Dept. of Commerce.
2. Mahatma Gandhi Rovers unit headed by Mr. Avinash, Lecturer, Dept. of Chemistry.
3. On the occasion of Covid awareness and services around 500 masks were prepared by the students in the month of June and donated to the Bharath Scouts and Guides Office, Udupi for their mask bank programme which was further distributed to govt. schools.
4. As a part of service 10 students participated as volunteers for PUC final examination during Covid.
5. 'Vanamahothsav' was organised and saplings were planted in the College campus on 05-07-2020.
6. Students participated in Independence Day parade on 15-08-2020.
7. Students participated in Gandhi Jayanthi celebration and conducted Shramadan on 02-10-2020.
8. 15 students appeared for online NIPUN exam conducted by Bharath Scouts and Guides Unit.
9. Organised a special talk on the topic

"Bring out the Leader in you" by Mr. Shreyas Kotian, our alumni addressed the students.

10. Inauguration of webinar series and the first webinar "duty-to god, to other, to self" was conducted on 03-07-2021. Ms. Prabhashree Shetty, Advanced Ranger Leader, Bhandakars' College, Kundapur addressed the students.
11. Organised webinar 2 on the topic "Boost your immunity" was conducted on 11-07-2021. Dr. Anoop Kumar, Asst. Professor, Dept. of Dravyaguna Vijnana, Sharada Ayurved Medical College and Hospital, Talapady, Mangaluru addressed the students.

- **Youth Red Cross has conducted the following activities during the year:**
  1. Republic Day parade was held on 26-01-2021.
  2. Blood donation camp was held on 03-02-2021 in association with KMC, Manipal.

- **Commerce Club has conducted the following activities:**
  1. Investor protection fund (BSE) on "capital market awareness" was held on 25th May, 2021.
  2. An inspirational talk on "as the page turns" was conducted on 9th June, 2021.
  3. A few online competitions and Swachh M.G.M. Abhiyan were conducted.

- **Science Club has conducted the following activities during the year:**
  1. Pick and Speak activity on 03-02-2021.
  2. Clean campus drive on 10-02-2021.
  3. Group discussion on 24-02-2021.
  4. Special lecture on "Astronomy – some aspects" by Retd. Professor Dr. Vyasa Upadhyaya, MIT, Manipal on 03-03-2021.
  5. Webinar on environmental consciousness in ancient India by Dr.Vijayalakshmi M., Department of Sanskrit, M.G.M. College, Udupi on 23-07-2021.

- **The Eco Club has conducted the following activities:**
  1. Release of a Text book of Environmental Studies for IV semester Compulsory Elective Foundation Course authored by Prof. Usharani S. Suvarna, HOD of Botany and Mrs. Shruthi Nayak, Lecturer in Botany on 7th July 2021.
  2. A grand celebration of Aatidonji Dina with a touch of traditional botanical knowledge on 20th July 2021.
  3. Renovation of the two herbal gardens of the college by planting 75 saplings of medicinal plants on the occasion of 75th Independence Day celebration on 15th August 2021.

- **IT Club has conducted the following activities:**
  1. A talk on opportunities to enhance knowledge through online courses was conducted on 03-02-2021.
  2. The IT club members participated in the Swachh M.G.M. Abhiyan on 10-02-2021.
  3. Picture puzzle was organised by the club on 24-02-2021.
  4. IT cross world was conducted on 03-03-2021.
  5. Online IT quiz was conducted on 09-06-2021.
  6. Essay writing events were held.
  7. An aptitude test was conducted on 30-06-2021.

- **Arts Club has conducted the following activities:**
  1. A special session on "Bring out the Leader in you" was conducted on 03-03-2021.

2. Webinar in association with the rover's unit was conducted on the topic "Boost Your Immunity" on 11-07-2021.

- **English Forum:**

1. An International Webinar on 'Humanities and Future' by Dr. Chandrima Chakraborthy, Department of Literature and Cultural Studies, Mc Master University, Canada was conducted on 12th February 2021.
2. Prof. Namita Tolpady, Retired H.O.D. of English, S.M.S. College, Brahmavar gave an insight of the novel 'Nineteen Eighty-Four' by George Orwell, on 25th February for final B.A. Optional students.
3. Dr. Sandhya R. Nambiar, Retired Principal and H.O.D. of English of M.G.M. College addressed the students on 'Life Skills and Literature' on 4th March.
4. A Whatsapp study group 'Inspirational Learning' was created for optional students on 29th September 2020, to motivate them to read, write and discuss in groups.
5. Four combined sessions for all the optional students were conducted by the English Forum in A.V. Hall. On 21st Jan., Amylin and Mythreyi of III B.A. Opt. launched the offline 'Inspirational Learning Sessions' with a session on 'Why we study Literature?' Harshith and Shivakumar of III B.A. Opt. gave an insight on 'How to face Competitive Exams?' on 28th Jan. A Session on 'Being Humane: Philanthropy' was engaged by Riya and Chinmayi of II B.A. Opt. on 4th Feb. A presentation on 'English in daily life' was given by Nithish and Yashas on 25th February.

- **Department of Computer Science:**

1. The **"KSET/NET Mock Test"** was conducted on June 27, 2020 by the Computer Science Department for the post-graduate students of Computer Science and Computer Science faculty to boost their preparation for upcoming KSET and NET. Many faculties from Mangalore University and Vicinity, faculties from institutions like New Horizon College, St. Aloysius, YIASCM, Tirumala Engineering College, JNTUHCES and students of M.G.M., St. Aloysius, AIMS, Bangalore, SIT College, MIT, SPC Puttur, AIMIT attended the test.
2. A one day Webinar on **"Asynchronous Online Mode of Teaching"** was conducted on 20th August 2020. Resource persons Guruprasad Kamath and Abhijith Swar from Manipal Technologies gave insights on the effectiveness of the asynchronous mode of teaching in promoting student learning and satisfaction. Around 220 faculties from Mangalore University and Vicinity participated.
3. **Interaction with an Entrepreneur** Mr. Shivanand Bhat of E-Samudaya portal to trade local produce was held on 11th February 2021 for II M.Sc. students. He gave insights on his portal and students shared their ideas for trading local products through his portal.
4. An **interaction with our Alumni** Pooja presently working in Robosoft, Udupi, was held on 26th February 2021 to guide and motivate our M.Sc. students to take up the projects for their internships with full seriousness and she also gave the guidelines to them for the interview preparations.
5. Course on PHP was organized for II M.Sc. students from 24th February 2021 to 10th March 2021. Students learnt to develop website using PHP with the help of resource person Ganesh Hegde, Lecturer, Dept. of Computer Science.

6. One day Webinar on ‘How to become a Potential Employable Candidate?’ was organized by our department in association with IQAC and placement cell for UG and PG students of our College on 5th June 2021 for UG students. Resource persons Mr. Kiran Prabhu, and Mr. Guruprasad Kamath from Manipal Technologies motivated the students to update themselves according to the industry needs. They urged the students to cultivate the soft skills like communication skills, leadership skills, problem solving skills, interpersonal skills, etc., because the pace of change in almost every industry has increased and with the constant changes that keep arising in every industry, they are new skills that are demanded by organisations at any given point of time. It was an interactive session. Around 140 students participated.
7. An International Webinar on “Importance of Soft Skills” was organized in association with Placement Cell and IQAC for the UG and PG students of our College on 28th August 2021. The resource person Mrs. Gomathi Pai (Senior IT Professional based in Singapore and also our alumni) enlightened the participants on the soft skills in personal life and professional life. Around 158 students participated in the event.
8. An International Level Elocution Competition was organized on 1st September 2021 (First Round) and 6th September 2021 (Second Round) for the students of the age group 16 – 19 in online mode to boost their public speaking skills with self-confidence. Participants were from various places like Mumbai, Bangalore, Ernakulam, Udupi, different location of Coastal Karnataka, Cambodia and UAE Middle East.
9. One day International Webinar on Research Methodology was organized on 4th September 2021. The resource person for the Webinar was Dr. Harish G. Joshi, Professor of Manipal Institute of Management, Co-ordinator Centre for Social Entrepreneurship, MAHE. The core objective of the Webinar was to equip the research scholars with set of skills and potentiality to undertake the research very effectively in the disciplines of social science. This Webinar was designed to offer the practical guidelines and direct the researchers through all the stages of research from identifying a research problem to the solved result, which is profitable to the society. The benefits of Webinar was availed by 96 participants in the GMeet and around 300+ participants in the live streaming from across the globe. All of the participants who attended this workshop were research scholars, faculty who were directly involved in research process.

- **Internal Quality Assurance Cell (IQAC)** has organised the following quality enhancement programs for teachers of M.G.M. College and nearby Colleges.
  1. Workshop on “Role of IQAC: Quality Enhancement – Issues & Challenges” conducted on 23-08-2021.
     Resource Person: Dr. Ita D’Souza, H.O.D of UG Chemistry, IQAC Coordinator St. Agnes College, Mangalore
  2. Workshop on “Teaching, Learning & Evaluation in Colleges” conducted on 15-09-2021.
     Resource person: Dr. S.S. Masali Retd. Principal Lingaraj Autonomous College, Belgavi.

ಕನ್ನಡ ವಿಭಾಗ

ತುಳುನಾಡು

✍ **ಅನಿತಾ,** ತೃತೀಯ ಬಿ.ಎಸ್ಸಿ

''ತುಳು'' ಕೇವಲ ಒಂದು ಭಾಷೆಯಲ್ಲ ಅದು ಹಲವಾರು ಆಚಾರ ವಿಚಾರವನ್ನು ಹೊಂದಿರುವ ವೈವಿಧ್ಯಮಯವಾದ ಒಂದು ಸಂಸ್ಕೃತಿ. ದ್ರಾವಿಡ ಭಾಷೆಯಲ್ಲಿ ಅತ್ಯಂತ ಹಳೆಯದಾದ ಭಾಷೆ ಇದಾಗಿದ್ದು ಅದಕ್ಕೆ ತಕ್ಕ ಮಾನ್ಯತೆ ಸಿಕ್ಕಿಲ್ಲವೆಂಬುದು ಬೇಸರದ ಸಂಗತಿ. ತುಳುನಾಡು ಎಂದರೆ ಕರ್ನಾಟಕ ರಾಜ್ಯದ ದಕ್ಷಿಣ ಕನ್ನಡ ಮತ್ತು ಉಡುಪಿ ಸೇರಿದ ಕರಾವಳಿ ಭಾಗ. ಇಲ್ಲಿ ಹಲವಾರು ರಾಜರು ಆಳಿದ ಇತಿಹಾಸವಿದೆ. ಐತಿಹ್ಯಗಳ ಪ್ರಕಾರ ತುಳುನಾಡು ಪರಶುರಾಮನ ಸೃಷ್ಟಿಯೆಂದು, ತುಳು ನಂಬಿಕೆಗಳ ಪ್ರಕಾರ ಬೆರ್ಮೆರ್‌ನ ಸೃಷ್ಟಿಯೆಂದೂ ಹೇಳಲಾಗುತ್ತದೆ.

ನಮ್ಮ ತುಳುನಾಡು ಪ್ರಾಕೃತಿಕವಾಗಿ ಸುಂದರವಾದ ಭೂಪ್ರದೇಶ ಇಲ್ಲಿನ ಜನ, ಇಲ್ಲಿನ ವಾತಾವರಣ, ಇಲ್ಲಿನ ಸಂಸ್ಕೃತಿ ಮನಸ್ಸಿಗೆ ಮುದ ನೀಡುತ್ತದೆ. ಸಾಮಾನ್ಯವಾಗಿ ಉಡುಪಿ, ಕುಡ್ಲ (ಮಂಗಳೂರು)ದ ಜನರನ್ನು ಬುದ್ಧಿವಂತರು ಎನ್ನಲಾಗುತ್ತದೆ. ಇದಕ್ಕೆ ಕಾರಣ ಇಲ್ಲಿನ ಸಂಸ್ಕೃತಿ ಮತ್ತು ಶಿಕ್ಷಣ ವ್ಯವಸ್ಥೆ. ಹಲವಾರು ಶಾಲೆ, ಕಾಲೇಜುಗಳು, ಅನೇಕ ವಿದ್ಯಾಸಂಸ್ಥೆಗಳು ಮಕ್ಕಳಿಗೆ ವಿದ್ಯೆಯಲ್ಲಿನ ಆಸಕ್ತಿ, ಅಲ್ಲದೆ ಎಲ್ಲರಿಗೂ ಸ್ವಚ್ಛತೆಯ ಅರಿವು. ಮನೆಯಲ್ಲಿ ಯಾವುದೇ ಭಾಷೆ ಮಾತನಾಡಲಿ ಆದ್ರೆ ಅಂಗಳಕ್ಕೆ ಇಳಿಯುತ್ತಿದ್ದಂತೆ ''ತುಳು'' ಭಾಷೆಯಾಗಿ ಪರಿವರ್ತನೆಯಾಗುತ್ತದೆ. ಈ ಕ್ರಿಯೆಗೆ ಯಾರ ಒತ್ತಾಯವೂ ಇಲ್ಲ, ಇದು ಒಂದು ತರಹದ ಅಭ್ಯಾಸವೇ ಸರಿ. ನನಗೆ ಗೊತ್ತಿದ್ದ ಪ್ರಕಾರ ಇಲ್ಲಿ ನಾನು ಎನ್ನೋದಕ್ಕಿಂತ ನಾವು, ನಮ್ಮವರು ಎನ್ನುವವರೇ ಹೆಚ್ಚು, ಯಾಕೆ ಹೀಗೆ ಹೇಳ್ತಾ ಇದ್ದೇನೆ ಅಂದ್ರೆ ಇಲ್ಲಿ ಹೆಚ್ಚಿನ ಜನ ವಿದ್ಯಾಭ್ಯಾಸಕ್ಕಾಗಿ, ದುಡಿಮೆಗೆ ಅಂತ ಬರ್ತಾರೆ ಎಲ್ಲರನ್ನು ಆದರದಿ ಬರಮಾಡಿಕೊಂಡಿದೆ ನಮ್ಮ ಕರಾವಳಿ.

ತುಳುನಾಡು ಅಗಾಧವಾದ ವಿವಿಧ ವಿಶಿಷ್ಟ ಸಂಸ್ಕೃತಿ ಹೊಂದಿದೆ. ಉಡುಗೆ-ತೊಡುಗೆ, ಆಚಾರ-ವಿಚಾರ, ತಿಂಡಿ-ತಿನಿಸು, ಹಲವಾರು ಆಚರಣೆಗಳ ವೈವಿಧ್ಯತೆಯನ್ನು ಹೊಂದಿದೆ.

ಯಕ್ಷಗಾನ: ವೇಷ-ಭೂಷಣದಿಂದಲೇ ಆಕರ್ಷಿಸುವ ವಿಶಿಷ್ಟ ಕಲೆ, ನೋಡ ನೋಡುತ್ತಲೆ ಬೇರೊಂದು ಲೋಕಕ್ಕೆ ಕರೆದೊಯ್ಯುತ್ತದೆ. ಐತಿಹಾಸಿಕವಾಗಿ 1000 ವರ್ಷಗಳಿಗಿಂತಲೂ ಹಳೆಯದಾದ ಇತಿಹಾಸ. ಯಕ್ಷಗಾನ ಎಂದರೆ ''ಗಾನ'' (ಯಕ್ಷನ ಹಾಡು) ಅಂದರೆ ಪ್ರಕೃತಿಯ ಚೇತನ. ಭಾರತದಲ್ಲಿಯೇ ಅಭಿವೃದ್ಧಿ ಹೊಂದಿದ ಸಾಂಪ್ರದಾಯಿಕ

ರಂಗಮಂದಿರ. ಯಕ್ಷಗಾನವು ನೃತ್ಯ, ಸಂಗೀತ, ಸಂಭಾಷಣೆ, ವೇಷ ಭೂಷಣ, ಮುಖಬಣ್ಣ ಮತ್ತು ವಿಶಿಷ್ಟ ಶೈಲಿಯ ರಂಗತಂತ್ರಗಳ ಸಂಯೋಜನೆಯಾಗಿದೆ. ಇನ್ನು ಇದರಲ್ಲಿ 2 ವಿಧ – ತೆಂಕುತಿಟ್ಟು ಮತ್ತು ಬಡಗುತಿಟ್ಟು, ಇಲ್ಲಿ ವೇಷ-ಭೂಷಣದಲ್ಲಿ ಬದಲಾವಣೆಯಿದ್ದು, ತೆಂಕುತಿಟ್ಟಿನಲ್ಲಿ ''ಚಂಡೆ'' ನಿಂತು ಬಾರಿಸಲಾಗುವುದು ಮತ್ತು ಕುಣಿತ ಹೆಚ್ಚಾಗಿದ್ದು, ಸಂಭಾಷಣೆ ಕಡಿಮೆಯಾಗಿರುತ್ತದೆ. ಅದೇ ಬಡಗುತಿಟ್ಟಿನಲ್ಲಿ ''ಚಂಡೆ'' ಕೂತು ಬಾರಿಸಲಾಗುತ್ತದೆ ಮತ್ತು ಕುಣಿತಕ್ಕಿಂತ ಸಂಭಾಷಣೆ ಅಧಿಕವಾಗಿರುತ್ತದೆ. ಯಕ್ಷಗಾನದಲ್ಲಿ ಎರಡು ಮೂಲ ಅಂಶಗಳಿವೆ, ಮುಮ್ಮೇಳ ಹಾಗೂ ಹಿಮ್ಮೇಳ, ಯಕ್ಷಗಾನದ ಮೂಲ ಚೌಕಟ್ಟು ರಾಗ, ತಾಳ ಮತ್ತು ಪ್ರಸಂಗದ ಮೇಲೆ ಆಧಾರವಾಗಿರುತ್ತದೆ. ರಾಮಾಯಣ, ಮಹಾಭಾರತ ಮೊದಲಾದ ಪೌರಾಣಿಕ ಕಥೆಗಳ ಮೇಲೆ ಯಕ್ಷಗಾನವನ್ನು ನಡೆಸಲಾಗುತ್ತದೆ. ಈ ನೃತ್ಯಗಳನ್ನು ಮುಖ್ಯವಾಗಿ ಮನರಂಜನೆಯ ಮೂಲವಾಗಿ ಪ್ರದರ್ಶಿಸಲಾಗುತ್ತದೆ. ಭಾರತೀಯ ಪರಂಪರೆಯ ಬಗ್ಗೆ ಯಾವುದೇ ಮೂಲಗಳಿಲ್ಲದ ಸಮಯದಲ್ಲಿ ರಾಮಾಯಣ, ಮಹಾಭಾರತ ಮತ್ತು ಪುರಾಣಗಳ ಎಲ್ಲಾ ಇತಿಹಾಸವನ್ನು ಜನರಿಗೆ ತಿಳಿಸುವಲ್ಲಿ ಯಶಸ್ವಿಯಾಗಿದೆ. ದೂರದರ್ಶನ ಮತ್ತು ರೇಡಿಯೋದ ಮೊದಲು

ಯಕ್ಷಗಾನವು ಮನೋರಂಜನೆಯ ಮೂಲವಾಗಿತ್ತು. ಯಕ್ಷಗಾನವು ಇತರೆ ಕಲಾ ಪ್ರಕಾರಗಳಿಗಿಂತ ಭಿನ್ನವಾಗಿ ಅತ್ಯಂತ ಪವಿತ್ರ ಕಲೆಯಾಗಿದೆ. ಮೊದಮೊದಲು ಯಕ್ಷಗಾನ ರಾತ್ರಿಯಿಂದ ಬೆಳಗಿನವರೆಗೂ ಪ್ರಸಂಗ ನಡೆಸುತ್ತಿದ್ದರೂ ಕೂಡ ಜನರ ಸಮೂಹವೇ ಸೇರುತ್ತಿತ್ತು. ಇಂದು ಬಹು ಮಾಧ್ಯಮ ಸಂಸ್ಕೃತಿ ಹಾಗೂ ಪಾಶ್ಚಾತ್ಯ ಸಂಸ್ಕೃತಿಯ ಪ್ರಭಾವದ ನಡುವೆಯೂ ಯಕ್ಷಗಾನ ತನ್ನ ಮಹತ್ವ ಉಳಿಸಿಕೊಂಡಿದೆ ಎಂದರೆ ಅದರ ಹಿರಿಮೆಯ ಅರಿವಾದೀತು.

ಕಂಬಳ:

ಪ್ರಾಚೀನ ಕಾಲದಿಂದ ಕರಾವಳಿಯಲ್ಲಿ ಕಂಬಳ ಕ್ರೀಡೆ ನಡೆಸಿಕೊಂಡು ಬರುತ್ತಿದ್ದಾರೆ. ಇತಿಹಾಸದ ಪ್ರಕಾರ 800 ವರ್ಷಗಳ ಹಿಂದೆ ಕಂಬಳ ಅಸ್ತಿತ್ವದಲ್ಲಿ ಇತ್ತು ಎಂಬುದಕ್ಕೆ ದಾಖಲೆಗಳಿವೆ. ಸಾಮಾನ್ಯವಾಗಿ ಕಂಬಳ ನಡೆಯುವುದು ನೀರು ತುಂಬಿದ ಕೆಸರು ಗದ್ದೆಗಳಲ್ಲಿ, ಕೃತಕವಾಗಿ ನಿರ್ಮಿಸಿದ ಹೊಲದಲ್ಲಿ. 1402ರ ಕಾಲದಲ್ಲಿ ತುಳುನಾಡಿನ ಅರಸರ ರಾಜಧಾನಿಯಾಗಿದ್ದ ಬಾರಕೂರು ಎಂಬ ಊರಿನ ಶಾಸನದಲ್ಲಿ ಕಂಬಳದ ಉಲ್ಲೇಖವಿದೆ. ಕಟಾವು ಮುಗಿದ ಗದ್ದೆಗಳಲ್ಲಿ ಜನರ ಸಂಭ್ರಮಕ್ಕಾಗಿ ಕೋಣಗಳನ್ನು ಓಡಿಸುವ ಪರಿಪಾಠವಿತ್ತು. ಹಾಗಾಗಿ ಕಂಬಳವೆಂಬ ಕೋಣಗಳ ಓಟಕ್ಕೆ ಬಹಳ ಹಿಂದಿನ ಇತಿಹಾಸವಿದೆ. ಕರಾವಳಿಯಲ್ಲಿ ಕಂಬಳವನ್ನು ನವೆಂಬರ್ ನಿಂದ ಮಾರ್ಚ್‌ವರೆಗೆ ನಡೆಸುತ್ತಾರೆ. ಬೇರೆ ಬೇರೆ ಊರು, ಬೇರೆ ಬೇರೆ ದಿನ, ಕಾಸರಗೋಡಿನಿಂದ ಹಿಡಿದು ಭಟ್ಕಳದ ತನಕ 250ಕ್ಕೂ ಹೆಚ್ಚು ದೈವ ದೇವರ ಕಂಬಳ ನಡೆಸಲಾಗುತ್ತದೆ.

ಶ್ರೀನಿವಾಸ ಗೌಡರ ವಿಶ್ವದಾಖಲೆ 100 ಮೀಟರ್‌ನಲ್ಲಿ 9.55 ಸೆಕೆಂಡು ಓಟ ಹೆಮ್ಮೆಯ ಸಂಗತಿ. ಪ್ರಾಣಿ ರಕ್ಷಣಾ ಸಂಘಟನೆಗಳು ತಮಿಳುನಾಡಿನ ಜೆಲ್ಲಿಕಟ್ಟು ಕ್ರೀಡೆಯನ್ನು ನಿಷೇಧಿಸಿದಾಗ ಕಂಬಳವು ಅಂತದ್ದೇ ಕ್ರೀಡೆಯೆಂದು ನಿಷೇಧಿಸಲಾಗಿತ್ತು. ಇದು ಜನಪದ ಕ್ರೀಡೆಗೆ ಕಪ್ಪು ಚುಕ್ಕಿಯಾಯಿತು. ಆದರೆ ಮುಂದಿನ ದಿನಗಳಲ್ಲಿ ಸುಪ್ರೀಮ್ ಕೋರ್ಟ್ ಕಂಬಳಕ್ಕೆ ಅಂಗೀಕರಿಸಿದಾಗ ಮತ್ತೆ ಎಂದಿನಂತೆ ಓಟ ಪ್ರಾರಂಭವಾಯಿತು. ಈ ಕಂಬಳದ ಕೋಣಗಳನ್ನು ಸಾಕುವುದೇ ಪ್ರತಿಷ್ಠೆಯ ವಿಷಯ, ಒಂದು ಜೋಡಿ ಕೋಣ ಸಾಕಲು ವರ್ಷಕ್ಕೆ 4–6 ಲಕ್ಷ ಬೇಕು. 10ಕ್ಕೂ ಅಧಿಕ ತಳಿ, ಉತ್ತಮ ಆಹಾರ ಕೊಡಲಾಗುತ್ತದೆ. ಕೋಣಗಳನ್ನು ಎಲ್ಲರೂ ಓಡಿಸಲು ಸಾಧ್ಯವಿಲ್ಲ. ತರಬೇತಿ ನೀಡಲಾಗುತ್ತದೆ. ಕೇವಲ ಕಂಬಳದ ದಿನ ಓಡುವ ಕೋಣವನ್ನು ಉಳಿದ ಎಲ್ಲಾ ದಿನಗಳಲ್ಲಿ ಮನೆ ಮಂದಿಯಂತೆ ನೋಡಿಕೊಳ್ಳುವುದು ಖುಷಿಯ ಸಂಗತಿ. ಕಂಬಳ ಓಟ ಮನರಂಜನದಾಯಕ ಅನುಭವವಾಗಿದ್ದು, ಕರ್ನಾಟಕದ ಸಾಂಪ್ರದಾಯಿಕ ನೋಟವನ್ನು ನೋಡಲು ಬಯಸುವ ಎಲ್ಲರೂ ಇದನ್ನು ತಪ್ಪಿಸಬಾರದು.

ದೈವಾರಾಧನೆ:

ದೈವಗಳು ತುಳುನಾಡಿನ ಆರಾಧನೆಯಲ್ಲಿ ಶ್ರೇಷ್ಠವಾದ ಸ್ಥಾನಮಾನವನ್ನು ಪಡೆದಿರುವ ಶಕ್ತಿಗಳು. ಈ ದೈವಗಳ ಆರಾಧನೆಯೇ ಕರಾವಳಿಯ ಬಹುಮುಖ್ಯವಾದ ಆಚರಣೆಯಾದ ಭೂತಾರಾಧನೆ. ಸಾಮಾನ್ಯವಾಗಿ ದೈವಗಳು ಎಂದರೆ ಭೂತ, ಪ್ರೇತ, ಪಿಶಾಚಿ ಎನ್ನಲಾಗುತ್ತದೆ. ಆದರೆ ತುಳುನಾಡಿನಲ್ಲಿ ದೈವಗಳನ್ನು ನಂಬಿದವರಿಗೆ ಇಂಬು ಕೊಡುವ ದೈವೀಶಕ್ತಿಗಳು ಎಂದು ನಂಬುತ್ತಾರೆ. ನಂಬಿದವರಿಗೆ ಒಳಿತನ್ನು ಉಂಟುಮಾಡುವ, ನಂಬದವರಿಗೆ ಕೇಡು ಬಗೆಯುವ ಶಕ್ತಿಗಳು ಎಂದು ನಂಬುತ್ತಾರೆ. ತುಳುನಾಡಿನ ಕೆಲವು ಪ್ರದೇಶಗಳಲ್ಲಿ ಭೂತಾರಾಧನೆಯನ್ನು ಹಿಂದೂ ಮುಸ್ಲಿಂ ಬೇಧಭಾವವಿಲ್ಲದೆ ಜನರು ಆಚರಿಸುತ್ತಾರೆ. ಇಲ್ಲಿ 400ಕ್ಕೂ ಹೆಚ್ಚು ದೈವಗಳು ಆರಾಧನೆಗೊಳ್ಳುತ್ತದೆ. ಕೆಲವು ದೈವಗಳು ಬೇರೆ ಬೇರೆ ಪ್ರದೇಶದಲ್ಲಿ ಬೇರೆ ಬೇರೆ ಹೆಸರುಗಳಿಂದ ಕರೆಯಲ್ಪಡುವುದು ಉಂಟು. ದೇವರ ಹಾಗೆ ದೈವಕ್ಕೂ ಮಂದಿರ ಕಟ್ಟಲಾಗುತ್ತದೆ. ದೈವಗಳು ಅದೃಷ್ಟ ರೂಪದಲ್ಲಿ ಇರುತ್ತಾರೆ ಎನ್ನುವುದು ನಂಬಿಕೆ. ಕೆಲವು ಕಡೆ ಮಂಟಪದ ಮೇಲೆ ಖಡ್ಗ, ಗಂಟೆ ಇರಿಸಲಾಗುತ್ತದೆ. ಪ್ರತಿನಿತ್ಯ ಹೂವು ಮತ್ತು

ಕಂಚಿನ ಪಾತ್ರೆಯಲ್ಲಿ ನೀರು ಇಟ್ಟು ದೀಪ ಹಚ್ಚಿಡುವುದು ಪದ್ಧತಿ. ಹಬ್ಬ ಹರಿದಿನಗಳಲ್ಲಿ ಪೂಜೆ, ಸೇವೆ, ವರ್ಷಕ್ಕೆ ಒಮ್ಮೆ ಭೂತಾರಾಧನೆ ಕುಟುಂಬದಲ್ಲಿ ಇನ್ನೂ ಕೆಲವು ಹರಕೆಯ ಮೂಲಕ ''ಕೋಲ''ವನ್ನು ನಡೆಸುತ್ತಾರೆ.

ಭೂತದ ವೇಷ ಹಾಕುವವರು ಮೈಗೆ ಅಲಂಕಾರಯುತ ವೇಷ-ಭೂಷಣತೊಡುತ್ತಾರೆ. ಸ್ತ್ರೀ, ಪುರುಷಭೂತಗಳಿಗೆಪ್ರತ್ಯೇಕವಾದ ವೇಷ. ದೈವಪಾತ್ರಿಗೆ ದೈವದ ಆಹ್ವಾನ ಮಾಡಲು ಪಾರ್ದನ (ಜನಪದ ಹಾಡು – ಇದರಲ್ಲಿ ಭೂತದ ಹುಟ್ಟು, ಮಹತ್ವ, ಶೌರ್ಯ, ಸಾಹಸ ಮತ್ತು ಭೂತದ ಪ್ರಸರಣ ವಿವರಿಸುತ್ತದೆ). ಪ್ರತಿಯೊಂದು ಭೂತಕ್ಕೂ ಅದರದೇ ಆದ ಪ್ರಾರ್ಥನೆಯಿದೆ. ವಾದ್ಯವೃಂದ, ನಾದಸ್ವರ, ಕಹಳೆ ವಾದನಗಳೊಂದಿಗೆ ದೈವವು ಆಹ್ವಾನವಾಗುತ್ತದೆ. ಭಕ್ತರ ಕಷ್ಟ ಸುಖ ಮತ್ತು ಭಯವನ್ನು ದೈವವು ನಿವಾರಿಸುತ್ತದೆ. ಕೋರ್ಟು ಕಚೇರಿಯ ತೀರ್ಮಾನಕ್ಕಿಂತ ದೈವದ ಸಮಕ್ಷಮದಲ್ಲಿ ತೀರ್ಮಾನ ನಡೆಸುತ್ತಾರೆ. ನ್ಯಾಯಮೂರ್ತಿ ಸ್ಥಾನದ ದೈವದ ತೀರ್ಪು ಯಾರೂ ಮೀರುವುದಿಲ್ಲ, ಇದು ಮೂಢನಂಬಿಕೆ ಎನ್ನುವವರೇ ಹೆಚ್ಚು ಈ ಕಾಲದಲ್ಲಿ, ಆದರೆ ಕೆಲವು ಪವಾಡಗಳ ಮೂಲಕ ದೈವವು ತನ್ನ ಶಕ್ತಿ ಇದೆ ಎನ್ನುವುದು ಸಾಬೀತುಪಡಿಸುತ್ತದೆ. ಉದಾಹರಣೆಗೆ ಕೊರಗಜ್ಜರ ಪವಾಡವು ಅಗಾಧ. ಅಲ್ಲದೆ ಯಾವುದೇ ಕುಟುಂಬದ ವಿಷಯ ತಿಳಿಯದ ಪಾತ್ರಿಯು ನಮ್ಮ ಕುಟುಂಬದ ಹಲವಾರು ವಿಚಾರಗಳನ್ನು ಹೇಗೆ ತಿಳಿಸುತ್ತಾನೆಂಬುದು ವಿಚಾರಿಸತಕ್ಕದ್ದು. ನಂಬುವುದು ಬಿಡುವುದು ಅವರವರ ಇಷ್ಟವಾಗಿದೆ.

ನಾಗಾರಾಧನೆ:

ಸೃಷ್ಟಿಕರ್ತನಾದ ಬ್ರಹ್ಮದೇವರು ನಾಗಕುಲದ ಸೃಷ್ಟಿ ಮಾಡಿ ತಮ್ಮ ರಕ್ಷಣೆಗಾಗಿ ವಿಷವನ್ನು ನಾಲಿಗೆಯಲ್ಲಿ ನೀಡಿದರು ಆದರೆ ದುಷ್ಟ ಸ್ವಭಾವದ ನಾಗನು ವಿಷದಿಂದಾಗಿ ಲೋಕದಲ್ಲಿ ನಾನಾ ತರದ ತೊಂದರೆ

ನಡೆಸುತ್ತಾರೆ, ಭೂಮಿಯಲ್ಲಿ ಯಜ್ಞಕಾರ್ಯಗಳು ಕಡಿಮೆಯಾಗುವ ಸಂದರ್ಭದಲ್ಲಿ ಬ್ರಹ್ಮದೇವರು ನಾಗಕುಲ ನಾಶವಾಗಲಿ ಎಂದು ಶಾಪ ನೀಡುತ್ತಾರೆ, ಇದನ್ನು ಅರಿತ ಶೇಷ, ವಾಸುಕಿ ನಾಗರಾಜರಿಗೆ ದುಃಖ, ಹೆದರಿಕೆಯಾಗಿ, ಬ್ರಹ್ಮ ಪೂಜೆ ಮಾಡುವಲ್ಲಿ ಯಾಗಕ್ಕೆ ಸಹಕಾರ ನೀಡುತ್ತಾರೆ. ಇದರಿಂದ ಸಂತೋಷಗೊಂಡ ದಿನವೇ ನಾಗರ ಪಂಚಮಿ. ಈ ದಿನದಂದು ಬ್ರಹ್ಮ ವಿಶೇಷ ವರ ನೀಡುತ್ತಾರೆ. ಸ್ವರಕ್ಷಣೆಗಾಗಿ ನೀಡಿದ ವಿಷವನ್ನು ದುರುಪಯೋಗ ನಡೆಸದೆ ಪ್ರಕೃತಿ ರಕ್ಷಿಸಿ ಎಂದು ಹೇಳಿದ ಮಹತ್ವದ ದಿನವನ್ನು ನಾಗರ ಪಂಚಮಿ ಎಂದು ಆಚರಿಸಲಾಗುತ್ತದೆ. ಸುಖ-ಶಾಂತಿ ಭೂಮಿಯಲ್ಲಿ ನೆಲೆಸಲಿ ಎಂದು ಕೇಳಿಕೊಳ್ಳುತ್ತಾರೆ.

ಶೇಷ, ವಾಸುಕಿ ದೇವರು ತನ್ನ ಸಾವಿರ ತಲೆಯಲ್ಲಿ ಇಡೀ ಭೂಮಿಯನ್ನು ಹೊತ್ತುಕೊಂಡಿದ್ದಾರೆ ಎನ್ನುವುದಾಗಿ ನಂಬಿಕೆ, ಮಾನವನು ಕೃತಜ್ಞತೆಯ ಪ್ರತೀಕವಾಗಿ ನಾಗನನ್ನು ಆರಾಧಿಸುತ್ತಾನೆ. ತಮ್ಮ ಕುಟುಂಬದ ಮೂಲಸ್ಥಾನಕ್ಕೆ ಹೋಗಿ ತಂಬಿಲ, ಆಶ್ಲೇಷ ಬಲಿ, ಹಾಲು, ತೆಂಗಿನಕಾಯಿ (ಬೊಂಡ) ನೀಡಿ ಆರೋಗ್ಯ, ಸಂಪತ್ತು, ಸಂತತಿ, ಆಯುಷ್ಯ, ಸೌಭಾಗ್ಯ, ಶ್ರೇಯಸ್ಸು ನೀಡು ಎಂದು ಬೇಡಿಕೊಳ್ಳುವ ಭಕ್ತರು ಇಂದಿಗೂ ನಾಗನ ಆರಾಧನೆಯನ್ನು ಭಕ್ತಿಯಿಂದ ನಡೆಸಿಕೊಂಡು ಬಂದಿದ್ದಾರೆ.

ಹುಲಿವೇಷ (ಪಿಲಿವೇಷ):

ಕರಾವಳಿಯಲ್ಲಿ ಹುಲಿವೇಷವೆಂದರೆ ಎಲ್ಲರಿಗೂ ಹೊಸ

ಹುರುಪು. ಇದನ್ನು ಹೆಚ್ಚಾಗಿ ಕೃಷ್ಣ ಜನ್ಮಾಷ್ಟಮಿ, ದಸರಾ, ಗಣೇಶ ಚೌತಿಯ ಸಂದರ್ಭದಲ್ಲಿ ಕುಣಿಯುತ್ತಾರೆ. ತ್ರಾಸೆಯ ಶಬ್ದಕ್ಕೆ ಕಪ್ಪು ಪಟ್ಟಿ ಧರಿಸಿ ಕುಣಿಯುವ ಕುಣಿತ ಸುಲಭದ ಮಾತಲ್ಲ. ಇದು ಕೇವಲ ನೃತ್ಯವಲ್ಲದೆ ಇದಕ್ಕೆ ದೈಹಿಕ ಶ್ರಮದ ಅಗತ್ಯವಿದೆ. ಹಲವಾರು ಕಸರತ್ತು ನಡೆಸುತ್ತಾರೆ. ಹಳದಿ-ಕಪ್ಪು, ಬಿಳಿ-ಕಪ್ಪು , ಪೂರ್ತಿ ಕಪ್ಪು ಬಣ್ಣ ಕಾಣ ಸಿಗುತ್ತದೆ. ಇತ್ತೀಚೆಗೆ ಹಸಿರು ಬಣ್ಣದ ಹುಲಿವೇಷಗಳು ಕಾಣಸಿಗುತ್ತವೆ. ಮೊದಲು 3-4 ಹುಲಿಗಳು ಇರುತ್ತಿದ್ದವು ಈವಾಗ ನೂರಕ್ಕೂ ಹೆಚ್ಚು ಹುಲಿಗಳು ಒಟ್ಟಿಗೆ ಕುಣಿಯುತ್ತವೆ, ಹೆಣ್ಣು ಹುಲಿವೇಷವು ಹೆಚ್ಚಾಗಿ ಪ್ರಚಲಿತದಲ್ಲಿದೆ. ಈ ನೃತ್ಯ ರಾಕ್ಷಸರ ಸಂಹಾರದ ಖುಷಿಗೆ ಅಥವಾ ಹರಕೆಯ ತೀರಿಕೆಯ ಜೊತೆ ಕಲಾ ಪ್ರದರ್ಶನ ನೀಡಲಾಗುತ್ತದೆ. ಹುಲಿವೇಷ ನಮ್ಮ ಕರಾವಳಿಯ ಹೆಮ್ಮೆ. ಮಕ್ಕಳಿಂದ ಹಿಡಿದು ವೃದ್ಧರವರೆಗೆ ಎಲ್ಲರನ್ನು ತನ್ನೆಡೆಗೆ ಆಕರ್ಷಿಸುತ್ತದೆ.

ಕಂಚಿಲ:

ಬಾಣಂತಿಯ ಸಂದರ್ಭದಲ್ಲಿ ಅಥವಾ ಮಕ್ಕಳಿಗೆ ಉಷಾರಿಲ್ಲದ ಸಂದರ್ಭದಲ್ಲಿ ಹರಕೆ ಹೇಳುವುದು. ಕಾಲ ಕೂಡಿ ಬಂದಂತೆ ಹರಕೆ ತೀರಿಸುವುದು, ಮಕ್ಕಳನ್ನು ಅಲಂಕರಿಸಿ ಹೊಸ ಉಡುಪು ಧರಿಸಿ ಗರಡಿ ನೇಮೋತ್ಸವದ ಸಂದರ್ಭದಲ್ಲಿ ಮಕ್ಕಳನ್ನು ರಾತ್ರಿ ಇಡೀ ಕುಳ್ಳಿರಿಸುವುದು ಸಂಪ್ರದಾಯ. ಹೂವುಗಳಿಂದ ಅಲಂಕೃತ ಮಕ್ಕಳನ್ನು ನೋಡುವುದು ಚಂದ, ದೇವರಿಗೆ ಬಾಳೆಹಣ್ಣಿನ ಗೊನೆ ಅರ್ಪಿಸುವುದು ವಾಡಿಕೆ, ಈ ಪದ್ಧತಿಯನ್ನು ಬಿಲ್ಲವರು ಹೆಚ್ಚಾಗಿ ಅನುಸರಿಸುತ್ತಾರೆ. ಈ ಸಂದರ್ಭದಲ್ಲಿ ಕೆಲವು ಕ್ರಮಗಳನ್ನು ಅನುಸರಿಸಬೇಕಾಗುತ್ತದೆ. ಮಾಂಸಾಹಾರ ತ್ಯಜಿಸುವಿಕೆ, ಮಕ್ಕಳು ಧರಿಸುವ ಎಲ್ಲಾ ಉಡುಗೆ-ತೊಡುಗೆಗಳು ಹೊಸದಾಗಿಯೇ ಇರಬೇಕು ಹೀಗೆ ಹಲವಾರು ಪದ್ಧತಿಗಳಿವೆ.

ಗಡಿಯಾರ :

ಇದು ಕೈಗೆ ಹಾಕುವ ವಾಚ್ ಅಲ್ಲ, ಇದೊಂತರ ಪದ್ಧತಿ. ಮಾರಣ ಕಟ್ಟೆ ಪೂಜೆಯ ಸಂದರ್ಭದಲ್ಲಿ ಅಲ್ಲಿನ ಪೂಜೆಯ ಪ್ರಸಾದ ಮನೆಗೆ ತಂದು ಕೋಳಿ ಕ್ಯೊದು ಊಟ ಬಡಿಸಿ ಇಡುವುದು ಸಂಪ್ರದಾಯ. ಇದನ್ನು ಮನೆಯಲ್ಲಿನ ಹಿರಿಯರು ನಡೆಸುತ್ತಾರೆ. ಈ ಸಂದರ್ಭದಲ್ಲಿ ಇಡೀ ಕುಟುಂಬ ಒಂದುಗೂಡುವುದೆ ಖುಷಿಯ ಸಂಗತಿ.

ಅಜ್ಜಿ ಗಿಡ್‌ಪುನ್ (ಅಜ್ಜಿ ಗಿಡ್ಡಿಸುವುದು):

ಸೋಣ ಮಾಸದಲ್ಲಿ ಹೊಸಲಿಗೆ ಹೂ ಇಟ್ಟು ಅಜ್ಜಿಯನ್ನು ಒಳಗೆ ಕರೆಯುವುದು ವಾಡಿಕೆ. ಇಲ್ಲಿ ಅಜ್ಜಿ ಕೇವಲ ಕಲ್ಪನೆಯಲ್ಲದೆ ಮನೆಯಲ್ಲಿನ ಅಜ್ಜಿಯನ್ನೇ ಬರಮಾಡಿಕೊಳ್ಳುವುದು ಅಚ್ಚರಿ, 3 ದಿನಗಳ ಕಾಲ ಪೂಜೆ ಇರುತ್ತದೆ. ಕನ್ಯಾ ಮಾಸ ಅಥವಾ ಸಂಕ್ರಾಂತಿಯೊಳಗೆ ಅಜ್ಜಿ 'ಗಿಡ್ಡಿ'ಸಬೇಕು. ರಾತ್ರಿ ಹೊತ್ತಿನಲ್ಲಿ ಬಾಳೆಎಲೆಯ ಮೇಲೆ ಅನ್ನ, ಸಾರು, ದೋಸೆ ಇಟ್ಟು ರಾತ್ರಿಯಲ್ಲಿ ಕೇವಲ ದೀಪವಿಟ್ಟು ಪೂಜಿಸಿ ನಂತರ ಅಜ್ಜಿ ದೋಸೆ ತಗೊಂಡು ಹೋಗ್ತಾರೆ. ಒಳಗೆ ಒಬ್ಬರು ದಂಟೆ ಹಿಡಿದು ನಿಲ್ಲುತ್ತಾರೆ. ಅಜ್ಜಿ ಹೋಗುವಾಗ ''ಅರಿಗ್ ಪೊಳಿ ಕೊರ್ಲೆ ಮಗ, ಬಾರಗ್ ಪೊಳಿ ಕೊರ್ಲೆ ಮಗ..'' ಹೇಳುತ್ತಾ ಹೋಗುತ್ತಾರೆ. ಇದು ಕೃಷಿ ಸಂಸ್ಕೃತಿಯ ಹಿನ್ನೆಲೆಯಲ್ಲಿ ಹುಟ್ಟಿಕೊಂಡಿರುವ ಒಂದು ಜನಪದ ಆಚರಣೆ.

ಇಷ್ಟೇ ಅಲ್ಲದೆ ಆಟಿ ಸಂದರ್ಭದಲ್ಲಿ ಕಹಿ ಮದ್ದಿನ ಸೇವನೆ, ಕೆಸರ್ ಡೊಂಜಿ ದಿನ, ಕೋರಿದ ಕಟ್ಟ , ಹೀಗೆ ಹಲವಾರು ಆಚರಣೆ. ಕಲಿ, ಗುಜ್ಜದ ಗಟ್ಟಿ, ಅರಶಿನ ಗಟ್ಟಿ, ಪುಂಡಿ, ಉಪ್ಪುದೋಸೆ (ಓಡ್ ದೋಸೆ), ನೀರು ದೋಸೆ, ಪತ್ರೋಡೆ, ಲಾಂಬು, ಮೂಡೆ, ಶ್ಯಾಮಿಗೆ, ಅಪ್ಪದಡ್ಡೆ, ಗಂಜಿ ಊಟ, ಮೀನು ಊಟ, ರಾಗಿ ಗಂಜಿ ಹೀಗೆ ಹಲವಾರು ತಿನಿಸು ಕರಾವಳಿಯ ಭಾಗದಲ್ಲಿ ಪ್ರಸಿದ್ಧಿಯಾಗಿದೆ.

ಮೂಢನಂಬಿಕೆಯೊ ಅಥವಾ ಸಮಯದ ವ್ಯರ್ಥ ಎನ್ನುವುದರಿಂದಲೋ ನಮ್ಮ ಸಂಸ್ಕೃತಿ ಮಾಸಿ ಹೋಗುತ್ತಿದೆ. ಈ ಆಚರಣೆಯಿಂದಾಗಿಯಾದರೂ ಕುಟುಂಬಗಳು ಒಂದೆಡೆ ಸೇರುತ್ತವೆ ಎನ್ನುವುದು ಖುಷಿ. ಹಿರಿಯರ ರೀತಿ ರಿವಾಜುಗಳು ಕಿರಿಯರಿಗೆ ತಿಳಿದು ಒಳ್ಳೆಯ ಮಾರ್ಗದಲ್ಲಿ ನಡೆದು ಸದಾ ಹೀಗೆ ಇರಲಿ ನಮ್ಮ ಸಂಸ್ಕೃತಿ ಎನ್ನುವುದೊಂದೇ ಕೋರಿಕೆ.

●

ವಿದ್ಯಾರ್ಥಿಗಳಲ್ಲಿ ಸರಳತೆ ಮತ್ತು ಉದಾತ್ತ ಚಿಂತನೆಗಳಿರಬೇಕು. ಪರಿಶುದ್ಧ ಜೀವನ ನಡೆಸುವುದೇ ವಿದ್ಯಾರ್ಥಿಗಳ ಆದರ್ಶವಾಗಿರಬೇಕು - **ಗಾಂಧೀಜಿ.**

ವ್ಯಕ್ತಿ ಪರಿಚಯ

ವಿದ್ಯಾವಾಚಸ್ಪತಿ ಶ್ರೀ ಬನ್ನಂಜೆ ಗೋವಿಂದಾಚಾರ್ಯರು

✍ **ಕೆ. ಎಸ್. ಸುಮುಖ ರಾವ್,** ಪ್ರಥಮ ಬಿ.ಎಸ್ಸಿ (ಬಿಝುಡ್‌ಸಿ)

''ಜಯತಿ ಪರಾಶರ ಸೂನುಃ'' ಎಂಬ ಬಾದರಾಯಣರ ಸ್ತುತಿಯಿಂದ ಪ್ರಾರಂಭಿಸುವ ಪ್ರವಚನವನ್ನು ಪ್ರಾಯಶಃ ನಾವು ಕೇಳಿರಬಹುದು. 2 ಆಗಸ್ಟ್ 1936ರಂದು ಉಡುಪಿಯ ಅಂಬಲಪಾಡಿಯ ಬನ್ನಂಜೆಯಲ್ಲಿ ತರ್ಕಕೇಸರಿ ನಾರಾಯಣಾಚಾರ್ಯರ ಮಗನಾಗಿ ಜನಿಸಿದ ಇವರು ಅಧ್ಯಾತ್ಮ ಮತ್ತು ಭಾರತೀಯ ಸಾಹಿತ್ಯಕ್ಕೆ ಸಿಕ್ಕ ಅಪರಂಜಿಯಾದರು. ತಂದೆ ಸಂಸ್ಕೃತ ಪ್ರಾಧ್ಯಾಪಕರು. ಇವರು ಮಠದ (ಶ್ರೀಕೃಷ್ಣ ಮಠ) ಯತಿಗಳಿಗೆ ಪಾಠ ಹೇಳುತ್ತಿದ್ದರು. ಇವರ ಮಗ ಗೋವಿಂದ ತಮ್ಮ ಸಂಪ್ರದಾಯದಲ್ಲಿನ ಅತೀ ಮಡಿವಂತಿಕೆಯನ್ನು ದೂರತೊಡಗಿದ, ತಾನು ಕಚ್ಚೆ ಉಡದೆ ಪಂಚೆಯುಟ್ಟು ಜುಟ್ಟು ಕತ್ತರಿಸಿಕೊಂಡು ಅತೀ ಮಡಿವಂತಿಕೆಯನ್ನು ಮಾಡುವವರನ್ನು ವಿರೋಧಿಸಿ, ಇದರ ಕಾರಣದಿಂದ ಆಗುತ್ತಿದ್ದ ವೈದಿಕರ ಜ್ಞಾನ ಸಂಪತ್ತಿನ ನಾಶವನ್ನು ತಡೆಯುವ ಬುನಾದಿಯಾದರು. ಶಾಲೆಯಲ್ಲಿನ ಸಂಸ್ಕೃತ ಅಭ್ಯಾಸ ಹಿಡಿಸದೆ ಪರೀಕ್ಷೆಯಲ್ಲಿ ಅನುತ್ತೀರ್ಣರಾದರು. ಆದರೆ ಸ್ವಾಧ್ಯಾಯದ ಹುಚ್ಚು ನಿಲ್ಲಲಿಲ್ಲ. ತನ್ನ ತಂದೆಯಿಂದ, ಮಠದ ಹಿರಿಯ ಯತಿವರ್ಯರಿಂದ ಹಾಗೂ ಅನೇಕ ಸಂಸ್ಕೃತ ವಿದ್ವಾಂಸರಿಂದ ಸಲಹೆ ಹಾಗೂ ಜ್ಞಾನ ಗಳಿಸಿ ತಮ್ಮ 45 ವರ್ಷದ ವಿದ್ಯಾರ್ಜನೆಯನ್ನು ಮುಗಿಸಿದರು. ಇವರ ವಿದ್ವತ್ತಿಗೆ ನೆಚ್ಚಿದ ಹಲವರು ಇವರನ್ನು ಪತ್ರಕರ್ತರನ್ನಾಗಿ, ಸಂಸ್ಕೃತ ಸಂಕಲನಕಾರರನ್ನಾಗಿ, ಸಿನೆಮಾ ನಿರ್ದೇಶಕರನ್ನಾಗಿಯೂ ಮಾಡಿದರು. ಭಂಡಾರಕೇರಿ ಮಠದ ಶ್ರೀ ವಿದ್ಯಾಮಾನ್ಯತೀರ್ಥರು ಆಚಾರ್ಯರನ್ನು ತಮ್ಮ ನೆಚ್ಚಿನ ಶಿಷ್ಯನೆಂದು ತಾವೇ ಹೇಳಿಕೊಂಡಿದ್ದಾರೆ. ಶ್ರೀ ಪೇಜಾವರ ಮಠದ ವಿಶ್ವೇಶತೀರ್ಥರು ಆಚಾರ್ಯರ ನೆಚ್ಚಿನ ಸಹಪಾಠಿಗಳಾಗಿದ್ದರು. ಹೀಗೆ ವಿದ್ಯಾಮಾನ್ಯರಿಂದ ದತ್ತವಾದ ಎರಡು ರತ್ನಗಳು – ವಿಶ್ವೇಶ ತೀರ್ಥರು ಹಾಗೂ ಗೋವಿಂದಾಚಾರ್ಯರು.

ಆಚಾರ್ಯರು ಮಾಧ್ವರು ದ್ವೈತ ಸಿದ್ಧಾಂತಿಕರು ಎಂದರೆ ತತ್ವವಾದಿಗಳು. ಇವರು ಶ್ರೀ ಆದಿಶಂಕರರ ಸಿದ್ಧಾಂತ (ಮಾಯಾವಾದ), ಕೃತಿಗಳನ್ನು, ಶ್ರೀ ರಾಮಾನುಜರ ತತ್ವ, ಕೃತಿ ಗ್ರಂಥಗಳನ್ನು ಹಾಗೂ ಶ್ರೀ ಮಧ್ವರ ತತ್ವವಾದ ಮತ್ತು ಅವರ ಗ್ರಂಥಗಳನ್ನೆಲ್ಲ ಅಧ್ಯಯನ ಮಾಡಿದವರು. ಭಾರತೀಯ ಇತಿಹಾಸ, ರಾಮಾಯಣ, ಮಹಾಭಾರತ, ವೇದಗಳು, ಉಪನಿಷತ್ತುಗಳು, ಭಗವದ್ಗೀತೆ ಹಾಗೂ ಪುರಾಣಗಳನ್ನೂ ಚೆನ್ನಾಗಿ ಅಧ್ಯಯನ ಮಾಡಿದವರು. ಇಷ್ಟೊಂದು ಜ್ಞಾನ ಸಂಪತ್ತನ್ನು ಹೊತ್ತು ಪ್ರವಚನಕಾರರಾಗಿ ಮೂಡಿ ಬಂದರು. ಇವರು ಬರೇ ಸಂಸ್ಕೃತ ಸಾಹಿತ್ಯವನ್ನು ಮಾತ್ರ ಶ್ರೀಮಂತಗೊಳಿಸಲಿಲ್ಲ. ನಮ್ಮ ಕನ್ನಡ ಸಾಹಿತ್ಯಕ್ಕೂ ದೊಡ್ಡ ಕೊಡುಗೆ ನೀಡಿದ್ದಾರೆ. ಇದಕ್ಕೆ ಉತ್ತಮ ದೃಷ್ಟಾಂತವೆಂದರೆ, ಇವರು ಕಾಳಿದಾಸನ 'ಅಭಿಜ್ಞಾನ ಶಾಕುಂತಲಾ' ಎಂಬ ಸಂಸ್ಕೃತ ಕಾವ್ಯವನ್ನು 'ನೆನಪಾದಳು ಶಾಕುಂತಲೆ' ಎಂಬ ಕನ್ನಡ ಶೀರ್ಷಿಕೆಯೊಂದಿಗೆ ಪದ್ಯರೂಪದಲ್ಲಿ ರಚಿಸಿದ್ದಾರೆ. ಹೀಗೆ ಅನೇಕ ಸಂಸ್ಕೃತ ಕಾವ್ಯ ಕೃತಿಗಳನ್ನು ಸ್ವಚ್ಛವಾಗಿ, ಸುಂದರವಾಗಿ ಕನ್ನಡದಲ್ಲಿ ರಚಿಸಿ ಕನ್ನಡ ಸಾಹಿತ್ಯಕ್ಕೆ ಉತ್ತಮ ಹಾಗೂ ಅಪೂರ್ವ ಕೊಡುಗೆಯನ್ನು ನೀಡಿದ್ದಾರೆ.

ಶ್ರೀ ಶಂಕರಾಚಾರ್ಯರ ಹಾಗೂ ಮಧ್ವಾಚಾರ್ಯರ ಜೀವನದ (ಸಾಧನೆಯ) ಕುರಿತು ಚಿತ್ರಕಥೆ (ಸಿನೆಮಾ)ಯನ್ನು ಸಂಸ್ಕೃತ ಹಾಗೂ ಕನ್ನಡ ಭಾಷೆಗಳಲ್ಲಿ ಅತೀ ಚೊಕ್ಕವಾಗಿ ನಿರ್ದೇಶಿಸಿದ್ದಾರೆ.

ಇನ್ನು ಆಚಾರ್ಯರ ಸಾಹಿತ್ಯ ಕೃತಿಗಳ ಬಗ್ಗೆ ಹೇಳುವುದಾದರೆ ಅವರ ಸಾಹಿತ್ಯ ತುಂಬಾ ಮಧುರ. ಓದಿದರೆ ಅದರ ಚಿತ್ರಣ ಕಣ್ಣಮುಂದೆ ಹಾದು ಹೋಗುತ್ತದೆ. ಮಹಾಶ್ವೇತೆ, ಮುಗಿಲ ಮಾತು, ಸಾರಸ್ವತ ಸಂಪತ್ತು, ಋತುಗಳ ಹೆಣಿಗೆ, ಹೇಳದೆ ಉಳಿದದ್ದು, ಪರಾಶರ ಕಂಡ ಪರತತ್ವ, ಅಂಕೆಯಲ್ಲಿ ಅಧ್ಯಾತ್ಮ, ಆನಂದತೀರ್ಥರ ಜಯಂತೀಕಲ್ಪ, ಕೃಷ್ಣಮಾಲಾ ಮಂಗಲಾಷ್ಟಕಮ್, ಪಂಚಸೂಕ್ತಗಳು, ಶ್ರೀ ವಿಷ್ಣುಸಹಸ್ರನಾಮ – ಭಾಷ್ಯ, ಮತ್ತೆ ರಾಮನ ಕಥೆ, ಕನಕೋಪನಿಷತ್ತು, ಪುರಂದರೋಪನಿಷತ್, ಭಗವಂತನ ನಲ್ನುಡಿ, ಪುರುಷ ಸೂಕ್ತ, ಶ್ರೀಸೂಕ್ತ ಅರ್ಥ, ಪ್ರಾಣ–ಸೂತ್ರಗಳು, ತಲವಕಾರೋಪನಿಷತ್, ಇವೇ ಮೊದಲಾದ ಕನ್ನಡ ಗ್ರಂಥಗಳನ್ನು (ಕೃತಿಗಳನ್ನು) ರಚಿಸಿದ್ದಾರೆ. ಆಚಾರ್ಯ ಮಧ್ವ (Acharya Madhva),

ಕಾಮಶಾಸ್ತ್ರ (Kamashastra), ಕೃಷ್ಣನ ಉಡುಪಿ (Udupi of Lord Krishna) ಹೀಗೆ ಹಲವು ಆಂಗ್ಲ ಭಾಷಾ ಕೃತಿಗಳನ್ನು ರಚಿಸಿದ್ದಾರೆ. ಶ್ರೀ ಮಹಾಭಾರತ ತಾತ್ಪರ್ಯಂ, ಶತರುದ್ರೀಯಂ, ವಾಯುಸ್ತುತಿಃ, ಬ್ರಹ್ಮಸೂತ್ರ-ತತ್ವ ಚಂದ್ರಿಕಾ ಹೀಗೆ ಅನೇಕ ಸಂಸ್ಕೃತ ಗ್ರಂಥಗಳನ್ನು ರಚಿಸಿದ್ದಾರೆ. ಇದರಿಂದಲೇ ನಮಗೆ ಆಚಾರ್ಯರ ಅಪಾರ ಜ್ಞಾನದ ಕುರಿತು ತಿಳಿದು ಬಿಡುತ್ತದೆ. ಅವರು ರಚಿಸಿದ ಕೃತಿಗಳು ಒಂದೆರಡಲ್ಲ ಹಲವು.

ಶ್ರೀ ಮಧ್ವಾಚಾರ್ಯರ ಮೂಲ ಗ್ರಂಥವಾದ 'ಸರ್ವಮೂಲ ಗ್ರಂಥಾಃ' ಎಂಬ ಸಂಸ್ಕೃತ ಭಾಷೆಯ ತುಳುಲಿಪಿ ಗ್ರಂಥವನ್ನು ಹೃಷಿಕೇಶ ತೀರ್ಥರು ತಾಡವಾಲೆಯಲ್ಲಿ ಬರೆದಿಟ್ಟಿದ್ದರು. ಇದನ್ನು ಹೊರತೆಗೆಸಿ ಅದರ ಸಂಪಾದನೆ (editing) ಮಾಡಿ ಮಧ್ವರ ಶುದ್ಧ ಪಾಠವನ್ನು ಮಾಧ್ವರಿಗೆ ಪರಿಚಯಿಸಿದವರು ಗೋವಿಂದಾಚಾರ್ಯರು. ಆದ್ದರಿಂದಲೇ ಡಾ|| ಶತಾವಧಾನಿ ರಾಮನಾಥಾಚಾರ್ಯರು ಇವರನ್ನು ಶುದ್ಧ ಪಾಠದ ಬುದ್ಧ! ಎಂದೇ ಹೊಗಳಿದ್ದಾರೆ. ಈ ಎಲ್ಲ ಕಾರಣಗಳಿಂದ ಆಚಾರ್ಯರಿಗೆ "ವಿದ್ಯಾವಾಚಸ್ಪತಿ" ಎಂಬ ಬಿರುದನ್ನು ಶ್ರೀಕೃಷ್ಣ ಮಠದ ಪರವಾಗಿ ವಿಶ್ವೇಶತೀರ್ಥರು ನೀಡಿ ಗೌರವಿಸಿದ್ದಾರೆ. ಭಾರತ ಸರ್ಕಾರವು ಆಚಾರ್ಯರಿಗೆ 2009ರಲ್ಲಿ ಪದ್ಮಶ್ರೀ ಪುರಸ್ಕಾರವನ್ನು ನೀಡಿ ಗೌರವಿಸಿದೆ. ಇದು ಸರ್ಕಾರದಿಂದ ಅಧ್ಯಾತ್ಮ ಸಾಹಿತಿಗೆ (ಸಾಹಿತ್ಯಕ್ಕೆ) ದೊರೆತ ಮೊದಲ ಮಹೋನ್ನತ ಪುರಸ್ಕಾರವಾಗಿದೆ. ನಟ ಡಾ|| ವಿಷ್ಣುವರ್ಧನರವರ ಅಧ್ಯಾತ್ಮ ಗುರುವಾಗಿದ್ದರಂತೆ ಆಚಾರ್ಯ ಗೋವಿಂದರವರು. ಜ್ಞಾನಪೀಠ ಪುರಸ್ಕೃತ ದ.ರಾ. ಬೇಂದ್ರೆಯವರನ್ನು ಕನ್ನಡ ಸಾಹಿತ್ಯ ಲೋಕಕ್ಕೆ ಪರಿಚಯಿಸಿದ ವ್ಯಕ್ತಿ ಇವರೇ. ಭಾರತದಲ್ಲಿ ಮಾತ್ರವಲ್ಲ ಇತರ ಪಾಶ್ಚಾತ್ಯ ದೇಶಗಳನ್ನು ಸುತ್ತಿ ಭಾರತೀಯ ಸಂಸ್ಕೃತಿ, ಅಧ್ಯಾತ್ಮ ಸಾಹಿತ್ಯ, ಸಿದ್ಧಾಂತಗಳ ಬಗೆಗೆ ಪ್ರವಚನಗಳನ್ನು ನೀಡಿದ್ದಾರೆ. ವೇದಗಳಲ್ಲಿ ಮತ್ತು ಇತರ ಅಧ್ಯಾತ್ಮ ಸಾಹಿತ್ಯಗಳಲ್ಲಿ ಲಭಿಸುವ ವೈಜ್ಞಾನಿಕ ಸಂಗತಿಗಳನ್ನು, ಜ್ಞಾನವನ್ನು ತಿಳಿಸಿದ್ದಾರೆ.

ಆಚಾರ್ಯರ ವೈಶಿಷ್ಟ್ಯವೆಂದರೆ ಪ್ರವಚಿಸುವಾಗ ಚೀಟಿ ಅಥವಾ ಪುಸ್ತಕದ ಸಹಾಯವಿಲ್ಲದೆ ಸರಾಗವಾಗಿ ವೇದೋಪನಿಷತ್ತುಗಳ, ಇತಿಹಾಸ ಪುರಾಣಾದಿ ಶ್ಲೋಕ-ಮಂತ್ರಗಳನ್ನು ಅವುಗಳ ಅರ್ಥದೊಂದಿಗೆ ಪ್ರತಿಯೊಬ್ಬರೂ ಅರ್ಥವಿಸಿಕೊಳ್ಳುವ ರೀತಿಯಲ್ಲಿ ತಿಳಿಸುತ್ತಿದ್ದರು. ಇವರಲ್ಲಿ ಅದೆಂಥಾ ಸ್ಮೃತಿ ಶಕ್ತಿ!!

ಈಶಾವಾಸ್ಯ ಪ್ರತಿಷ್ಠಾನ, ಅಂಬಲಪಾಡಿಯಿಂದ ಆಚಾರ್ಯರು ರಚಿಸಿರುವ ಕೃತಿಗಳ ಪ್ರತಿಗಳು ಮುದ್ರಣವಾಗಿವೆ. ಇವರ ಪ್ರವಚನದ ವೀಡಿಯೋಗಳು 'ಕನ್ನಡ ಪ್ರವಚನ TV' ಹಾಗೂ 'ಬನ್ನಂಜೆ ಉವಾಚ' ಎಂಬ 'YouTube'ನ ಚಾನಲ್‌ಗಳಲ್ಲಿ ಹೆಚ್ಚಾಗಿ ದೊರೆಯುವವು. ಇವರ ಪ್ರವಚನಗಳಲ್ಲಿ ಅತೀ ಜನಪ್ರಿಯವಾದದ್ದು 'ಭಾಗವತ ಪುರಾಣ' ಹಾಗೂ ವಿದುರ ನೀತಿಯ ಕುರಿತು ಮಾಡಿದ ಪ್ರವಚನಗಳು. ಶ್ರೀ ಮಧ್ವಾಚಾರ್ಯರ ವಿಶಿಷ್ಟ ಕೊಡುಗೆಗಳನ್ನು (exclusive contributions) ಮೊದಲ ಬಾರಿಗೆ ವಿನೂತನವಾಗಿ ಪರಿಚಯಿಸಿದ ನೈಜ ಮಾಧ್ವ ಗೋವಿಂದಾಚಾರ್ಯರು. ಅವರ ಪುತ್ರಿ ವೀಣಾ ಬನ್ನಂಜೆ ಕೂಡ ಕನ್ನಡ ಸಾಹಿತ್ಯದಲ್ಲಿ ಸಾಧಕರು, ಭಾಷಣಗಾರ್ತಿ.

ಆಚಾರ್ಯರು 13 ಡಿಸೆಂಬರ್ 2020ರಲ್ಲಿ ಅಂಬಲಪಾಡಿಯ ತಮ್ಮ ಸ್ವಗೃಹದಲ್ಲಿ ನಿಧನರಾದರು. ಇವರ ಸಾಹಿತ್ಯ ಸಾಧನೆಯನ್ನು ಮನಗಂಡ ಉಡುಪಿ ಶಾಸಕ ರಘುಪತಿ ಭಟ್‌ರವರು ಉಡುಪಿ ಜಿಲ್ಲಾ ಗ್ರಂಥಾಲಯಕ್ಕೆ ಗೋವಿಂದಾಚಾರ್ಯರ ಹೆಸರನ್ನು ಇಡಲು ಸರ್ಕಾರಕ್ಕೆ ಸೂಚಿಸಿದ್ದಾರೆ (27-08-2021ರಂದು).

84 ವರ್ಷಗಳ ಕಾಲ ತಮ್ಮನ್ನು ತಾವು ಸಂಸ್ಕೃತ ಹಾಗೂ ಕನ್ನಡ ಸಾಹಿತ್ಯ ಲೋಕಕ್ಕೆ ಮುಡಿಪಾಗಿರಿಸಿ, ಸಾರ್ಥಕ ಜೀವನವನ್ನು ನಡೆಸಿ, ಸಂಸ್ಕೃತ ಮತ್ತು ಕನ್ನಡ ಸಾಹಿತ್ಯಕ್ಕೆ ಅಪೂರ್ವ ಕೊಡುಗೆಗಳನ್ನು ನೀಡಿದ ಆಚಾರ್ಯರಿಗೆ ನಾವೆಲ್ಲರು ಋಣಿಗಳು. ಇಂಥಾ ಜ್ಞಾನಿಗಳು ನಮ್ಮ ನಾಡಲ್ಲಿ ಇನ್ನು ಮುಂದೂ ಜನ್ಮತಾಳಲಿ. ನಮ್ಮ ಸಾಹಿತ್ಯಲೋಕವನ್ನು ಇನ್ನೂ ಶ್ರೀಮಂತಗೊಳಿಸಲಿ ಎಂದು ಪ್ರಾರ್ಥಿಸೋಣ. ಆಚಾರ್ಯರಿಂದ ನಾವು ತಿಳಿದುಕೊಳ್ಳಬೇಕಾದ ಸಂಗತಿಗಳು ಅನಂತ ಹಾಗೇ ಅವರ ಬಗ್ಗೆ ನಾನು ತಿಳಿಸಬೇಕಾದ ಸಂಗತಿಗಳೂ ಬಹಳ ಇವೆ. ನನ್ನ ಮತಿಯ ಮಿತಿ ಇಷ್ಟು ಅಷ್ಟೇ.. ಓದುಗರು ಆಚಾರ್ಯರ ಬಗ್ಗೆ ಅಂತರ್ಜಾಲ ಅಥವಾ ಪುಸ್ತಕಗಳ ಮಾಧ್ಯಮಗಳಿಂದ ಇನ್ನೂ ತಿಳಿಯಲಿ ಎಂದು ಇಚ್ಛಿಸುತ್ತೇನೆ.

||ಶ್ರೀ ಗುರುಭ್ಯೋ ನಮಃ||

●

ವಿದ್ಯೆಯೊಂದಿಗೆ ಆದರ್ಶ ಗುಣಗಳು ವಿದ್ಯಾರ್ಥಿಗಳಲ್ಲಿ ಬಾರದಿದ್ದರೆ ಆ ಓದು ವ್ಯರ್ಥ - **ಪ್ರೇಮಚಂದ**

* * *

ವಿದ್ಯಾರ್ಥಿಗಳಿಗೆ ಆತ್ಮದರ್ಶನ ಮಾಡಿಸಿ ಬಾಳನ್ನು ಬೆಳಗಿಸುವುದೇ ಶಿಕ್ಷಣ ಸಂಸ್ಥೆಗಳ ಕರ್ತವ್ಯ - **ಡಾ. ರಾಧಾಕೃಷ್ಣನ್**

ಸಂದರ್ಶನ

ನಮ್ಮ ನಡುವಿನ ಜನಪದ ವೈದ್ಯ - ನಿಟ್ಟೂರು ಶ್ರೀನಿವಾಸ ಪೂಜಾರಿ

✍ **ದೀಪಾಲಿ ಕೋಟ್ಯಾನ್, ಅನನ್ಯ ಹೆಗ್ಡೆ,** ತೃತೀಯ ಬಿ.ಕಾಂ.

ಭಾರತೀಯ ವೈದ್ಯ ಪದ್ಧತಿಗೆ ಸಾವಿರಾರು ವರ್ಷಗಳ ಪರಂಪರೆ ಹಾಗೂ ಇತಿಹಾಸವಿದೆ. ಆಧುನಿಕ ಆಲೋಪತಿ ಚಿಕಿತ್ಸಾ ವಿಧಾನ ಬರುವುದಕ್ಕೆ ಪೂರ್ವದಲ್ಲಿ ನಮ್ಮ ಹಿರಿಯರು ಸ್ವದೇಶೀ ಚಿಕಿತ್ಸಾ ವಿಧಾನವನ್ನೇ ತಲೆ ತಲಾಂತರದಿಂದ ಅನುಸರಿಸಿಕೊಂಡು ಬರುತ್ತಿದ್ದರು. ಸ್ಥಳೀಯವಾಗಿ ದೊರಕುವ ಔಷಧೀಯ ಸಸ್ಯಗಳನ್ನು ಬಳಸಿಕೊಂಡು ಮನುಷ್ಯರಿಗೆ ಹಾಗೂ ಪ್ರಾಣಿಗಳಿಗೆ ಬರುವ ನಾನಾ ತರದ ರೋಗ-ರುಜಿನಗಳಿಗೆ ಚಿಕಿತ್ಸೆಯನ್ನು ನೀಡುತ್ತಿದ್ದರು. ಇಂತಹ ಆಯುರ್ವೇದ ಅಥವಾ ಜನಪದ ವೈದ್ಯ ವೃತ್ತಿಯನ್ನು ಕೆಲವು ಕುಟುಂಬಗಳು ವಂಶಪಾರಂಪರ್ಯವಾಗಿ ಇಂದಿಗೂ ಅನುಸರಿಸಿಕೊಂಡು ಬರುತ್ತಿರುವುದನ್ನು ಕಾಣಬಹುದು.

ಆಯುರ್ವೇದ ಅಥವಾ ನಾಟಿ ವೈದ್ಯ ಪದ್ಧತಿಯನ್ನು ಉಡುಪಿ ಸಮೀಪದ ನಿಟ್ಟೂರು ಶ್ರೀನಿವಾಸ ಪೂಜಾರಿ ಕುಟುಂಬದವರು ಕಳೆದ ಏಳು ತಲೆಮಾರುಗಳಿಂದ ಮುನ್ನಡೆಸಿಕೊಂಡು ಬರುತ್ತಿದ್ದಾರೆ. ಅವರೊಂದಿಗೆ ನಡೆಸಿದ ಸಂದರ್ಶನದ ಆಯ್ದ ಭಾಗವನ್ನು ಇಲ್ಲಿ ಹಂಚಿಕೊಳ್ಳುತ್ತಿದ್ದೇವೆ.

ದೇಶೀಯವಾದ ನಾಟಿ ವೈದ್ಯ ಪದ್ಧತಿಗೆ ಧಾರ್ಮಿಕವಾದ ಹಿನ್ನೆಲೆ ಇರುತ್ತದೆ. ಚಿಕಿತ್ಸೆ ನೀಡುವ ಪ್ರತೀ ಕುಟುಂಬವೂ ಇಂತಹ ಧಾರ್ಮಿಕ ಪರಂಪರೆಯನ್ನು ಅನುಸರಿಸಿಕೊಂಡು ಬರುತ್ತದೆ. ಅನುಭವೀ ಹಿರಿಯರೊಂದಿಗೆ ಚಿಕಿತ್ಸಾ ವಿಧಾನವನ್ನು ಕರಗತ ಮಾಡಿಕೊಂಡ ಬಳಿಕ ಚಿಕಿತ್ಸೆ ನೀಡುವುದಕ್ಕೆ ಹಾಗೂ ಈ ವೈದ್ಯ ಪದ್ಧತಿಯನ್ನು ಮುಂದುವರೆಸಿಕೊಂಡು ಹೋಗುವುದಕ್ಕೆ ಸಿದ್ಧಗೊಂಡ ವ್ಯಕ್ತಿಗೆ ದೀಕ್ಷೆ ನೀಡುವ ಪದ್ಧತಿ ಇದೆ. ಶ್ರೀನಿವಾಸ ಪೂಜಾರಿ ಕುಟುಂಬದವರು ಈ ಪರಂಪರೆಯನ್ನು ಹಿಂದಿನಿಂದಲೂ ಅನುಸರಿಸಿಕೊಂಡು ಬರುತ್ತಿದ್ದಾರೆ. ಈ ರೀತಿ ದೀಕ್ಷಾಬದ್ಧನಾದ ವ್ಯಕ್ತಿ ಮಾತ್ರ ರೋಗಿಗಳಿಗೆ ಚಿಕಿತ್ಸೆ ನೀಡುತ್ತಾನೆ. ಇದರೊಂದಿಗೆ ವೈಯಕ್ತಿಕ ನೆಲೆಯಲ್ಲಿ ಕೆಲವೊಂದು ಧಾರ್ಮಿಕ ಅನುಷ್ಠಾನಗಳನ್ನು ಇವರು ಪಾಲಿಸುತ್ತಾರೆ. ಪ್ರತೀ ನಿತ್ಯ ನೂರಾರು ಮಂದಿ ನಿಟ್ಟೂರಿನಲ್ಲಿರುವ ಇವರ ಚಿಕಿತ್ಸಾ ಕೇಂದ್ರಕ್ಕೆ ಭೇಟಿ ನೀಡಿ ಚಿಕಿತ್ಸೆ ಪಡೆಯುತ್ತಾರೆ.

ಶ್ರೀನಿವಾಸ ಪೂಜಾರಿಯವರು ಮನುಷ್ಯರಿಗೆ ಬರುವ ಬಹುತೇಕ ರೋಗಗಳಿಗೆ ಚಿಕಿತ್ಸೆಯನ್ನು ನೀಡುತ್ತಾರೆ. ಮುಖ್ಯವಾಗಿ

ಆಯುರ್ವೇದದಲ್ಲಿ ನಂಬಿಕೆ ಇರಬೇಕೆಂಬುದು ಇವರ ಅಭಿಪ್ರಾಯ. ನಮ್ಮ ಸುತ್ತ-ಮುತ್ತಲಿರುವ ಪ್ರತಿಯೊಂದು ಗಿಡವೂ ಔಷಧೀಯ ಗುಣವನ್ನು ಹೊಂದಿದೆ. ಬಹಳಷ್ಟು ಗಿಡಗಳ ಎಲೆ, ಕಾಂಡ, ಬೇರು, ತೊಗಟೆ ಎಲ್ಲವೂ ಔಷಧವಾಗಿ ಬಳಸಲ್ಪಡುತ್ತದೆ. ಶ್ರೀನಿವಾಸ ಪೂಜಾರಿಯವರು ತಾವು ಚಿಕಿತ್ಸೆಯಲ್ಲಿ ನೀಡುವ ಗಿಡಮೂಲಿಕೆ ಔಷಧ, ಕಷಾಯ ಇತ್ಯಾದಿಗಳೆಲ್ಲವನ್ನು ತಾವೇ ಸಿದ್ಧಪಡಿಸಿಕೊಳ್ಳುತ್ತಾರೆ. ಅದಕ್ಕೆ ಬಳಸುವ ಮೂಲಿಕೆಗಳನ್ನು ಗ್ರಾಮೀಣ ಪ್ರದೇಶಗಳಿಂದ, ಕೆಲವೊಮ್ಮೆ ಹೊರರಾಜ್ಯಗಳಿಂದಲೂ ತರಿಸಿಕೊಳ್ಳುತ್ತಾರೆ. ತಮ್ಮ ಹಿರಿಯರಿಂದ ಬಂದಿರುವ ಚಿಕಿತ್ಸಾ ವಿಧಾನದ ಕೆಲವೊಂದು ಗ್ರಂಥಗಳನ್ನು ಶ್ರೀಯುತರು ಜೋಪಾನವಾಗಿ ಸಂರಕ್ಷಿಸಿಕೊಂಡು ಬಂದಿದ್ದಾರೆ. ಯಾವುದೇ ರೀತಿಯ ರೋಗದಿಂದ ಬಳಲುವ ವ್ಯಕ್ತಿಯು ನಾಟಿವೈದ್ಯ ಚಿಕಿತ್ಸೆಗೆ ಒಳಗಾದಾಗ ದೀರ್ಘಕಾಲದ ಚಿಕಿತ್ಸೆಯನ್ನು ಪಡೆಯಬೇಕಾಗುತ್ತದೆ. ನಾವು ಗಿಡಮೂಲಿಕೆಗಳಿಂದ ಪಡೆಯುವ ಯಾವುದೇ ರೀತಿಯ ಚಿಕಿತ್ಸೆಯಲ್ಲೂ ಇಂದಿನ ಆಧುನಿಕ ಔಷಧ ಪದ್ಧತಿಯಂತಹ ಅಡ್ಡಪರಿಣಾಮಗಳುಂಟಾಗುವುದಿಲ್ಲ. ಹಂತ ಹಂತವಾಗಿ ರೋಗಿಯು ಗುಣಮುಖನಾಗಿ, ಸರಿಯಾದ ಆಹಾರ ಪದ್ಧತಿ ಮತ್ತು ಕೆಲವೊಂದು ಪಥ್ಯಗಳಿಂದ ಮುಂದೊಮ್ಮೆ ಸಂಪೂರ್ಣವಾಗಿ ರೋಗಮುಕ್ತನಾಗುತ್ತಾನೆ. ರೋಗಿಯ ಕಾಯಿಲೆಯ ಲಕ್ಷಣಗಳನ್ನು ಗಮನಿಸಿ ಅವನಿಗೆ ಸೂಕ್ತ ಚಿಕಿತ್ಸೆಯನ್ನು ನೀಡಿದಾಗ ರೋಗಮುಕ್ತಗೊಳಿಸಬಹುದು. ಇದಕ್ಕೆ ಚಿಕಿತ್ಸೆ ನೀಡುವ ವ್ಯಕ್ತಿಗೂ ಅನುಭವ ಬೇಕಾಗುತ್ತದೆ.

ಬದಲಾದ ಜೀವನ ಶೈಲಿಯಿಂದಾಗಿ ಮನುಷ್ಯರಿಗೆ ನಾನಾ ತರದ ರೋಗ-ರುಜಿನಗಳು ಬಾಧಿಸುತ್ತವೆ. ಇದಕ್ಕೆ ಪ್ರಮುಖ ಕಾರಣವೆಂದರೆ ಮನುಷ್ಯ ದೇಹದಲ್ಲಿ ಪ್ರತಿರೋಧ ಶಕ್ತಿ ಕುಂಠಿತವಾಗುತ್ತಿರುವುದು. ಆಧುನಿಕ ಆಹಾರ ಪದ್ಧತಿ, ಸದಾ ಒತ್ತಡದ ಜೀವನ ಇವೆಲ್ಲವೂ ಮನುಷ್ಯ ದೇಹವನ್ನು ದಿನೇ ದಿನೇ ದುರ್ಬಲಗೊಳಿಸುತ್ತವೆ. ಸಹಜ ಆಹಾರ ಪದ್ಧತಿ ಮತ್ತು ಸಹಜವಾದ ಜೀವನ ಶೈಲಿಯಿಂದ ಮಾತ್ರ ಅತ್ಯುತ್ತಮವಾದ ಆರೋಗ್ಯವನ್ನು ಪಡೆಯಬಹುದೆಂದು ಇವರು ಅಭಿಪ್ರಾಯ ಪಡುತ್ತಾರೆ.

ನಮ್ಮ ಹಿರಿಯರು ಹಿತ-ಮಿತವಾದ ಆಹಾರ ಪದ್ಧತಿಯನ್ನು ಪಾಲಿಸುತ್ತ ಸರಳವಾದ ಜೀವನವನ್ನು ನಡೆಸುತ್ತಿದ್ದರು. ಇಂದು ನಾವು ತಿನ್ನುವ ಬಹುತೇಕ ಆಹಾರ ಪದಾರ್ಥಗಳು ರಾಸಾಯನಿಕಯುಕ್ತವಾಗಿವೆ. ಇದರಿಂದಾಗಿ ಮನುಷ್ಯನಲ್ಲಿರುವ ರೋಗ ನಿರೋಧಕ ಶಕ್ತಿ ದಿನೇ ದಿನೇ ಕುಂಠಿತವಾಗುತ್ತ ಹೋಗುತ್ತದೆ. ನಾವು ತಿನ್ನುವ ಆಹಾರ ಪದಾರ್ಥಗಳೇ ದೇಹಕ್ಕೆ ಔಷಧವಾಗುತ್ತದೆ. ಆದ ಕಾರಣ ಸರಳ ಆಹಾರ ಪದ್ಧತಿಯನ್ನು ರೂಢಿಸಿಕೊಳ್ಳಬೇಕು. ಪ್ರಾದೇಶಿಕವಾಗಿ ಹಾಗೂ ಸ್ಥಳೀಯವಾಗಿ ಬೆಳೆಯುವ ಹಣ್ಣು ತರಕಾರಿಗಳನ್ನು ಹೆಚ್ಚು ಉಪಯೋಗಿಸಬೇಕು. ದೇಹಕ್ಕೆ ಹಿತ-ಮಿತವಾದ ವ್ಯಾಯಾಮ, ಸರಿಯಾದ ನಿದ್ದೆ ಮತ್ತು ಪ್ರಶಾಂತ ಮನಸ್ಥಿತಿಯನ್ನು ರೂಢಿಸಿಕೊಂಡಾಗ ಬಹಳಷ್ಟು ಕಾಯಿಲೆಗಳಿಂದ ನಾವು ಮುಕ್ತರಾಗಬಹುದು ಎಂದು ಅಭಿಪ್ರಾಯ ಪಡುತ್ತಾರೆ.

ಆರೋಗ್ಯವೇ ಭಾಗ್ಯ ಎಂಬ ಹಿರಿಯರ ಮಾತಿನಂತೆ ದೇಹ ಹಾಗೂ ಮನಸ್ಸು ಸ್ವಸ್ಥವಾಗಿದ್ದರೆ ಮನುಷ್ಯ ಯಾವ ಸಾಧನೆಯನ್ನೂ ಮಾಡಬಹುದು. ನಮ್ಮ ದೇಹ ಮತ್ತು ಆರೋಗ್ಯದ ರಕ್ಷಣೆ ನಮ್ಮ ಕೈಯಲ್ಲೇ ಇದೆ. ಮನುಷ್ಯ ರೋಗಮುಕ್ತನಾದರೆ ನೆಮ್ಮದಿಯ ಬದುಕು ಅವನದಾಗುತ್ತದೆ. ●

ಸಾಹಿತ್ಯ ಸೃಷ್ಟಿಯು ಒಳ್ಳೆಯ ಬದುಕಿನ ಪ್ರತಿಫಲವಾಗಿ ಹುಟ್ಟಬಹುದಾದ 'ಸವಿಗನಸು'. ಎಲ್ಲಿಯವರೆಗೆ ನಮ್ಮ ಜೀವನವು ವಿಶಾಲವಾಗುವುದಿಲ್ಲವೋ ಅಲ್ಲಿಯವರೆಗೆ ನಮ್ಮ ಸಾಹಿತ್ಯವೂ ವಿಶಾಲವಾಗುವುದಿಲ್ಲ. ಸಾಹಿತ್ಯದಲ್ಲಿ ರುಚಿ ಹೇಗೆ ಬೇಕೋ ಹಾಗೆ ಶುಚಿಯೂ ಬೇಕು. ನಮ್ಮ ಬದುಕು ದೊಡ್ಡದಾಗದೆ ನಮ್ಮ ಸಾಹಿತ್ಯ ಎಂದೂ ದೊಡ್ಡದಾಗಲಾರದು – **ಶಿವರಾಮ ಕಾರಂತ**

* * *

ಪುಸ್ತಕವಿಲ್ಲದ ಮನೆ ಆಹಾರವಿಲ್ಲದ ದೇಹವಿದ್ದಂತೆ – **ಸಿಸಿರೋ**

* * *

ಮಾನವತೆಯಿಂದ ದೇವತ್ವದ ಕಡೆಗೆ ಒಯ್ಯುವ ಮಾರ್ಗವೇ ಸಂಸ್ಕೃತಿ – **ದ.ರಾ. ಬೇಂದ್ರೆ**

ಸಾಹಿತಿ ಸುಧಾ ಆಡುಕಳ ಅವರ ಜೊತೆಗಿನ ಸಂದರ್ಶನ

✍ **ನವ್ಯಶ್ರೀ ಶೆಟ್ಟಿ,** ದ್ವಿತೀಯ ಬಿ.ಎ. (ಪತ್ರಿಕೋದ್ಯಮ ವಿಭಾಗ)

ಸಾಹಿತ್ಯ ಕ್ಷೇತ್ರದಲ್ಲಿ ಮಹಿಳೆಯರ ಪಾಲ್ಗೊಳ್ಳುವಿಕೆ ಕಡಿಮೆ ಎನ್ನುವ ಮಾತಿದೆ. ಆದರೆ ಜಾನಪದ ಹಾಡುಗಳು ಸೃಷ್ಟಿಯಾಗಿದ್ದು ಮಹಿಳೆಯರಿಂದ. ಹಿಂದಿನ ಕಾಲದಲ್ಲಿ ಮನೆಯ ಹೊರಗಿನ ಪ್ರಪಂಚದ ಅರಿವೇ ಇಲ್ಲದೆ ಸಾಹಿತ್ಯ ಕ್ಷೇತ್ರಕ್ಕೆ ಬರುವ ಮಹಿಳೆಯರ ಸಂಖ್ಯೆ ಕಡಿಮೆಯಾಗಿತ್ತು. ಸಾಹಿತ್ಯ ಸೃಷ್ಟಿಗೆ ಪೂರಕ ವಾತಾವರಣ ಇರಲಿಲ್ಲ. ಇತ್ತೀಚಿನ ದಿನಗಳಲ್ಲಿ ಮಹಿಳೆಯ ಸಾಹಿತ್ಯ ಸೃಷ್ಟಿಗೆ ಪೂರಕ ವಾತಾವರಣ ಸೃಷ್ಟಿಯಾಗಿದೆ. ಸಾಹಿತ್ಯ ಕ್ಷೇತ್ರದಲ್ಲಿ ಮಹಿಳೆ ಕೂಡಾ ಇಂದು ಬಹಳಷ್ಟು ಸಾಧಿಸುತ್ತಿದ್ದಾರೆ ಎನ್ನುವುದು ಸಾಹಿತಿ ಸುಧಾ ಆಡುಕಳ ಅವರ ಮಾತು.

ಸುಧಾ ಆಡುಕಳ ಮೂಲತಃ ಹೊನ್ನಾವರದವರು. ವೃತ್ತಿಯಲ್ಲಿ ಉಡುಪಿಯ ಮಹಿಳಾ ಕಾಲೇಜಿನ ಗಣಿತ ಉಪನ್ಯಾಸಕಿ. ಸಾಹಿತ್ಯ ದಿಗ್ಗಜರು ತುಂಬಿದ ಊರು. ಯಕ್ಷಗಾನವನ್ನು ನೋಡುತ್ತಾ ಬೆಳೆದವರು. ಪುಸ್ತಕಗಳನ್ನು ಪ್ರೀತಿಸಿದವರು. ಮನೆಯೇ ಸಾಹಿತ್ಯಿಕ ಶಾಲೆ. ಇವೆಲ್ಲವೂ ಸುಧಾ ಅವರಿಗೆ ಬರೆಯಲು ಪ್ರೇರಣೆ. ತನ್ನ ವಿರಾಮದ ವೇಳೆಯಲ್ಲಿ ಪುಸ್ತಕ ಓದುವುದು, ಬರೆಯುವುದು ಇಷ್ಟ ಉದಯವಾಣಿಯಲ್ಲಿ ಮೊದಲ ಲೇಖನ ಪ್ರಕಟ. ಮೊದಲ ಕೃತಿ ''ಹದಿಹರೆಯದ ಕನಸುಗಳೊಂದಿಗೆ''. ಜಿ. ಎನ್. ಮೋಹನ್ ಅವರ 'ಅವಧಿ'ಯಲ್ಲಿ ಅಂಕಣದ ಬರಹ ಮೂಲಕ ಬಹು ಚಿರಪರಿಚಿತರು. ಕೆಲದಿನಗಳ ಹಿಂದಷ್ಟೇ 'ಬಕುಳದ ಬಾಗಿಲಿಗೆ' ಕೃತಿಗೆ 2021ರ ಸಾಲಿನ ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪುರಸ್ಕೃತರಾಗಿದ್ದಾರೆ ಸುಧಾ ಆಡುಕಳ.

ತನಗೆ ತೋಚಿದ್ದನ್ನು ಬರೆಯುವ ಸ್ವಾತಂತ್ರ್ಯ ಮಹಿಳೆಗಿಲ್ಲ. ಆಕೆಗೆ ಎಲ್ಲವನ್ನೂ ಮುಕ್ತವಾಗಿ ಬರೆಯುವ ಅವಕಾಶಗಳು ಇರಲಿಲ್ಲ. ಒಂದೊಮ್ಮೆ ಬರೆದರೆ ಆಕೆಯ ವೈಯಕ್ತಿಕ ಬದುಕನ್ನು ಕೆದಕುವ ಕೆಲಸಗಳು ಆಗುತ್ತದೆ. ಈ ರೀತಿ ಹಿಂದೆಯೂ ಇತ್ತು; ಈಗಲೂ ಇದೆ. ನಾವು ಮೊದಲು ನಮ್ಮ ಆಸಕ್ತಿಯಲ್ಲಿ ತೊಡಗಿಕೊಳ್ಳಬೇಕು. ಬರಹ ಎನ್ನುವುದು ಒಂದು ರೀತಿ ನಮ್ಮೊಳಗಿನ ಒತ್ತಡ. ಕಾದು ಕುಳಿತು, ಯೋಚಿಸಿ ಬರೆಯಬೇಕು. ಬರವಣಿಗೆಗೆ ಏಕಾಂತ ಮುಖ್ಯ. ಸಮಯ ಒಂದು ರೀತಿ ಸಾಪೇಕ್ಷ. ಆ ಸಮಯಕ್ಕೆ ಕಾದು ಯೋಚಿಸಿ ಬರೆದ ಬರಹಗಳು ಪ್ರಕಟಗೊಳ್ಳುತ್ತದೆ.

ಸರಿಯಾದ ಸಮಯದ ಕಾಯುವಿಕೆ ಸುಧಾ ಆಡುಕಳ ಅವರನ್ನು ಪರಿಪೂರ್ಣ ಲೇಖಕಿಯನ್ನಾಗಿ ಮಾಡಿದೆ. ಅವರ ಲೇಖನಗಳು ಕೆಲವೊಮ್ಮೆ ಒಂದು ರೀತಿಯ ಅಧ್ಯಯನದ ಹಾಗೆ ಇರುತ್ತದೆ. ತಾತ್ವಿಕ, ವಿಚಾರವಾದಗಳ ಕುರಿತು ಬರೆಯುವುದು ಬಹು ಇಷ್ಟ ಕುಗ್ರಾಮದಲ್ಲಿ ಬೆಳೆದ ಇವರಿಗೆ ಆಡುಕಳದ ಹೆಣ್ಣುಗಳು, ಹೆಣ್ಣು ದೇವತೆಗಳು ಸಾಹಿತ್ಯ ರಚನೆಗೆ ಗುರು. ಇಂದಿಗೂ ಹೆಣ್ಣುಗಳು, ಹೆಣ್ಣು ದೇವತೆಗಳ ಬಗ್ಗೆ ಸಲೀಸಾಗಿ ಕಥೆ ಕಟ್ಟಬಲ್ಲರು. ಶೋಷಿತರು, ಮುಖ್ಯವಾಹಿನಿಯಿಂದ ಹೊರಗುಳಿದವರೆಲ್ಲರೂ ಸಾಹಿತ್ಯ ರಚನೆಗೆ ಪ್ರೇರಣೆ.

ಎಲ್ಲ ರೀತಿ ಬರವಣಿಗೆಗಳು ಇಷ್ಟ. ನಾಟಕ ರಚನೆ ಕೊಂಚ ಜಾಸ್ತಿ ಇಷ್ಟ. ಕೇವಲ ಎರಡು ದಿನದಲ್ಲಿ ರವೀಂದ್ರನಾಥ್ ಠಾಗೋರ್ ಅವರ ನಾಟಕ ಅನುವಾದ ಮಾಡಿ, ಹೊಸ ರೂಪ ಕೊಟ್ಟ 'ಕೆಂಪು ಕಣಗಿಲೆ' ಬಹು ಹಿತವಾದ ಕೃತಿ. ಸಾಹಿತ್ಯವನ್ನು ನಂಬಿ ಜೀವನ ನಡೆಸುತ್ತೇವೆ ಅನ್ನುವುದು ಕಷ್ಟ. ಹಣ ಮಾಡುವ ಪರಿಸ್ಥಿತಿ ಇಂದು ಸಾಹಿತ್ಯ ಕ್ಷೇತ್ರದಲ್ಲಿ ಇಲ್ಲ. ಸಾಹಿತಿಯಾಗುವುದು ಬಯಸಿಯಲ್ಲ. ಬರೆಯಬೇಕು ಎನ್ನುವ ಮನಸ್ಸಿನ ಒತ್ತಡ. ಸಮಾಜದ ಭಾಗ ಎನ್ನುವ ಮನಸ್ಸು ಸಾಹಿತ್ಯ ಕೃಷಿಯ ತುಡಿತಕ್ಕೆ ಕಾರಣ. ಸಾಹಿತಿಯಾಗಿ ಬದುಕಿದ್ದ ಕಾರಂತರ ರೀತಿ ಇಂದು ಸಾಹಿತ್ಯ ಕ್ಷೇತ್ರದಲ್ಲಿ ಬದುಕುವುದು ಕಷ್ಟ ಎನ್ನುತ್ತಾರೆ ಸುಧಾ.

ವಿದ್ಯಾರ್ಥಿಗಳು ಪುಸ್ತಕಗಳನ್ನು ಕೊಂಡೇ ಓದಬೇಕು ಅನ್ನುವ ನಿರ್ಧಾರ ತಪ್ಪು. ಆನ್ಲೈನ್ ಪುಸ್ತಕ ಓದು ಸ್ವಾಗತಾರ್ಹ. ಸರಿಯಾದ ಪುಸ್ತಕ ಸಿಗುವ ತಾಣಗಳ ಬಗ್ಗೆ ವಿದ್ಯಾರ್ಥಿಗಳಿಗೆ ಮಾಹಿತಿ ನೀಡಬೇಕಿದೆ. ಆದರೆ ವಿದ್ಯಾರ್ಥಿಗಳಲ್ಲಿ ಓದುವ ಆಸಕ್ತಿಯಿಲ್ಲ ಎನ್ನುವುದು ಸರಿಯಲ್ಲ.

ಕೇವಲ ಪುಸ್ತಕಗಳನ್ನು ಓದಿ ಬರೆದ ಸಾಹಿತ್ಯಕ್ಕೆ ಬಾಳಿಕೆ ಕಡಿಮೆ. ಜೀವನ ಅನುಭವದಿಂದ ಬರೆದ ಸಾಹಿತ್ಯಕ್ಕೆ ಬಾಳಿಕೆ ಜಾಸ್ತಿ. ಜಗತ್ತಿನ ಮೇರು ಕೃತಿಗಳು ಹುಟ್ಟಿಕೊಂಡಿದ್ದೇ ಜೀವನ ಅನುಭವಗಳಿಂದ. ನಮ್ಮ ಸೀಮಿತ ಬದುಕಿನಲ್ಲಿ ಘಟನೆಗಳನ್ನು ಸೂಕ್ಷ್ಮವಾಗಿ ಗುರುತಿಸುವುದು ಕಲಿಯಬೇಕು, ವಿಸ್ತೃತ ಅಧ್ಯಯನ ಮಾಡಬೇಕು. ಆಗ ಮಾತ್ರ ಉತ್ತಮ ಕೃತಿಗಳು ಹುಟ್ಟಿಕೊಳ್ಳುವುದು. ವೈದೇಹಿ ಅವರು ಹೇಳುವಂತೆ, ನಾವು ನಮ್ಮೊಳಗಿನ ದೇಶವನ್ನು ಮೊದಲು ಸುತ್ತಬೇಕು. ಕಾಲ ಕಳೆದಂತೆ ಹುಟ್ಟಿಕೊಳ್ಳುವುದು ಗಟ್ಟಿ ಕಾಳುಗಳು ಮಾತ್ರ. ಅದು ಪುಸ್ತಕಗಳಿಗೂ ಅನ್ವಯ. ಬರಹಗಾರನಿಗೆ ತನ್ನ ಬರಹವನ್ನು ಒಬ್ಬ ಓದುಗ ಓದಿದರೂ ಸಾರ್ಥಕ ಎಂದೆನಿಸುತ್ತದೆ. ಭಾಷೆಗಳ ಬಳಕೆ ಕಾಲಕ್ಕೆ ತಕ್ಕಂತೆ ಬದಲಾಗುತ್ತಿದೆ. ಕಾಲದ ಸಾಂಗತ್ಯಕ್ಕೆ ಹೊಂದಿಕೊಳ್ಳುತ್ತಿದೆ. ಬದಲಾವಣೆ ಜಗದ ನಿಯಮ. ಭಾಷೆಯಲ್ಲಿ ಚಲನಶೀಲತೆ ಮುಖ್ಯ. ಆಗ ಮಾತ್ರ ಭಾಷೆ, ಸಾಹಿತ್ಯ ಬದುಕುಳಿಯುತ್ತದೆ.

ಸಾಹಿತ್ಯ ಕೃಷಿಯಲ್ಲಿ ತೊಡಗಿಕೊಳ್ಳುವ ಹೆಣ್ಣು ಮಕ್ಕಳಿಗೆ

ಕೌಟುಂಬಿಕ ಸಮಸ್ಯೆಗಳು ಎದುರಾಗುತ್ತವೆ. ಸಮಯದ ಹೊಂದಾಣಿಕೆ ಬಹು ದೊಡ್ಡ ಸಮಸ್ಯೆ. ಸಾಹಿತ್ಯಗಳಿಗೆ ಸಂಬಂಧಿಸಿದ ಸಂಘಟನೆಗಳಲ್ಲಿ ಸ್ತ್ರೀಗೆ ಅವಕಾಶ ಕಡಿಮೆ. ಆದರೆ ಇತ್ತೀಚಿನ ದಿನಗಳಲ್ಲಿ ಮಹಿಳಾ ಲೇಖಕಿಯರ ಜೊತೆಗೆ ಮಹಿಳಾ ಪ್ರಕಾಶಕಿಯರು ಹುಟ್ಟಿಕೊಳ್ಳುತ್ತಿದ್ದಾರೆ. ಹೆಣ್ಣು ಮಕ್ಕಳಲ್ಲಿ ಚೈತನ್ಯ ಜಾಸ್ತಿ. ಅವರು ತಮ್ಮಲ್ಲಿನ ಪ್ರತಿಭೆ, ಚೈತನ್ಯ ಗುರುತಿಸಿಕೊಳ್ಳಬೇಕು. ಆಕೆ ಎಲ್ಲಾ ಕ್ಷೇತ್ರದಲ್ಲಿ ಗುರುತಿಸಿಕೊಳ್ಳಬೇಕು. ಬದುಕಿನ ಅರ್ಥವನ್ನು ಅರಿತುಕೊಂಡು ಸರಿಯಾದ ದಿಶೆಯಲ್ಲಿ ಸಾಗಿದರೆ ಆಕೆ ಯಾವ ಕ್ಷೇತ್ರದಲ್ಲಿ ಕೂಡ ಸಾಧಿಸ ಬಲ್ಲಳು ಎನ್ನುವುದು ಸುಧಾ ಆಡುಕಳ ಅವರ ಮಾತು.

ಕಾಲೇಜಿನ ಪಾಠದ ಜೊತೆಗೆ ಸಮಯದ ಹೊಂದಾಣಿಕೆ ಮಾಡಿಕೊಂಡು ಬರೆಯುವ ಸುಧಾ ಆಡುಕಳ ಅವರು ಪ್ರಸಿದ್ಧ ಲೇಖಕಿ. ಬರವಣಿಗೆಯಲ್ಲಿ ಖುಷಿ ಕಾಣುತ್ತಾ ಅದರಲ್ಲಿ ಸಾರ್ಥಕತೆ ಕಾಣುವ ಸುಧಾ ಆಡುಕಳ ಅವರು ವರ್ತಮಾನದ ಯುವ ಬರಹಗಾರ್ತಿಯರಿಗೆ ಸ್ಫೂರ್ತಿ. ●

ಗುರು ಎಂದರೆ ದೊಡ್ಡದು, ದೊಡ್ಡವರು ಎಂದು ಅರ್ಥ. ಕಲಿಸಬೇಕಾದ ವಿಷಯಗಳನ್ನು ಚೆನ್ನಾಗಿ ಬಲ್ಲವನು
ಹಾಗೂ ಅದನ್ನು ಯಾವಾಗಲೂ ಶಿಷ್ಯರ ಹಿತಕ್ಕಾಗಿಯೇ ಸಂಪೂರ್ಣ
ವಿನಿಯೋಗಿಸುವವನು – **ಶಂಕರಾಚಾರ್ಯರು**

* * *

ಪ್ರಾರ್ಥನೆ ಎಂದರೆ ಮನುಷ್ಯನು ತನ್ನ ಅಂತರಂಗದಲ್ಲಿ ಇರುವ ಪರಮಾತ್ಮನೊಡನೆ
ಸಂಭಾಷಿಸುವುದು – **ಗಾಂಧೀಜಿ**

* * *

ಪ್ರಾರ್ಥನೆಯು ಹೃದಯವನ್ನು ವಿಕಾಸಗೊಳಿಸುತ್ತದೆ ಮತ್ತು ಪರಮಾತ್ಮನನ್ನು ತನ್ನಲ್ಲಿ
ಸ್ವೀಕರಿಸಲು ಅನುಗೊಳಿಸುತ್ತದೆ – **ಮದರ್ ಥೆರೆಸಾ**

* * *

ಅನನ್ಯ ಭಕ್ತಿಭಾವದಿಂದ ಯಾರು ನನ್ನನ್ನು ಪ್ರಾರ್ಥಿಸುವರೋ ಅಂತಹ ಭಕ್ತರ ಯೋಗಕ್ಷೇಮದ
ಹೊಣೆಯನ್ನು ನಾನು ವಹಿಸಿಕೊಳ್ಳುವೆ – **ಶ್ರೀಕೃಷ್ಣ**

* * *

ವಿದ್ಯಾರ್ಥಿಗಳು ಭತ್ತ ಬೆಳೆಯುವ ಗದ್ದೆಗಳಾಗಬೇಕು; ಬರೀ ಭತ್ತ ತುಂಬುವ ಚೀಲಗಳಾಗಬಾರದು – **ಕುವೆಂಪು**

* * *

ನೌಕರಿಗಾಗಿ ಶಿಕ್ಷಣವೆಂಬ ಭ್ರಮೆ ದೂರವಾಗಿ ಬದುಕುವ–ಬಾಳುವ ಕಲೆಗಾಗಿ ಶಿಕ್ಷಣವೆಂಬ ಅರಿವು
ವಿದ್ಯಾರ್ಥಿಗಳಲ್ಲಿ ಮೂಡಬೇಕು – **ವಿನೋಬಾ**

ಕಾಲೇಜು ಶಿಕ್ಷಣದಲ್ಲಿ ಗ್ರಂಥಾಲಯದ ಮಹತ್ವ

✍ **ಕೆ. ಈ. ದಿಶಾ ಭಟ್,** ಪ್ರಥಮ ಬಿ.ಕಾಂ.

ಕಾಲೇಜು ಶಿಕ್ಷಣದಲ್ಲಿ ಗ್ರಂಥಾಲಯದ ಮಹತ್ವ ಎಂಬ ವಿಷಯ ತಿಳಿಯುವುದರ ಮುನ್ನ ಶಿಕ್ಷಣ ಎಂದರೇನು? ಎಂಬ ಪ್ರಶ್ನೆ ಬರುವುದು ಸಹಜ. ರಾಧಾಕೃಷ್ಣನ್ ಅವರ ಪ್ರಕಾರ ''ಶಿಕ್ಷಣವೆಂದರೆ ಮಕ್ಕಳನ್ನು ನಾಡಿನ ಶ್ರೇಷ್ಠ ನಾಗರಿಕರನ್ನಾಗಿ ಮಾಡಲು ನಾವು ನೀಡುವ ಸೌಲಭ್ಯ'' ಎಂದು ಹೇಳಿದ್ದಾರೆ. ಅವರ ಮಾತಿನ ಒಳ ಅರ್ಥ ಏನೆಂದರೆ ಮಕ್ಕಳಿಗೆ ಸೌಲಭ್ಯ ಒದಗಿಸುವುದರ ಮೂಲಕ ಅವರಿಗೆ ತಮ್ಮ ನೆರೆಹೊರೆಯವರೊಂದಿಗೆ ಸೌಹಾರ್ದದಿಂದ ಬದುಕುವುದನ್ನು ಕಲಿಸಿ, ಎಲ್ಲರೊಂದಿಗೆ ಸಾಮರಸ್ಯದಿಂದ ಬದುಕಲು ಕಲಿಸುವುದಾಗಿದೆ.

'ಗ್ರಂಥಾಲಯಗಳು ಜ್ಞಾನದ ಖಜಾನೆಗಳಾಗಿವೆ' ಎಂಬ ಮಾತಿನಂತೆ ಅವು ಜ್ಞಾನದ ಭಂಡಾರಗಳಾಗಿ ಸರ್ವರಿಗೂ ಉಪಯುಕ್ತವಾಗಿದೆ. ಗ್ರಂಥಾಲಯಗಳು ವಿದ್ಯಾರ್ಥಿಗಳ ಜೀವನದಲ್ಲಿ ಹಾಗೂ ಜ್ಞಾನದ ಅಭಿವೃದ್ಧಿಯಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ. ಗ್ರಂಥಾಲಯಗಳ ಮೂಲಕ ದೇಶದ ಅಭಿವೃದ್ಧಿಯು ಸಾಗುತ್ತ ಹೋದಂತೆ ವಿದ್ಯಾರ್ಥಿಗಳಿಗೆ ಉತ್ತಮ ಭವಿಷ್ಯ ದೊರಕಬಹುದು.

ಚಿಕ್ಕ ವಯಸ್ಸಿನಲ್ಲಿ ಕಲಿತದ್ದು ಕಲ್ಲಿನಲ್ಲಿ ಕೆತ್ತಿದಂತೆ, ಮುಪ್ಪಿನಲ್ಲಿ ಕಲಿತದ್ದು ಮರಳಿನಲ್ಲಿ ಬರೆದಂತೆ ಎಂಬ ಮಾತಿನಂತೆ ಮಾನವ ಬಾಲ್ಯದಲ್ಲಿ ಮತ್ತು ಯೌವನದಲ್ಲಿ ಕಲಿತ ವಿಷಯ ಜೀವನದುದ್ದಕ್ಕೂ ಸಹಾಯವಾಗುತ್ತದೆ.

''ಗುರುವಿನ ಗುಲಾಮನಾಗುವ ತನಕ ದೊರೆಯದಣ್ಣ ಮುಕುತಿ'' ಎಂಬ ವಚನದ ವಾಕ್ಯದಂತೆ ಎಲ್ಲಾ ವಿದ್ಯಾರ್ಥಿಗಳು ಮನದಟ್ಟು ಮಾಡಿಕೊಂಡು ವಿದ್ಯೆ ಕಲಿಸಿದ ಗುರುಗಳಿಗೆ, ಜನ್ಮಕೊಟ್ಟ ತಂದೆ ತಾಯಿಗೆ ಉತ್ತಮ ಗೌರವ ನೀಡಿದರೆ ನಮ್ಮ (ವಿದ್ಯಾರ್ಥಿಗಳ) ಬಾಳು ಉತ್ತಮವಾಗಿರುತ್ತದೆ, ಅಂತೆಯೇ 'ಶಿಕ್ಷಣವೆಂದರೆ ಬರೀ ಪುಸ್ತಕ ಪಾಂಡಿತ್ಯವಲ್ಲ' ಎಂಬಂತೆ ನಾವು ಪಡೆದುಕೊಂಡ ಶಿಕ್ಷಣವನ್ನು ಉಳಿದವರಿಗೂ ಹಂಚಬೇಕು. ಕಾಲೇಜು ವಿದ್ಯಾರ್ಥಿಗಳಿಗೆ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಪೂರ್ವ ತಯಾರಿ ಮಾಡಲು ಗ್ರಂಥಾಲಯಗಳು ಮುಖ್ಯವಾಗುತ್ತದೆ. ಅಂತೆಯೇ ಶಿಕ್ಷಣದಲ್ಲಿ ನೈತಿಕತೆಯನ್ನು ಅಳವಡಿಸಲು ಸಹಾಯ ಮಾಡುತ್ತದೆ. ಗ್ರಂಥಾಲಯ ವಿಶ್ವದ ಉಸಿರು; ಸಕಲ ಸುಧಾರಣೆಗಳ ಅಡಿಗಲ್ಲು, ಆದ್ದರಿಂದ ಗ್ರಂಥಾಲಯಗಳನ್ನು ಸರಿಯಾಗಿ ಉತ್ತಮ ರೀತಿಯಲ್ಲಿ ಬಳಸಿಕೊಂಡು ಉತ್ತಮ ವಿದ್ಯಾರ್ಥಿಗಳಾಗೋಣ.

ಒಬ್ಬ ವ್ಯಕ್ತಿಯ ಸಂಪೂರ್ಣ ಬೆಳವಣಿಗೆಗೆ ಶಿಕ್ಷಣದ ಜೊತೆಗೆ ನೈತಿಕ ಹಾಗೂ ಆಧ್ಯಾತ್ಮಿಕ ಚಿಂತನೆಗಳ ಅವಶ್ಯಕತೆಯು ಇದೆ. ಹಾಗೆ ಮಾನವನಲ್ಲಿರುವ ಅಂಧಕಾರವನ್ನು ಹೋಗಲಾಡಿಸಿ ಬೆಳಕನ್ನು ನೀಡುವ ಸಾಧನವೇ ಶಿಕ್ಷಣ. ಶಿಕ್ಷಣವೆಂಬುದು ಎಂದೂ ಮಾಸದ ಹಾಗೂ ಮುಗಿಯದ ಗೌರವದ ವಿಚಾರಧಾರೆ. ಅನೇಕ ವಿಷಯಗಳ ಮಹಾಪೂರವೇ ತುಂಬಿರುವ ಶಿಕ್ಷಣರಂಗ ಮಾನವೀಯತೆಯ ಅವಿಭಾಜ್ಯ ಅಂಗ. ಉತ್ತಮ ಶಿಕ್ಷಣ ದೊರೆಯಬೇಕಾದರೆ ಗ್ರಂಥಾಲಯದಲ್ಲಿನ ಪುಸ್ತಕಗಳ ಬಳಕೆ ಉತ್ತಮ ರೀತಿಯಲ್ಲಿ ಆಗಬೇಕು.

ಕೆಲವು ವರ್ಷಗಳಿಂದ ಭ್ರಷ್ಟಾಚಾರವೇ ಪ್ರಮುಖ ಸುದ್ದಿಯಾಗಿದ್ದರೆ ಇಂದು ಭ್ರಷ್ಟಾಚಾರದೊಂದಿಗೆ ಮಾನ ಹಾನಿ, ಮಾನಭಂಗದ ಸುದ್ದಿಗಳು ಹೆಚ್ಚಿವೆ. ಇಂತಹ ಅಸಹ್ಯ ಚಟುವಟಿಕೆಗಳು ನಿಯಂತ್ರಣಕ್ಕೆ ಬರಬೇಕಾದರೆ ವಿದ್ಯಾರ್ಥಿಗಳಾದ ನಾವು ತಿಳುವಳಿಕೆಯಿಂದ ಒಗ್ಗೂಡಬೇಕಾಗಿದೆ.

ಪ್ರತಿ ಗ್ರಂಥಾಲಯಗಳಲ್ಲೂ ಪರಾಮರ್ಶನ ಗ್ರಂಥ, ಸೌಲಭ್ಯ, ಮನೋರಂಜನೆ, ವಿವಿಧ ಸಾಹಿತ್ಯ ಪ್ರಕಾರಗಳ ಅರಿವು, ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಸಿದ್ಧತೆ, ಮಹಾನ್ ಕವಿಗಳ ಕೃತಿ ಅರಿವು – ಇಂತಹ ಹಲವು ಬಗೆಗಿನ ಪುಸ್ತಕಗಳು ನಮ್ಮ ಜ್ಞಾನಾಭಿವೃದ್ಧಿಗೆ ಸಹಾಯ ಮಾಡುತ್ತದೆ.

ಇಂದಿನ ಪೀಳಿಗೆಯು ಸಾಮಾಜಿಕ ಜಾಲತಾಣ ಎಂಬ ಪ್ರಪಂಚದಲ್ಲಿ ಮೈಮರೆತಿದ್ದಾರೆ. ಪರಿಸ್ಥಿತಿಯ ಅರಿವಿಲ್ಲದೆ ಮೊಬೈಲ್ ಹಿಡಿದು ಪ್ರತಿಯೊಂದು ವಿಷಯವನ್ನು ತಮ್ಮದೇ ಜಗತ್ತಿನಲ್ಲಿ ವಿಶ್ಲೇಷಣೆ ಮಾಡುತ್ತಾರೆ. ಕಾಲೇಜಿನಲ್ಲಿ ಗ್ರಂಥಾಲಯಗಳಿದ್ದರೂ ಪರೀಕ್ಷೆ ಸಮಯದಲ್ಲಿ ಮಾತ್ರ ಅವುಗಳನ್ನು ಬಳಕೆ ಮಾಡಿಕೊಂಡು ಉಳಿದ ಸಮಯದಲ್ಲಿ ಆಚೆ ತಿರುಗಿಯೂ ನೋಡದ ವಿದ್ಯಾರ್ಥಿಗಳು ನಮಗೆ ಕಾಣಸಿಗುತ್ತಾರೆ.

ರವೀಂದ್ರನಾಥ ಠಾಗೋರ್ ಅವರ ಪ್ರಕಾರ ''ಜ್ಞಾನದ ಬೆಳಕು ಹೊರಗಡೆಯಿಂದ ಬೆಳಗಿಸಬಲ್ಲ ಲಾಟೀನಿನ ಬೆಳಕಲ್ಲ. ಅದು ಸ್ವಯಂಪ್ರಭೆ ಬೀರುವ ಮಿಂಚಿನ ಹುಳದ ಜೀವಕ್ರಿಯೆಯ ಫಲದಿಂದ ಬಂದ ಬೆಳಕು. ಶಿಕ್ಷಣ ಪ್ರತಿಯೊಬ್ಬ ಮಾನವನ ಹಕ್ಕು. ನಾವು ನಾಳೆ ಸೋಲುತ್ತೇವೋ, ಗೆಲ್ಲುತ್ತೇವೋ ಅದು ಬೇರೆಯದೇ ಪ್ರಶ್ನೆ, ಆದರೆ ಗೆಲ್ಲುತ್ತೇವೆ ಎಂಬ ಭರವಸೆಯಿಂದ ಬದುಕಲು ಸಾಧ್ಯ, ಈ ಭರವಸೆಯನ್ನು ಶಿಕ್ಷಣ ನೀಡುತ್ತದೆ.''

ವಿದ್ಯಾರ್ಥಿ ಜೀವನದಲ್ಲಿ ಕಲಿತ ಆದರ್ಶಗಳನ್ನು ನಮ್ಮ ಜೀವನದಲ್ಲಿ ಮೈಗೂಡಿಸಿಕೊಂಡು ಸಮಾಜದಲ್ಲಿ ಉತ್ತಮ ನಾಗರಿಕರಾಗಿ ಗೌರವಿಸಲ್ಪಟ್ಟು, ಉತ್ತಮ ರೀತಿಯಲ್ಲಿ ಜೀವನ ನಡೆಸಬೇಕು. ನಾನು ನನ್ನೊಳಗಿನ ಆತ್ಮಶುದ್ಧಿಗಾಗಿ ಶಿಕ್ಷಣ ಪಡೆಯುತ್ತಿದ್ದೇನೆ, ಆದ್ದರಿಂದ ಗ್ರಂಥಾಲಯವನ್ನು ಉತ್ತಮ ರೀತಿಯಲ್ಲಿ ಬಳಸಿ ಜ್ಞಾನವನ್ನು ವಿಮರ್ಶಿಸುತ್ತಾ ಹೊಸ ಜ್ಞಾನವನ್ನು ಕಾಲೇಜು ಗ್ರಂಥಾಲಯದ ಮೂಲಕ ಪಡೆದು ಭರವಸೆಯ ಬೆಳಕಿನೊಂದಿಗೆ ಅಜ್ಞಾನದ ಕತ್ತಲನ್ನು ಸೀಳಿ ಹೊಸ ಬದುಕಿನತ್ತ ಹೆಜ್ಜೆ ಹಾಕೋಣ. ●

ಜನ ಮರುಳೋ ಜಾತ್ರೆ ಮರುಳೋ

✍ **ಭಾಗ್ಯಶ್ರೀ ಹೆಚ್.,** ದ್ವಿತೀಯ ಬಿ.ಎ.

ಮೊದಲು ಚಿನ್ನವನ್ನು ಕೊಳ್ಳುವುದು, ಅದನ್ನು ಇಟ್ಟುಕೊಳ್ಳುವುದು, ಹಣವನ್ನು ಇಟ್ಟುಕೊಂಡಂತೆ ಎನ್ನುವ ಭಾವನೆ ಇತ್ತು. ಆದರೆ ಈಗ ಹಾಗಲ್ಲ. ಮಕ್ಕಳ ಕಾಲಕ್ಕೆ ಆಗುತ್ತದೆ ಎಂದು ಚಿನ್ನ ಖರೀದಿಸುವವರು ಈಗ ಕಡಿಮೆ ಆಗಿದ್ದಾರೆ.

ಇದು ಅತ್ಯಂತ ಹಳೆಯ ಮಾತು. ಆದರೂ ಇದು ಎಲ್ಲ ಕಾಲಕ್ಕೂ ಅನ್ವಯಿಸುತ್ತದೆ. ಎಲ್ಲ ರೈತರೂ ಟೊಮೆಟೊ ಬೆಳೆದು ಅದರ ಬೆಲೆ ಕುಸಿದಾಗ, ಎಲ್ಲ ತಂದೆ-ತಾಯಿಯರು ಮಕ್ಕಳೂ ಇದನ್ನೇ ಓದಬೇಕೆಂದು ಹಠ ಹಿಡಿದು ಕುಳಿತಾಗ, ಕೊನೆಗೆ ಅಕ್ಷಯ ತೃತೀಯಾ ಎಂದು ಚಿನ್ನದಂಗಡಿಯ ಮುಂದೆ ಕ್ಯೂ ನಿಂತು ಕೊಳ್ಳುವಾಗ... ಇಂಥವರನ್ನು ಕಂಡಾಗ ''ಜನ ಮರುಳೋ ಜಾತ್ರೆ ಮರುಳೋ'' ಎಂಬ ಮಾತು ತಪ್ಪದೇ ನೆನಪಾಗುತ್ತದೆ. ಇದರ ಅರ್ಥ ಅಂದರೆ ಸರಿಯಾಗಿ ವಿವೇಚನೆ ಇಲ್ಲದೆ ಮಾಡುವ ಕೆಲಸ ಎಂದು. ಜಾತ್ರೆಯನ್ನು ನಾವೆಲ್ಲರೂ ನೋಡಿದ್ದೇವೆ. ಇಲ್ಲಿ ಏನಾಗುತ್ತದೆ ಎಂದರೆ ಎಲ್ಲರೂ ಯಾವುದಕ್ಕೆ ನುಗ್ಗುತ್ತಾರೋ ಅದು ಚೆನ್ನಾಗಿದೆ ಎಂದೇ ಅರ್ಥ. ಅದಕ್ಕೆ ಎಲ್ಲರೂ ಹೋಗುತ್ತಾರೆ. ತುಂಬಾ ರಶ್ ಇರುವ ಅಂಗಡಿಗೆ ಮತ್ತಷ್ಟು ಜನ ಮುಗಿಬೀಳುತ್ತಾರೆ. ಜಾತ್ರೆಯಲ್ಲಿ ಬರುವ ಅಂಗಡಿಗಳಿಂದ ಹಿಡಿದು ಮನರಂಜನೆಯ ಹಲವು ಆಟಗಳು, ನೋಟಗಳು ಇವೆಲ್ಲವುಗಳಿಗೂ ಇದು ಅನ್ವಯಿಸುತ್ತದೆ, ಅಷ್ಟೇ ಅಲ್ಲ ಜ್ಯೂಸ್ ಅಂಗಡಿ, ಆಹಾರದ ಅಂಗಡಿಗಳವರೆಗೂ. ಅಂಗಡಿಯಿಂದ ಹೊರ ಬಂದ ನಂತರ ಹೇಳುತ್ತೇವೆ – ಆ ವಸ್ತು ನಾನು ಅಂದುಕೊಂಡಷ್ಟೇನೂ ಚೆನ್ನಾಗಿ ಇರಲಿಲ್ಲ, ಎಲ್ಲರೂ ತಗೊಳ್ತಾ ಇದ್ದದ್ದು ನೋಡಿ ನಾನೂ ತಗೊಂಡೆ. ಆದರೆ, ಏನೂ ಪ್ರಯೋಜನವಿಲ್ಲ, ಅಕ್ಷಯ ತೃತೀಯಾವನ್ನು ಚಿನ್ನಕೊಳ್ಳುವ ಸಂಭ್ರಮದ ಹಬ್ಬವಾಗಿಸಿದ, ಚಿನ್ನ ಮಾರಾಟದ ಭರಾಟೆಯನ್ನು ಹೆಚ್ಚಿಸಿದ ಜಾಹೀರಾತುಗಳು, ಮಾಧ್ಯಮಗಳು, ಕೊಳ್ಳುವುದಕ್ಕೆ ಕಷ್ಟಪಡುವವರನ್ನು, ಕೊಳ್ಳಲೇಬೇಕೆಂದು ಭ್ರಮಿಸುವವರನ್ನು ನೋಡಿದಾಗ ಯಾರಿಗಾದರೂ ಜನ ಮರುಳೋ ಜಾತ್ರೆ ಮರುಳೋ ಎಂದು ಅನ್ನಿಸದೇ ಇರದು. ಯಾವಾಗ ಮಾರುಕಟ್ಟೆಯಲ್ಲಿ ಚಿನ್ನದ ಮೇಲಿನ ಹೂಡಿಕೆ ಲಾಭದಾಯಕ ಅಲ್ಲ ಎನ್ನುವುದು ಅರಿವಾಯಿತೋ ಆಗ ಚಿನ್ನವನ್ನು ಕೊಳ್ಳುವವರ ಸಂಖ್ಯೆಯೂ ಕಡಿಮೆ ಆಯಿತು. ಅಕ್ಷಯ ತೃತೀಯಾದ ದಿನ ಚಿನ್ನ ಬೇಕೆಂದು ಮೊದಲೇ ಬುಕ್ ಮಾಡುತ್ತಿದ್ದ, ಮಧ್ಯರಾತ್ರಿಯವರೆಗೂ ಅಂಗಡಿ ತೆರೆದು ಗ್ರಾಹಕರನ್ನು ನಿಭಾಯಿಸಲು ಹೈರಾಣಾಗುತ್ತಿದ್ದ ವ್ಯಾಪಾರಿಗಳು ಈಗ ಅಂಥ ಪರಿಸ್ಥಿತಿಯಲ್ಲಿ ಇಲ್ಲ. ಅಕ್ಷಯ ತೃತೀಯಾ ಕೂಡ ಉಳಿದ ದಿನದಂತೆ (ಅಂದರೆ ಹತ್ತರಲ್ಲಿ ಹನ್ನೊಂದು ಎಂಬಂತೆ) ಆಗಿದೆ ಅಷ್ಟೆ. ಮತ್ತೆ ಅಕ್ಷಯ ತೃತೀಯಾ ಬಂದಿದೆ, ಚಿನ್ನ ಬಳಕೆಗೆ ಬೇಕಾ? ಅಂದರೆ, ಮದುವೆಗೆ ಬೇಕಾಗಿದೆ. ಬಹಳ ದಿನಗಳಿಂದ ಖರೀದಿಸಬೇಕು ಎಂದುಕೊಂಡಿದ್ದೆ, ಹೀಗೆಲ್ಲಾ ಯೋಚಿಸುತ್ತಿದ್ದೀರಾ? ಒಂದು ಮಾತು ಕೇಳಿ.

ಚಿನ್ನ ಖರೀದಿಗೆ ಯಾವ ದಿನದ ಹಂಗಿಲ್ಲ. ಹೂಡಿಕೆಯಾಗಿ ಚಿನ್ನವನ್ನು ಈಗ ಯಾರೂ ನೋಡುವುದಿಲ್ಲ. ವರ್ಷದಿಂದ ವರ್ಷಕ್ಕೆ ಚಿನ್ನದ ಮೇಲಿನ ಹೂಡಿಕೆ ಲಾಭ ಕೊಡುವ ಬದಲು ನಷ್ಟವನ್ನು ತರುತ್ತಿದೆ. ಮೊದಲು ಚಿನ್ನವನ್ನು ಕೊಳ್ಳುವುದು, ಅದನ್ನು ಇಟ್ಟು ಕೊಳ್ಳುವುದು ಹಣವನ್ನು ಇಟ್ಟುಕೊಂಡಂತೆ ಎನ್ನುವ ಭಾವನೆ ಇತ್ತು. ಆದರೆ ಈಗ ಹಾಗಲ್ಲ. ಮಕ್ಕಳ ಕಾಲಕ್ಕೆ ಆಗುತ್ತದೆ ಎಂದು ಚಿನ್ನ ಖರೀದಿಸುವವರು ಈಗ ಕಡಿಮೆ ಆಗಿದ್ದಾರೆ.

ಚಿನ್ನವನ್ನು ಪೇಪರ್ ರೀತಿಯಲ್ಲಿ ಹೇಗೆ ಬ್ಯಾಂಕಿನಲ್ಲಿ ನಾವು ಇಟ್ಟ ಹಣವನ್ನು ಪಾಸ್ ಬುಕ್‌ನಲ್ಲಿ ನೋಡಿಕೊಂಡು ಸಂತೋಷ ಪಡುತ್ತೇವೋ ಹಾಗೆ ನಾವು ಖರೀದಿಸಿದ ಚಿನ್ನಕ್ಕೆ ಪ್ರತಿಯಾಗಿ ಕೊಡುವ ಸರ್ಟಿಫಿಕೇಟ್ ಕೂಡ ಲಭ್ಯ ಇದೆ. ಮತ್ತೀಗ ಅಕ್ಷಯ ತೃತೀಯಾ ಬಂದಿದೆ. ಚಿನ್ನ ಕೊಳ್ಳಬೇಕು ಎಂದು ಮುಗಿ ಬೀಳಬೇಡಿ. ಬಳಕೆಗೆ ಬೇಕು ಅನ್ನಿಸಿದರೆ ಮಾತ್ರ ಖರೀದಿಸಿ, ಹೂಡಿಕೆಗೆ ಮಾತ್ರ ಕೊಳ್ಳಬೇಡಿ.

●

ಅಭ್ಯಾಸವಿದ್ದಂತೆ ವಿದ್ಯೆ ಬರುತ್ತದೆ. ಕರ್ಮವಿದ್ದಂತೆ ಬುದ್ಧಿಯುಂಟಾಗುತ್ತದೆ. ಪ್ರಯತ್ನವಿದ್ದಂತೆ ಸಂಪತ್ತು ದೊರೆಯುತ್ತದೆ. ಭಾಗ್ಯವಿದ್ದಂತೆ ಫಲ ದೊರೆಯುತ್ತದೆ – **ಲೋಕೋಕ್ತಿ**

ಉಡುಪಿಯಲ್ಲಿ ಉಪ್ಪಿನ ಸತ್ಯಾಗ್ರಹ

✍ **ನವ್ಯಶ್ರೀ ಶೆಟ್ಟಿ,** ದ್ವಿತೀಯ ಬಿ.ಎ. (ಪತ್ರಿಕೋದ್ಯಮ ವಿಭಾಗ)

ದೇಶ 75ನೇ ಸ್ವಾತಂತ್ರ್ಯೋತ್ಸವದ ಸಂಭ್ರಮದಲ್ಲಿದೆ. ಸುಮಾರು 90 ವರ್ಷಗಳ ಹೋರಾಟದ ಫಲ ಇಂದು ನಾವು ಅನುಭವಿಸುತ್ತಿರುವ ಸ್ವಾತಂತ್ರ್ಯ. ದೇಶ ಪ್ರೇಮದ ಕಿಚ್ಚು ಕರಾವಳಿ ಜಿಲ್ಲೆಗಳಲ್ಲಿ ಕೂಡ ಹರಡಿತ್ತು. ದೇಶವನ್ನು ಆಂಗ್ಲರಿಂದ ಮುಕ್ತಗೊಳಿಸಬೇಕು ಎನ್ನುವ ನಿಟ್ಟಿನಲ್ಲಿ ನಡೆದ ಹೋರಾಟದಲ್ಲಿ ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಯಲ್ಲೂ ಸ್ವಾತಂತ್ರ್ಯ ಪ್ರೇಮದ ಕಿಚ್ಚು ಹರಡಿತ್ತು. ದೇಶದ 75ನೇ ವರ್ಷದ ಸಾರ್ಥಕ ಸ್ವಾತಂತ್ರ್ಯವನ್ನು ಸಂಭ್ರಮಿಸುವ ಹಿನ್ನೆಲೆಯಲ್ಲಿ ಕರಾವಳಿ ಜಿಲ್ಲೆಗಳಲ್ಲಿ ಹುಟ್ಟಿಕೊಂಡಿದ್ದ ಸ್ವಾತಂತ್ರ್ಯದ ಕೆಲ ಹೆಜ್ಜೆ ಗುರುತುಗಳನ್ನು ಸ್ಮರಿಸಿಕೊಳ್ಳುವ ನಿಟ್ಟಿನಲ್ಲಿ ಈ ಲೇಖನ.

ಸ್ವಾತಂತ್ರ್ಯದ ಕಿಚ್ಚು ಜೋರಾಗಿ ಇತ್ತು. ಕರುನಾಡಲ್ಲೂ ಕೂಡ ಹೋರಾಟದ ಕಿಚ್ಚು ಹಬ್ಬಿತ್ತು. ಹೋರಾಟ ಜೋರಾಗುತ್ತಿದ್ದಂತೆ ಕೃಷ್ಣನ ನಗರಿಯಲ್ಲಿ ಕೂಡ ಹೋರಾಟ ಜೋರಾಗಿತ್ತು. ಉಡುಪಿಯಲ್ಲಿ ತಿಲಕ್ ಮತ್ತು ಅನಿಬೆಸೆಂಟ್ ಅವರ ಪ್ರಭಾವಕ್ಕೆ ಅನೇಕರು ಒಳಗಾಗಿದ್ದರು. 'ಹೋಮ್ ರೂಲ್' ಪ್ರಭಾವದಿಂದಾಗಿ 1916-1917ರಲ್ಲಿ ಉಡುಪಿಯಲ್ಲಿ ಹೋರಾಟ ಆರಂಭವಾಯಿತು. ಆ ಕಾಲದಲ್ಲಿ ಬೊಂಬಾಯಿಯಿಂದ ಅಥವಾ ಮದ್ರಾಸ್‌ನಿಂದ ಊರಿಗೆ ಹಿಂದಿರುಗಿದವರು ಈ ಹೋರಾಟದಲ್ಲಿ ಭಾಗವಹಿಸುತ್ತಿದ್ದರು. ಆದರೆ ಇದರ ಕಾವು ಅಷ್ಟೇನೂ ಜೋರಾಗಿ ಇರಲಿಲ್ಲ. 1919ರಲ್ಲಿ ರೌಲೆಟ್ ಸತ್ಯಾಗ್ರಹದ ನೇತೃತ್ವ ವಹಿಸಿ ಗಾಂಧೀಜಿ ಚಳುವಳಿಗೆ ನೇರವಾಗಿ ಧುಮುಕಿದ ಬಳಿಕ ಇಲ್ಲೂ ಚಳುವಳಿಗಳು ಕಾವು ಪಡೆದುಕೊಂಡವು. ಅಜ್ಜರಕಾಡಿನ ಬಂಡೆಗಳ ಬಳಿ ಜನರನ್ನು ಒಂದೆಡೆ ಸೇರಿಸಿ ರಾಷ್ಟ್ರೀಯ ಚಳುವಳಿಯ ಬಗ್ಗೆ ಮಾಹಿತಿ ಕೊಡುತ್ತಾ, ಭಾಷಣಗಳ ಮೂಲಕ ಸಂಘಟಿಸುವ ಕಾರ್ಯ ಮಾಡುತ್ತಿದ್ದರು ಹೋರಾಟಗಾರರು. 1919ರಲ್ಲಿ ಆರಂಭವಾದ ಚಳುವಳಿಯ ಕಾವು 1947ರ ತನಕವೂ ಸಕ್ರಿಯವಾಗಿತ್ತು. 1920ರ ಅಸಹಕಾರ ಚಳುವಳಿಯ ಸಂದರ್ಭದಲ್ಲಿ ಹಲವರು ಶಾಲೆಗಳನ್ನು, ಕೋರ್ಟ್‌ಗಳನ್ನು ಮತ್ತು ಸರಕಾರಿ ನೌಕರಿಯನ್ನು ಬಿಟ್ಟರು. ಉಡುಪಿಯಲ್ಲಿ ಮತ್ತು ಆಸುಪಾಸಿನ ಕೆಲವು ಪ್ರದೇಶಗಳಲ್ಲಿ ರಾಷ್ಟ್ರೀಯ ಶಾಲೆಗಳು ಆರಂಭವಾದವು. ವಿದೇಶಿ ವಸ್ತುಗಳನ್ನು ಬಹಿಷ್ಕರಿಸಿದರು.

1930ರಲ್ಲಿ ಉಪ್ಪಿನ ಸತ್ಯಾಗ್ರಹ ಕೂಡ ಜೋರಾಗಿ ನಡೆಯಿತು. ಏಪ್ರಿಲ್ 13, 1930ರಂದು ಮುಂಜಾನೆ ಉಡುಪಿಯ ಶ್ರೀಕೃಷ್ಣ, ಅನಂತೇಶ್ವರ ದೇವರಿಗೆ ಪ್ರಾರ್ಥಿಸಿ, ಧ್ವಜ ವಂದನೆ ಮಾಡಿ ಮೆರವಣಿಗೆಯಲ್ಲಿ ನೂರಾರು ಜನ ರಥಬೀದಿಯಿಂದ ಹೊರಟು ಮಲ್ಪೆ ವಡಬಾಂಡೇಶ್ವರ ಬಲರಾಮ ದೇವಸ್ಥಾನದ ಎದುರಿಗೆ ಸೇರಿ ಪ್ರಾರ್ಥನೆ ಮಾಡಿದ್ದರು. ಆ ಬಳಿಕ ನಾಯಕರುಗಳಿಂದ ಸೂಚನೆಗಳನ್ನು ಪಡೆದು, ಕಡಲ ಕಿನಾರೆಗೆ ಹೋಗಿ ಅಲ್ಲಿ ಪಾತ್ರೆಗಳಲ್ಲಿ ಸಮುದ್ರದ ನೀರನ್ನು ಸಂಗ್ರಹಿಸಿ ಹತ್ತಿರದ ತೆಂಗಿನ ತೋಟಗಳಲ್ಲಿ ಒಲೆ ಹಾಕಿ ಕುದಿಸಿ ಉಪ್ಪನ್ನು ತಯಾರಿಸಿದರು. ಪುನಃ ಅವರೆಲ್ಲರೂ ತಂಡೋಪತಂಡವಾಗಿ ಜಯಘೋಷ ಮಾಡುತ್ತಾ ಉಡುಪಿಯ ಕಡೆಗೆ ಹಲವು ಮೆರವಣಿಗೆಗಳಲ್ಲಿ ಮರಳಿದರು. ತಾವು ತಯಾರಿಸಿದ ಉಪ್ಪನ್ನು ದಾರಿಯಲ್ಲಿ ಹರಾಜು ಕೂಗುತ್ತಾ ಬರುತ್ತಿದ್ದರು. ಆದಿಉಡುಪಿಯಲ್ಲಿ ಸಾಂಕೇತಿಕವಾಗಿ ಉಪ್ಪಿನ ಹರಾಜು ನಡೆದು ನಂತರ ಉಡುಪಿಯ ಜಟ್ಕ ಸ್ಟ್ಯಾಂಡ್ ಬಳಿ ಮತ್ತು ಪೇಟೆಯ ಅಲ್ಲಲ್ಲಿ ಹರಾಜುಗಳು ನಡೆದು ಉಪ್ಪಿನ ಕಾನೂನನ್ನು ಮುರಿದರು. ಸ್ವಾತಂತ್ರ್ಯ ಹೋರಾಟದ ದೇಶಪ್ರೇಮ ಕೇವಲ ಉಡುಪಿಯ ನಗರ ಪ್ರದೇಶಕ್ಕೆ ಮಾತ್ರ ಸೀಮಿತವಾಗಿರಲಿಲ್ಲ. ಉಡುಪಿ, ಕುಂದಾಪುರ, ಬೈಂದೂರು, ಕಾರ್ಕಳದ ಹಳ್ಳಿಹಳ್ಳಿಗೂ ಹಬ್ಬಿತ್ತು. ಇದು ಉಡುಪಿ ಜನರ ದೇಶ ಪ್ರೇಮದ ಹೆಗ್ಗುರುತುಗಳು.

ನಾವಿಂದು ಸ್ವಾತಂತ್ರ್ಯ ಸಿಕ್ಕಿದೆ ಎನ್ನುವ ನೆಪದಲ್ಲಿ, ಅದರ ಹಿಂದಿನ ತ್ಯಾಗ, ಬಲಿದಾನ, ಹೋರಾಟಗಳ ಅರ್ಥ ತಿಳಿಯದೇ ಆಚರಿಸುತ್ತಿದ್ದೇವೆ. ಅದೆಷ್ಟೋ ಜನರಿಗೆ ಉಡುಪಿಯಲ್ಲಿ ಕೂಡ ಹೋರಾಟದ ಕಿಚ್ಚಿತ್ತು ಎನ್ನುವುದು ಗೊತ್ತಿಲ್ಲ. ಯಾರೋ ಹೋರಾಡಿ ಸ್ವಾತಂತ್ರ್ಯ ತಂದುಕೊಟ್ಟರು ಅನ್ನುವ ಅಸಡ್ಡೆಯಲ್ಲಿ ಇಂದು ಕೆಲವರು ಇದ್ದಾರೆ. ನಿಜವಾದ ಭಾರತೀಯರಾದ ನಾವು ನಮ್ಮ ಹಿರಿಯರ ತ್ಯಾಗ ಬಲಿದಾನದ ಸಂಕೇತ ಇಂದು ನಾವು ಅನುಭವಿಸುತ್ತಿರುವ ಸ್ವಾತಂತ್ರ್ಯ ಎಂದು ತಿಳಿದುಕೊಂಡು ಮುಂದೆ ಸಾಗಬೇಕಿದೆ.

ಸ್ವತಂತ್ರ ಭಾರತಕ್ಕೆ ನೂರರ ಮುನ್ನೋಟ

✍ **ಕೆ. ಈ. ದಿಶಾ ಭಟ್**, ಪ್ರಥಮ ಬಿ.ಕಾಂ.

ಪೀಠಿಕೆ:

ಭಾರತ ಒಂದು ಪ್ರಜಾಪ್ರಭುತ್ವ ದೇಶ. ಭಾರತ ದೇಶವು ಸ್ವಾತಂತ್ರ್ಯ ನಂತರ ಅಲ್ಪಸ್ವಲ್ಪ ಪ್ರಗತಿಯನ್ನು ಕಂಡಿದೆ. ಭಾರತವು ಇನ್ನು ಪ್ರಗತಿ ಹೊಂದುತ್ತಿರುವ ರಾಷ್ಟ್ರವಾಗಿಯೇ ಉಳಿದಿದೆ. ಯಾವುದೇ ಒಂದು ದೇಶ ಪ್ರಗತಿ ಸಾಧಿಸಲು ಅಲ್ಲಿಯ ಜನರಲ್ಲಿ ದೇಶದ ಮೇಲೆ ಅಪಾರ ಭಕ್ತಿ ಗೌರವಗಳಿರಬೇಕು. ದೇಶ ಎಂದರೆ ಭೌಗೋಳಿಕ ಅಸ್ತಿತ್ವ ಮಾತ್ರವಲ್ಲ ಅದು ಪ್ರಜೆಗಳ ಒಕ್ಕೂಟ. ಸ್ವಾತಂತ್ರ್ಯ ದೊರಕಿ ಇಷ್ಟು ವರ್ಷವಾದರೂ ಪರಿಪೂರ್ಣ ಸ್ವಾತಂತ್ರ್ಯ ನಮಗಿನ್ನೂ ದೊರಕಿಲ್ಲ. ಮಹಾತ್ಮ ಗಾಂಧೀಜಿಯವರ ಪ್ರಕಾರ ಒಬ್ಬ ಒಂಟಿ ಹೆಣ್ಣು ಏಕಾಂಗಿಯಾಗಿ ನಡುರಾತ್ರಿಯಲ್ಲಿ ಯಾರ ಭಯವೂ ಇಲ್ಲದೆ ನಿರ್ಭಯವಾಗಿ ಓಡಾಡುತ್ತಾಳೋ ಅಂದು ನಮ್ಮ ಭಾರತಕ್ಕೆ ಸಂಪೂರ್ಣ ಸ್ವಾತಂತ್ರ್ಯ ದೊರೆತಂತೆ ಎಂದಿದ್ದರು. ಆದರೆ ಆ ಮಾತು ಇನ್ನೂ ಮಾತಾಗಿಯೇ ಉಳಿದಿದೆ. ಈ ಭಾರತ ದೇಶಾದ್ಯಂತ ಪುಣ್ಯಸ್ಥಳದಲ್ಲಿ ಹುಟ್ಟಿರುವ ನಾವೇ ಧನ್ಯರು. 'ಸಾರೆ ಜಹಾಂಸೆ ಅಚ್ಛಾ ಹಿಂದೂಸ್ಥಾನ ಹಮಾರ' ಎಂಬ ವಾಕ್ಯದಂತೆ ಭಾರತವೇ ನಮ್ಮ ಮನೆ, ಇಲ್ಲಿ ನಾವೆಲ್ಲರೂ ಬಂಧು-ಮಿತ್ರರಂತೆ ಒಟ್ಟಾಗಿ ಕೂಡಿ ಬಾಳಬೇಕು. ಕುವೆಂಪು ಅವರು ವಿಶ್ವಮಾನವ ಸಂದೇಶದಲ್ಲಿ ಈ ರೀತಿ ಹೇಳಿದ್ದಾರೆ. ನಮಗೆ ಬೇಕಾದುದು ಆ ಮತ ಈ ಮತ ಅಲ್ಲ; ಮನುಜ ಮತ, ಆ ಪಥ ಈ ಪಥ ಅಲ್ಲ ವಿಶ್ವಪಥ. ಜನರೇ ಈ ದೇಶದ ಆಸ್ತಿ, ಜನರಿಂದಲೇ ದೇಶದ ಸರ್ವತೋಮುಖ ಅಭಿವೃದ್ಧಿ ಸಾಧ್ಯ.

ಸ್ವಾತಂತ್ರ್ಯ ದೊರಕಿ ನೂರು ವರ್ಷಗಳತ್ತ ಸಾಗುತ್ತಿರುವ ಭಾರತವು ಅದೆಷ್ಟೋ ವಿಷಯಗಳಲ್ಲಿ ಅಭಿವೃದ್ಧಿ ಕಂಡಿದೆ, ಕಾಣುತ್ತಿದೆ. ಹಾಗೆಯೇ ಕೆಲವೊಂದು ವಿಷಯಗಳಲ್ಲಿ ಭಾರತ ಹಿನ್ನಡೆಯನ್ನು ಕಂಡಿದೆ. ಸಾಮಾಜಿಕವಾಗಿ ಇಂದು ಭಾರತವು ಜಾತಿಯನ್ನು ವಿಭಜಿಸಿ ಆಳುವ ಪರಿಸ್ಥಿತಿ ಉಂಟಾಗಿದೆ. ಜಾತಿ ಸಂಘಗಳ ಮೀಸಲಾತಿ ಇಡೀ ಸಾಮಾಜಿಕ ವ್ಯವಸ್ಥೆಯನ್ನೇ ಹದಗೆಡಿಸಿದೆ. ಭಾರತ ಅಭಿವೃದ್ಧಿ ಹೊಂದುತ್ತಿರುವ ದೇಶ ಆದುದರಿಂದ ಹಲವಾರು ವ್ಯವಸ್ಥೆಯಲ್ಲಿ ತಕ್ಕಷ್ಟುಮಟ್ಟಿಗೆ ಸುಧಾರಣೆ ಆಗುತ್ತಿದೆ.

ಶಿಕ್ಷಣ: ನೈತಿಕ ಶಿಕ್ಷಣ ನೀಡುವಲ್ಲಿ ಇಂದಿನ ಶಿಕ್ಷಣ ಕಾರ್ಯಪ್ರವೃತ್ತರಾಗಬೇಕು. ಶಿಕ್ಷಣ ಎಂದರೆ ಮಕ್ಕಳನ್ನು ನಾಡಿನ ಶ್ರೇಷ್ಠ ನಾಗರಿಕರನ್ನಾಗಿ ಮಾಡಲು ನಾವು ಒದಗಿಸುವ ಸೌಲಭ್ಯ ಎಂಬುದಾಗಿ ಡಾ। ರಾಧಾಕೃಷ್ಣನ್ ಹೇಳಿದ್ದಾರೆ. ಆದರೆ ಇಂದಿನ ದಿನಗಳಲ್ಲಿ ಶಿಕ್ಷಣ ಎಂದರೆ ಒಂದು ದಂಧೆಯಾಗಿ ಮಾರ್ಪಟ್ಟಿದೆ ಎಂದರೂ ತಪ್ಪಾಗಲಾರದು. ಭ್ರಷ್ಟಾಚಾರ ಎಂಬ ಕಪ್ಪು ಚುಕ್ಕೆ ಸ್ವತಂತ್ರ ಭಾರತದ ಗೌರವಕ್ಕೆ ಧಕ್ಕೆ ಉಂಟುಮಾಡುತ್ತಿದೆ. ಶಿಕ್ಷಣ ವ್ಯವಸ್ಥೆಯಲ್ಲಿ ಭಾರತದ ಪ್ರಗತಿಯನ್ನು ಕಾಣಬೇಕು. ಪ್ರತಿಯೊಬ್ಬ ಪ್ರಜೆಗೂ ಶಿಕ್ಷಣ ದೊರೆತಲ್ಲಿ ಭಾರತದ ಅಭಿವೃದ್ಧಿ ಇನ್ನಷ್ಟು ವೇಗವಾಗಿ ಸಾಗುತ್ತದೆ.

ಆರ್ಥಿಕತೆ: ಆರ್ಥಿಕವಾಗಿ ಭಾರತ ಅಷ್ಟೇನೂ ಮುಂದುವರೆದಿಲ್ಲ. ಸ್ವಾತಂತ್ರ್ಯ ದೊರೆತಾಗ ಒಂದು ಡಾಲರಿಗೆ ಒಂದು ರೂಪಾಯಿ ಮೌಲ್ಯವಿದ್ದರೆ ಈಗ ಡಾಲರಿಗೆ 65 ರೂಪಾಯಿಗಳಾಗಿದೆ. ಇದೊಂದೇ ನಮ್ಮ ಆರ್ಥಿಕ ಸ್ಥಿತಿಯನ್ನು ಪ್ರಪಂಚಕ್ಕೆ ತಿಳಿಸುವ ಹಾಗಿದೆ. ಕೆಲವೊಬ್ಬರು ಕೋಟ್ಯಾಧಿಪತಿಗಳಾಗಿದ್ದರೆ ಇನ್ನೂ ಕೆಲವರು ಒಂದೊತ್ತಿನ ಊಟಕ್ಕೂ ಕಷ್ಟಪಡುತ್ತಾರೆ.

ಕೃಷಿ: ಭಾರತದ ಆರ್ಥಿಕ ಬೆನ್ನೆಲುಬು ಎಂದೇ ಹೇಳಲಾಗುವ ಕೃಷಿಗೆ ಇಲ್ಲಿ ಕೈಗಾರಿಕೆಗಿಂತಲೂ ಅಧಿಕ ಪ್ರಾಶಸ್ತ್ಯ ನೀಡಲಾಗುತ್ತಿದೆ. ನವೀನ ತಂತ್ರಜ್ಞಾನಗಳ ಅಳವಡಿಕೆಯೊಂದಿಗೆ ಕೃಷಿಯನ್ನು 'ನಂ. ಒನ್' ಪಟ್ಟಕ್ಕೆ ಏರಿಸಲಾಗುತ್ತಿದೆ. ಈ ಮೂಲಕ ದೇಶದ ಜನರ ಹಸಿವನ್ನು ತಣಿಸುವ ಕೆಲಸ ಸಾಗುತ್ತಿದೆ.

ಸ್ವಾತಂತ್ರ್ಯ ಸಿಕ್ಕಿ 75ನೇ ವರುಷಕ್ಕೆ ನಾವು ಕಾಲಿಟ್ಟರೂ ಭಾರತದಲ್ಲಿ ಹಲವಾರು ಸಮಾಜಕ್ಕೆ ಕಂಟಕವಾಗುವ ಕಾರ್ಯಗಳು ನಡೆಯುತ್ತಿವೆ. ಉದಾಹರಣೆಗೆ ಕೋಮುಗಲಭೆ, ಸ್ತ್ರೀದೌರ್ಜನ್ಯ ಇನ್ನೂ ಹಲವಾರು ಅಂಶಗಳನ್ನು ನಾವು ಕಾಣಬಹುದು. ಇದಲ್ಲದೆ ಭಾರತ ಸಂಸ್ಕೃತಿಗಳ ಸಂಪ್ರದಾಯ ಆಚರಣೆಗಳ ತವರೂರು ಆದರೆ ಆಧುನಿಕತೆಯ ಹೆಸರಲ್ಲಿ ಅವೆಲ್ಲಾ ಮೂಲೆಗುಂಪಾಗುತ್ತಿದೆ.

ಭಾರತ ದೇಶ ಬಡಜನರಿಂದಲೇ ತುಂಬಿದ್ದರೂ (ಶೇಕಡಾ 43%) ಶ್ರೀಮಂತ ರಾಷ್ಟ್ರ ಎಂಬ ಹಣೆಪಟ್ಟಿಯನ್ನು ಕಟ್ಟಿಕೊಂಡಿದೆ. ಭಾರತದಲ್ಲಿ ಸ್ನೇಹ-ಸೌಹಾರ್ದವನ್ನು ಹೊರತುಪಡಿಸಿ ಬೇರೆ ರೀತಿಯ ಸಂಪತ್ತು ಹೆಚ್ಚೇನಿಲ್ಲ. ಸ್ವತಂತ್ರ ಭಾರತಕ್ಕೆ ನೂರು ವರ್ಷ ತುಂಬುವ ಹೊತ್ತಿಗೆ ಭಾರತ ಪ್ರತಿಯೊಂದು ವ್ಯವಸ್ಥೆಯಲ್ಲೂ ಮುಂಚೂಣಿಯಲ್ಲಿರಬೇಕು ಎನ್ನುವುದು ನಮ್ಮೆಲ್ಲರ ಆಶಯವಾಗಬೇಕು. ಪ್ರತಿಯೊಬ್ಬ ನಾಗರಿಕನಿಗೂ ಸಮಾನತೆ ದೊರಕಬೇಕು.

ಬೀಗುತ್ತಿರು ನೀನು ಉಸಿರಿರುವ ತನಕ ''ಭಾರತೀಯನೆಂದು''
ಕೂಗುತ್ತಿರು ನೀನು ಕೊನೆ ಉಸಿರು ಇರುವ ತನಕ
''ವಂದೇ ಮಾತರಂ'' ಎಂದು

ಭಾರತ ಸ್ವಾತಂತ್ರ್ಯದ ಅಮೃತ ಪ್ರಕಾಶ

✍ **ಅಶ್ವಿನಿ ನವಲಗುಂದ,** ತೃತೀಯ ಬಿ.ಎ.

ನಮಗೆಲ್ಲರಿಗೂ ಗೊತ್ತಿರುವಂತೆ ನಮ್ಮ ದೇಶವು 1947ನೇ ಇಸವಿಯ ಆಗಸ್ಟ್ 15ರಂದು ಸ್ವಾತಂತ್ರ್ಯವನ್ನು ಗಳಿಸಿತು. ಅಸಂಖ್ಯಾತ ಹೋರಾಟಗಾರರ ತ್ಯಾಗ ಬಲಿದಾನಗಳಿಂದ ಹಾಗೂ ದೇಶದ ಸ್ವರಾಜ್ಯಕ್ಕಾಗಿ ಹಂಬಲಿಸಿ ಕೆಲಸ ಮಾಡಿದ ಅಸಂಖ್ಯ ದೇಶಪ್ರೇಮಿಗಳ ಸದಾಗ್ರಹದಂತೆ ನೂರಾರು ವರ್ಷಗಳ ಕಠಿನ ಶ್ರಮದ ಫಲವಾಗಿ ಸಿಕ್ಕಿರುವ ಸ್ವಾತಂತ್ರ್ಯಕ್ಕೆ ಎಪ್ಪತ್ತೈದು ವರ್ಷಗಳು ಆಗುತ್ತಿರುವ ಈ ಅಮೃತ ಕಾಲದಲ್ಲಿ ನಾವು ಯಾರನ್ನೂ ಬಿಡದೆ ಎಲ್ಲಾ ಸ್ವಾತಂತ್ರ್ಯ ಹೋರಾಟಗಾರರನ್ನು ಸ್ಮರಿಸಿಕೊಂಡು ಗೌರವ ನಮನಗಳನ್ನು ಅರ್ಪಿಸಬೇಕಾಗಿದೆ. ಈ ವರ್ಷ ಒಂದು ಕಡೆಯಲ್ಲಿ ಕೊರೋನಾ ಅಥವಾ ಕೋವಿಡ್‌ನಿಂದ ಕಂಗೆಟ್ಟಿರುವ ನಮ್ಮ ದೇಶದಲ್ಲಿ ಒಂದು ಹೊಸದಾದ ಹುಮ್ಮಸ್ಸನ್ನು ಹಾಗೂ ಚೈತನ್ಯವನ್ನು ಭಾರತದ ಸ್ವಾತಂತ್ರ್ಯದ ಅಮೃತ ಮಹೋತ್ಸವವು ನೀಡಲಿದೆ ಎಂದು ಆಶಿಸಿದರೆ ತಪ್ಪಾಗಲಾರದು. ಆದರೆ ಅದರ ಜೊತೆಯಲ್ಲಿ ನಾವು ನಮ್ಮ ಇತಿಹಾಸವನ್ನು ಮರೆಯದೆ ಅಧ್ಯಯನ ಮಾಡಿ ಅದರಿಂದ ಪಾಠಗಳನ್ನು ಕಲಿಯಬೇಕಾಗಿದೆ. ನಮ್ಮ ದಿವ್ಯವಾದ, ಭವ್ಯವಾದ, ಸನಾತನವಾದ ಸಮೃದ್ಧ ಭಾರತವು ಪರಕೀಯ ಆಕ್ರಮಣಗಳಿಗೆ ಮತ್ತು ಪರಕೀಯರ ಆಳ್ವಿಕೆಗೆ ಏಕೆ ಸುಲಭವಾಗಿ ಒಳಪಟ್ಟಿತು ಎಂಬ ವಿಚಾರಗಳನ್ನು ಅರ್ಥಮಾಡಿಕೊಳ್ಳಬೇಕಾಗಿದೆ. ಈಗೀಗ ಗಾಂಧೀಜಿಯನ್ನು ಸೇರಿದಂತೆ ಲೋಕಮಾನ್ಯ ಬಾಲಗಂಗಾಧರ ತಿಲಕ್, ಗೋಪಾಲಕೃಷ್ಣ ಗೋಖಲೆ, ಭಗತ್ ಸಿಂಗ್, ಚಂದ್ರಶೇಖರ್ ಆಝಾದ್, ಸರ್ದಾರ್ ವಲ್ಲಭಭಾಯಿ ಪಟೇಲ್, ಸುಭಾಷ್ ಚಂದ್ರ ಬೋಸ್, ಜವಾಹರಲಾಲ್ ನೆಹರು ಮೊದಲಾದ ಅನೇಕ ಪ್ರಮುಖ ಸ್ವಾತಂತ್ರ್ಯ ಹೋರಾಟಗಾರರನ್ನು ತಪ್ಪಾಗಿ ವ್ಯಾಖ್ಯಾನಿಸಿ ವರ್ಗೀಕರಿಸಿ ಗೊಂದಲ ಮೂಡಿಸುವ ಕೆಲಸ ಆಗುತ್ತಾ ಇದೆ. ಸ್ವಾತಂತ್ರ್ಯ ಎನ್ನುವ ಪವಿತ್ರವಾದ ದೇವಾಲಯದ ನಿರ್ಮಾಣ ಕಾರ್ಯವು ಬರೇ ಒಬ್ಬ ವ್ಯಕ್ತಿಯಿಂದ ಆಗುವಂತಹದ್ದಲ್ಲ. ಅದು ಸಹಸ್ರಾರು ಮಂದಿ ದೇಶಪ್ರೇಮಿಗಳ ತ್ಯಾಗ ಬಲಿದಾನಗಳಿಂದ ಮಾತ್ರ ಸಾಧ್ಯವಾಗುವುದು ಎಂಬ ಗಾಂಧೀಜಿಯ ಮಾತುಗಳಲ್ಲಿಯೇ ಸ್ವಾತಂತ್ರ್ಯ ಎನ್ನುವುದು ಎಲ್ಲರ ಹೋರಾಟದ ಫಲ ಎಂದು ಸ್ಪಷ್ಟವಾಗಿ ಹೇಳಲ್ಪಟ್ಟಿದ್ದರೂ ನಾವು ಅದನ್ನು ಮರೆತಿದ್ದೇವೆ. ದೇಶ ಕಟ್ಟುವುದೆಂದರೆ ಅದು ನಿರಂತರವಾಗಿ ಎಲ್ಲರಿಂದಲೂ ನಡೆಯುವ ಪ್ರಕ್ರಿಯೆ ಎನ್ನುವುದನ್ನೂ ನಾವು ಅರ್ಥ ಮಾಡಿಕೊಳ್ಳಲು ವಿಫಲರಾಗ್ತಾ ಇದ್ದೇವೆ ಎನ್ನುವಂತೆ ಆಗಿದೆ.

ನಾವು ಇತಿಹಾಸ ಸಬ್ಜೆಕ್ಟ್ ಓದುವಾಗ ಭಾರತದ ಸ್ವಾತಂತ್ರ್ಯ ಹೋರಾಟದ ಬಗ್ಗೆ ಓದಿರುತ್ತೇವೆ. ಆದರೆ ಆ ಹೋರಾಟಗಳ ಹಿಂದೆ ಇರುವ ಸಂದೇಶಗಳನ್ನು ಮನಗಾಣುವುದಿಲ್ಲ. ನಮ್ಮ ದೇಶಕ್ಕೆ ಪೋರ್ಚುಗೀಸರು ಬಂದದ್ದು 1498ರಲ್ಲಿ. ಆ ಕಾಲದಲ್ಲಿ ರಾಜಕೀಯವಾಗಿ ಭಾರತ ಎಂಬುದು ಏಕಾಧಿಪತ್ಯದಲ್ಲಿ ಇರಲಿಲ್ಲ. ಆಗ ಒಂದು ವಿಶಾಲ ದೇಶದ ಕಲ್ಪನೆ ಇರದೆ ರಾಷ್ಟ್ರೀಯ ಚಿಂತನೆಯು ಸಂಕುಚಿತವಾಗಿತ್ತು. ಆದರೂ ಆಧ್ಯಾತ್ಮಿಕವಾಗಿ, ಸಾಂಪ್ರದಾಯಿಕವಾಗಿ, ಸಾಂಸ್ಕೃತಿಕವಾಗಿ ಹಾಗೂ ಭಾವನಾತ್ಮಕವಾಗಿ ಭರತ ಎನ್ನುವ ದೇಶದ ಕಲ್ಪನೆಯು ಇತ್ತಾದರೂ ಒಗ್ಗಟ್ಟು ಎನ್ನುವುದು ಅಸಾಧ್ಯವಾಗಿತ್ತು. ಅಂತಹ ಸಂದರ್ಭದಲ್ಲಿ ಐರೋಪ್ಯ ವಸಾಹತುಶಾಹಿಗಳಲ್ಲಿ ಪೋರ್ಚುಗೀಸರು ಮೊದಲಿಗೆ ಬಂದು ಅಲ್ಲಲ್ಲಿ ನಮ್ಮ ದೇಶದ ಸ್ವಾತಂತ್ರ್ಯವನ್ನು ಹರಣ ಮಾಡಿದ್ದನ್ನು ಗಮನಿಸಬಹುದಾಗಿದೆ. ಆ ಪೋರ್ಚುಗೀಸರು ಗೋವಾದಲ್ಲಿ 1961 ಡಿಸೆಂಬರ್ ತನಕವೂ ಆಳುತ್ತಿದ್ದರು ಎಂಬುದನ್ನು ಮರೆಯಲಾಗದು. ಅಂತಹ ಪ್ರಬಲರಾದ ಪೋರ್ಚುಗೀಸರಿಗೆ ಉಲ್ಲಾಳದ ರಾಣಿ ಅಬ್ಬಕ್ಕದೇವಿ ಎಂಬ ವೀರ ವನಿತೆಯು 1557ರಲ್ಲಿಯೇ ಸೋಲಿನ ರುಚಿಯನ್ನು ತೋರಿಸಿದ್ದು ಸಾರ್ವಕಾಲಿಕ ದಾಖಲೆಯಾಗಿದೆ. ಬ್ರಿಟಿಷರನ್ನು ಓಡಿಸಿ ಭಾರತವು ಸ್ವತಂತ್ರವಾದ ನಂತರವೂ ಪೋರ್ಚುಗೀಸ್ ವಶದಲ್ಲಿದ್ದ ಭಾರತದ ಭಾಗವಾದ ಗೋವಾದ ಸ್ವಾತಂತ್ರ್ಯಕ್ಕಾಗಿ ದೊಡ್ಡ ಪ್ರಮಾಣದ ಹೋರಾಟ ನಡೆದು ಕೊನೆಗೆ ಭಾರತೀಯ ಸೇನೆಯು ಗೋವಾವನ್ನು ಮುಕ್ತವಾಗಿಸಿತು. ಬ್ರಿಟಿಷರು ವ್ಯಾಪಾರಿ ಮುಖವಾಡದೊಂದಿಗೆ 1619ರಲ್ಲಿಯೇ ಭಾರತವನ್ನು ಪ್ರವೇಶಿಸಿದ್ದರು. 1757ರಲ್ಲಿ ನಡೆದ ಪ್ಲಾಸಿ ಕದನದಲ್ಲಿ ಬ್ರಿಟಿಷರ ಈಸ್ಟ್ ಇಂಡಿಯಾ ಕಂಪನಿಯ ಅಲ್ಪ ಸಂಖ್ಯೆಯ ಸೇನೆಯು ಭಾರತೀಯ ಸಿಪಾಯಿಗಳ ಬೆಂಬಲದೊಂದಿಗೆ ಭಾರತೀಯರ ಬೃಹತ್ ಸೇನೆಯನ್ನು ಸೋಲಿಸುವ ಮೂಲಕ ಭಾರತೀಯ ರಾಜರುಗಳನ್ನು ಸದೆಬಡಿಯುವ ಮಾರ್ಗವನ್ನು ಮತ್ತು ಒಡೆದು ಆಳುವ ನೀತಿಯನ್ನು ಕರಗತ ಮಾಡಿಕೊಂಡು ಆಡಳಿತ ನಡೆಸಲು ಆರಂಭಿಸಿತ್ತು. ಆ ಬಳಿಕ ಬ್ರಿಟಿಷರನ್ನು ಹೊಡೆದೋಡಿಸಲು ಎಲ್ಲಾ ರೀತಿಯ ಹೋರಾಟಗಳು ನಡೆದರೂ ಕೊನೆಯದಾಗಿ ಸ್ವಾತಂತ್ರ್ಯ ಗಳಿಸಲು 190 ವರ್ಷಗಳೇ ಬೇಕಾದವು. ಬ್ರಿಟಿಷರು ಸೇನೆಯಲ್ಲಿ ಶೇಕಡಾ ತೊಂಬತ್ತರಷ್ಟು ಭಾರತೀಯ ಸಿಪಾಯಿಗಳನ್ನು ಬಳಸಿಕೊಂಡು ಭಾರತವನ್ನು ಆಳಿದ್ದರು.

1857ರ ಪ್ರಥಮ ಸ್ವಾತಂತ್ರ್ಯ ಹೋರಾಟವು ಆರಂಭವಾಗುವುದಕ್ಕೂ ಮುಂಚಿತವಾಗಿ ಹಲವಾರು ಪ್ರದೇಶಗಳಲ್ಲಿ ಹಲವಾರು ವೀರರು ಕೆಚ್ಚೆದೆಯ ಹೋರಾಟಗಳು ನಡೆಸಿದ್ದನ್ನು ನಾವೆಂದಿಗೂ ಮರೆಯಬಾರದು. ಕಿತ್ತೂರು ರಾಣಿ ಚೆನ್ನಮ್ಮ, ಸಂಗೊಳ್ಳಿ ರಾಯಣ್ಣ, ಅಮರ ಸುಳ್ಯ ಹೋರಾಟ, ಕಲ್ಯಾಣಪ್ಪನ ಕಾಟಕಾಯಿ, ಕೆನರಾದ ಕ್ರಾಂತಿ, ಕೂಟ ಚಳುವಳಿ ಹಾಗೂ ಮಂಗಳೂರಿನ ಕರ ನಿರಾಕರಣೆ, ಹಲಗಲಿಯ ಬೇಡರ ಹೋರಾಟ ಮುಂತಾದ ಅನೇಕ ಹೋರಾಟಗಳೂ ಕಡಿಮೆಯೇನಲ್ಲ. 1857ನೇ ಮೊದಲ ಸ್ವಾತಂತ್ರ್ಯ ಸಮರದ ಬಳಿಕದ ರಾಷ್ಟ್ರೀಯ ಮಹಾಜಾಗೃತಿ ಹಾಗೂ ರಾಜಕೀಯ ಪುನರುತ್ಥಾನಗಳು ಮುಂದಿನ ಚಳುವಳಿಗಳಿಗೆ ಹೊಸ ದಾರಿ ಮಾಡಿಕೊಟ್ಟವು. ಮುಂದೆ ಕ್ರಾಂತಿಕಾರಿಗಳಲ್ಲದೆ ದಾದಾಭಾಯ್ ನವರೋಜಿ, ರಾನಡೆ, ಗೋಖಲೆ, ಲಾಲ್-ಬಾಲ್-ಪಾಲ್ ಮುಂತಾದವರ ನೇತೃತ್ವದಲ್ಲಿ ಚಳುವಳಿ ಕೆಲವು ಪ್ರಾಂತ್ಯಗಳಲ್ಲಿ ಜೋರಾಗಿ ನಡೆಯಿತು. ಗಾಂಧೀಜಿಯ ಆಗಮನದ ಬಳಿಕ ಅದರಲ್ಲಿಯೂ ಜಲಿಯನ್ ವಾಲಾಬಾಗ್ ಹತ್ಯಾಕಾಂಡದ ನಂತರ ಬ್ರಿಟಿಷ್ ಆಡಳಿತದ ವಿರುದ್ಧ ಜನಾಕ್ರೋಶ ಹೆಚ್ಚಾಯಿತು. ಆಗ ಯಾವುದೇ ರೀತಿಯ ಭೇದ ಭಾವ ಇಲ್ಲದೆಯೇ ಹಳ್ಳಿಯಿಂದ ದಿಲ್ಲಿಯ ತನಕವೂ ಜನಸಾಮಾನ್ಯರೂ, ಮಹಿಳೆಯರು ಮತ್ತು ಮಕ್ಕಳೂ ಭಾಗವಹಿಸಿ ಯೋಗದಾನ ಮಾಡುವಂತಹ ಸತ್ಯಾಗ್ರಹ ಚಳುವಳಿಯು ಆರಂಭವಾಯಿತು. ಅದೇ ಹಿನ್ನೆಲೆಯಲ್ಲಿ ಅಸಹಕಾರ ಚಳುವಳಿ, ಉಪ್ಪಿನ ಸತ್ಯಾಗ್ರಹ, ಸವಿನಯ ಕಾಯಿದೆ ಭಂಗ ಚಳುವಳಿ, ವೈಯಕ್ತಿಕ ಸತ್ಯಾಗ್ರಹ ಚಳುವಳಿ, ಬ್ರಿಟಿಷರೇ ಭಾರತ ಬಿಟ್ಟು ತೊಲಗಿ ಅಥವಾ ಕ್ವಿಟ್ ಇಂಡಿಯಾ ಚಳುವಳಿ ನಡೆದವು. ಅಂತೆಯೇ ಭಗತ್ ಸಿಂಗ್, ಸುಖದೇವ್, ರಾಜಗುರು, ಚಂದ್ರಶೇಖರ್ ಆಝಾದ್, ಸುಭಾಷ್ ಚಂದ್ರ ಬೋಸ್ ಮುಂತಾದ ವೀರಾಗ್ರಣಿ ದೇಶಪ್ರೇಮಿಗಳು ಮಾಡಿದ್ದ ಸಶಸ್ತ್ರ ಹೋರಾಟಗಳು ಕೂಡಾ ಅಪ್ರತಿಮ ಕೊಡುಗೆಗಳನ್ನು ನೀಡಿದ್ದವು. 26 ಜನವರಿ 1930ರಂದು ಆದ ಪೂರ್ಣ ಸ್ವರಾಜ್ಯದ ಘೋಷಣೆಯು ಸ್ವಾತಂತ್ರ್ಯ ಹೋರಾಟದ ದೊಡ್ಡ ಮೈಲಿಗಲ್ಲು, ಆ ಬಳಿಕ ಪ್ರತಿವರ್ಷವೂ ಸ್ವಾತಂತ್ರ್ಯ ದಿನವಾಗಿ ಜನವರಿ 26ರನ್ನು ಆಚರಿಸುತ್ತಾ ಚಳುವಳಿಯ ಕಾವನ್ನು ಹೆಚ್ಚಿಸಲಾಯಿತು. ನಾವು ಆಗಸ್ಟ್ 15 ಮತ್ತು ಜನವರಿ 26ರಂದು ಬ್ರಿಟಿಷರ ವಿರುದ್ಧ ಹೋರಾಡಿದ ಕರ್ನಾಟಕದ ಕಿತ್ತೂರಿನ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣರನ್ನು ನೆನಪಿಸಿಕೊಳ್ಳಬೇಕಾಗುತ್ತದೆ. ಏಕೆಂದರೆ ಅವರು ಹುಟ್ಟಿದ್ದು 1796 ಆಗಸ್ಟ್ 15ರಂದು ಮತ್ತು ಹುತಾತ್ಮರಾದದ್ದು 1831 ಜನವರಿ 26ರಂದು. ಇಂತಹ ಸನ್ನಿವೇಶಗಳ ಸ್ಮರಣೆಯು ನಮಗೆ ರೋಮಾಂಚನ ಮೂಡಿಸುತ್ತವೆ. ಬರೇ ರಾಜಕೀಯವಾಗಿ ಅಥವಾ ಭೌಗೋಳಿಕವಾಗಿ ಸಿಗುವ ಸ್ವಾತಂತ್ರ್ಯಕ್ಕೆ ಪೂರ್ಣತೆಯ ಅರ್ಥ ಇರುವುದಿಲ್ಲ ಎಂದು ಗಾಂಧೀಜಿ ಮನಗಂಡು ಸರ್ವೋದಯ ಚಿಂತನೆಯ ಮೂಲಕ ರಚನಾತ್ಮಕ ಕಾರ್ಯಗಳಲ್ಲಿ ತೊಡಗಿಸಿಕೊಂಡರು. ಆ ಮೂಲಕ ಆಗಿನ ಸಮಸ್ಯೆಗಳನ್ನು ಮತ್ತು ಸಾಮಾಜಿಕ ಪಿಡುಗುಗಳನ್ನು ಪರಿಹರಿಸಿ ಅಸ್ಪೃಶ್ಯತೆ ನಿವಾರಣೆ ಹಾಗೂ ಕೋಮು ಸಾಮರಸ್ಯ ಸಾಧಿಸಲು ಪ್ರಯತ್ನಿಸಿ ಬರುವ ಸ್ವಾತಂತ್ರ್ಯವನ್ನು ಅರ್ಥಪೂರ್ಣವಾಗಿಸುವ ಕನಸನ್ನು ಕಂಡಿದ್ದರು. ದೇಶದ ಮಟ್ಟದಲ್ಲಿ ಪ್ರಮುಖ ಚಳುವಳಿಗಳು ನಡೆಯದಿದ್ದ ಸಂದರ್ಭಗಳಲ್ಲಿಯೂ ಪ್ರತಿಯೊಂದು ಹಳ್ಳಿಯ ಅಥವಾ ಊರಿನ ಜನರು ತಮ್ಮ ನೆಲೆಯಲ್ಲಿ ಚಳುವಳಿಯನ್ನು ಜೀವಂತವಾಗಿಟ್ಟಿದ್ದರು. ನಮಗೆ ನಮ್ಮ ಕರ್ನಾಟಕದ ವಿಧುರಾಶ್ವಥ, ಈಸೂರು, ಕರನಿರಾಕರಣೆಯ ವೀರಕತೆಗಳು, ಮೈಲಾರ ಮಹಾದೇವರ ಹೋರಾಟ, ಕಾರ್ನಾಡ್ ಸದಾಶಿವರಾವ್ ಅವರ ತ್ಯಾಗ ಮುಂತಾದವು ಆದರ್ಶದ ನೆನಪಾಗಿ ಉಳಿಯುತ್ತವೆ.

ಎರಡನೇ ಮಹಾಯುದ್ಧದ ನಂತರ ಬೊಂಬಾಯಿ ನೌಕಾ ನೆಲೆಯಲ್ಲಿ ಭಾರತೀಯ ರಾಯಲ್ ನೇವಿಯ ಭಾರತೀಯ ನಾವಿಕರು ಬ್ರಿಟಿಷರು ತೋರುತ್ತಿದ್ದ ತಾರತಮ್ಯ ಹಾಗೂ ದೌರ್ಜನ್ಯಗಳ ವಿರುದ್ಧ 1946ರಲ್ಲಿ ಸಿಡಿದೆದ್ದರು. ಇವರಿಗೆ ಸುಭಾಷ್ ಚಂದ್ರ ಬೋಸರ ಇಂಡಿಯನ್ ನ್ಯಾಷನಲ್ ಆರ್ಮಿ ಹಾಗೂ ಗಾಂಧೀಜಿಯ ಕ್ವಿಟ್ ಇಂಡಿಯಾ ಚಳುವಳಿಯ ಘೋಷ ವಾಕ್ಯಗಳು ಪ್ರೇರಣೆ ನೀಡಿದ್ದವು. ಈ ಇಂಡಿಯನ್ ರಾಯಲ್ ನೇವಿ ದಂಗೆಯನ್ನು ಭಾರತದ ಸ್ವಾತಂತ್ರ್ಯಕ್ಕಾಗಿನ ಕೊನೆಯ ಸಮರ ಎಂದೂ ತಜ್ಞರು ಅಭಿಪ್ರಾಯ ಪಟ್ಟಿದ್ದಾರೆ. ಈ ಎಲ್ಲಾ ಐತಿಹಾಸಿಕ ಹಿನ್ನೆಲೆಗಳನ್ನು ಅರಿತುಕೊಂಡು ನಾವೆಲ್ಲರೂ ನಮ್ಮ ರಾಷ್ಟ್ರೀಯ ಚಳುವಳಿಯಲ್ಲಿ ಭಾಗವಹಿಸಿದ ಎಲ್ಲರನ್ನೂ ಗೌರವದಿಂದ ಸ್ಮರಿಸಿಕೊಂಡು ಸ್ವಾತಂತ್ರ್ಯವನ್ನು ರಕ್ಷಿಸಿಕೊಂಡು ಸ್ವಾತಂತ್ರ್ಯವನ್ನು ಅಮೃತವಾಗಿಸಲು ಪಣತೊಡಬೇಕು ಎಂದು ನಮ್ಮ ಕಾಲೇಜಿನ ಗಾಂಧಿ ಅಧ್ಯಯನ ವಿಭಾಗದ ಅಧ್ಯಾಪಕರಾಗಿರುವ ವಿನೀತ್ ರಾವ್ ತಿಳಿಹೇಳುತ್ತಿರುತ್ತಾರೆ. ಗಾಂಧಿ ಅಧ್ಯಯನ ಕೇಂದ್ರದಲ್ಲಿ ಸ್ಟಡಿ ಸರ್ಕಲ್ ಮೂಲಕ ಸ್ವಾತಂತ್ರ್ಯ ಸಂಗ್ರಾಮದ ಕುರಿತು ಅಧ್ಯಯನ ಹಾಗೂ ಸ್ವಾತಂತ್ರ್ಯ ಹೋರಾಟಗಾರರ ಕುರಿತು ಅಧ್ಯಯನಕ್ಕಾಗಿ ಅವಕಾಶವನ್ನು ನೀಡಿರುತ್ತಾರೆ. ನಮ್ಮ ಕಾಲೇಜಿನ ಪ್ರಾಂಶುಪಾಲರಾದ ಡಾ. ದೇವಿದಾಸ್ ಎಸ್. ನಾಯ್ಕ ಸರ್ ಸ್ವಾತಂತ್ರ್ಯದ ಎಪ್ಪತ್ತೈದರ ಸಂಭ್ರಮದಲ್ಲಿ ನಾವು ಮುಂದಿನ ಇಪ್ಪತ್ತೈದು ವರ್ಷಗಳ ಮುನ್ನೋಟದೊಂದಿಗೆ ಶತಾಬ್ದಿ ಸಂಕಲ್ಪವನ್ನು ಕೈಗೊಂಡು ದೇಶಸೇವೆ ಮಾಡಬೇಕು ಎಂದು ಸಂದೇಶ ನೀಡಿರುತ್ತಾರೆ. ಇತಿಹಾಸ ವಿಭಾಗದ ಅಧ್ಯಾಪಕರಾದ ಸುಬೋಧ ಸರ್ ಮತ್ತು ಲತಾ ಮೇಡಂ ನಮಗೆ ಸ್ವಾತಂತ್ರ್ಯ ಹೋರಾಟದ ಇತಿಹಾಸವನ್ನು ತಿಳಿಸಿಕೊಟ್ಟಿದ್ದಾರೆ. ನಮ್ಮ ಕಾಲೇಜಿನ ಗ್ರಂಥಾಲಯದಲ್ಲಿ ಹಾಗೂ ಗಾಂಧಿ ಅಧ್ಯಯನ ಕೇಂದ್ರದ ಸಂಗ್ರಹದಲ್ಲಿರುವ ನೂರಾರು ಅಮೂಲ್ಯ ಪುಸ್ತಕಗಳು ಸ್ವಾತಂತ್ರ್ಯ ಹೋರಾಟದ ಕತೆಗಳನ್ನು ಹೇಳುತ್ತಾ ನಮ್ಮಲ್ಲಿ ದೇಶಪ್ರೇಮದ

ಜಾಗೃತಿಯನ್ನುಂಟುಮಾಡಿವೆ. ಸ್ವಾತಂತ್ರ್ಯದ ಅಮೃತ ಮಹೋತ್ಸವ ಸಂದರ್ಭದಲ್ಲಿ ನಮ್ಮ ದೇಶವು ಸರ್ವೋದಯವನ್ನು ಸಾಧಿಸಿ ಅಜೇಯವಾಗಿ, ಸಮೃದ್ಧವಾಗಿ ವಿಕಸನಗೊಂಡು ರೋಗಗಳಿಂದ ಮುಕ್ತವಾಗಿ, ಪಿಡುಗುಗಳಿಂದ ಮುಕ್ತವಾಗಿ ಹಾಗೂ ಹಸಿವಿನಿಂದ ಮುಕ್ತವಾಗಿ ಪ್ರಕಾಶಿಸಲಿ ಎಂದು ಪ್ರಾರ್ಥಿಸುತ್ತೇವೆ.

ಇಂದು ನಮ್ಮ ದೇಶವು ತನ್ನ ಗಡಿಗಳಲ್ಲಿ ಹಾಗೂ ಆಂತರಿಕವಾಗಿ ಭದ್ರತೆಯ ಸವಾಲುಗಳನ್ನು ಎದುರಿಸುತ್ತಾ ಇದೆ. ಒಂದು ಕಡೆಗೆ ದೇಶ ವಿಭಜನೆಯ ಕಹಿಯನ್ನು ನೆನಪಿಸುವ ಸಮಸ್ಯೆಗಳು ಹಾಗೂ ಕಾಶ್ಮೀರದಲ್ಲಿ ಪಾಕಿಸ್ತಾನಿ ಭಯೋತ್ಪಾದನಾ ಚಟುವಟಿಕೆಗಳು ಇನ್ನೊಂದು ಕಡೆಯಲ್ಲಿ ಆಧುನಿಕ ವಸಾಹತುಶಾಹಿ ಯುದ್ಧೋನ್ಮಾದಿ ಮಹಾದೈತ್ಯನಂತಿರುವ ಚೀನಾದ ಕುತಂತ್ರಗಳು ಸವಾಲಾಗಿ ಪರಿಣಮಿಸಿವೆ. ಇವನ್ನೆಲ್ಲಾ ಎದುರಿಸಲು ನಾವು ಸ್ವದೇಶಾಭಿಮಾನದ ಆತ್ಮನಿರ್ಭರ ಭಾರತವನ್ನು ರೂಪಿಸಲು ಸಾಮರಸ್ಯದ ಜೊತೆಗೆ ದೇಶಭಕ್ತಿಯನ್ನು ಬೆಳೆಸಿಕೊಳ್ಳಬೇಕಾಗಿದೆ. ಭಾರತವು ಎಂದೂ ಸೋಲದಂತಹ ಅಮೃತ ಪ್ರಕಾಶವು ಪ್ರಕಾಶಿಸಲಿ.

●

ದೀಪಾವಳಿ

ಹಚ್ಚುವೆವು ಹಣತೆಯನು ದೀಪಾವಳಿಯಂದು
ಬೆಳಗಲಿ ಬೆಳಕು ಮನೆಮನದಲೆಂದು
ಆರದಿರಲಿ ಈ ಬೆಳಕು ಎಂದೆಂದೂ
ಹೇ, ದೇವನೆ, ತೋರು ನೀ ದಾರಿಯನು ನಮಗೆಂದು.

ಸ್ವರ್ಗದಲ್ಲಿರುವ ಪೂಜ್ಯರಿಗೆ ನಮಿಸುವ ದಿನವಿಂದು
ಕಾದಿರುವರೆಲ್ಲರೂ ಬಲಿ ಚಕ್ರವರ್ತಿಯ ಪೂಜೆಗಿಂದು
ಧನಲಕ್ಷ್ಮೀ ಪೂಜೆಯನು ಮಾಡುವೆವು ಇಂದು
ಧನ ಧಾನ್ಯ ಐಶ್ವರ್ಯ ಕರುಣಿಸು ಎಂದೆಂದು.

ಸುತ್ತಲೂ ಕತ್ತಲೂ ಅಮಾವಾಸ್ಯೆಯಂದು
ಹಚ್ಚಿದರು ಹಣತೆಯನು ಬೆಳಕಿಗೆಂದು
ಕೂಗಿದರು ಬಲೀಂದ್ರನನ್ನು ಬಾರೋ ಎಂದು
ಬಲಿ ಪೂಜೆ ಮಾಡುತ್ತಾ ಹರುಷದಿಂದ.

ಬಗೆ ಬಗೆಯ ಸಿಹಿ ತಿಂಡಿ ಮಾಡುವೆವು ಇಂದು
ಎಲ್ಲರಿಗೂ ಹಂಚುತ್ತಾ ಖುಷಿಪಡುವೆವು ಇಂದು
ಎಲ್ಲರನ್ನೂ ಬಂಧು ಬಾಂಧವರಂತೆ ಕಾಣುತ್ತಾ
ಸ್ನೇಹ ಪ್ರೀತಿಯಿಂದ ಬಾಳುವೆವು ಎಂದೆಂದು ॥

✍ **ಅಶ್ವಿನಿ,** ದ್ವಿತೀಯ ಬಿ.ಕಾಂ.

ಸ್ವಾತಂತ್ರ್ಯವೀರ ಸಂಗೊಳ್ಳಿ ರಾಯಣ್ಣ

✍ **ಅಶ್ವಿನಿ ನವಲಗುಂದ**, ತೃತೀಯ ಬಿ.ಎ.

ಬ್ರಿಟಿಷ್ ಈಸ್ಟ್ ಇಂಡಿಯಾ ಕಂಪನಿಯ ಸರಕಾರವನ್ನು ಹಾಗೂ ಪರಕೀಯ ವಸಾಹತುಶಾಹಿಗಳ ಆಳ್ವಿಕೆಯನ್ನು ಕೆಚ್ಚೆದೆಯಿಂದ ವಿರೋಧಿಸಿ ಸ್ವದೇಶಾಭಿಮಾನದಿಂದ ವೀರಾವೇಶದ ಹೋರಾಟ ನಡೆಸಿದವರಲ್ಲಿ ಕಿತ್ತೂರು ರಾಣಿ ಚೆನ್ನಮ್ಮ ಹಾಗೂ ಸಂಗೊಳ್ಳಿ ರಾಯಣ್ಣನ ಹೆಸರುಗಳು ಪ್ರಮುಖವಾಗಿ ನೆನಪಾಗುತ್ತವೆ. ಸಂಗೊಳ್ಳಿ ರಾಯಣ್ಣ ಎಂಬ ಹೆಸರಿನಲ್ಲಿರುವ ಶಕ್ತಿಯನ್ನು ಇಂದಿಗೂ ಉತ್ತರ ಕರ್ನಾಟಕ ಭಾಗದಲ್ಲಿ ಕಾಣಬಹುದಾಗಿದೆ. ಸಂಗೊಳ್ಳಿ ರಾಯಣ್ಣನ ಬಗ್ಗೆ ಜಾನಪದ ಗೀತೆಗಳನ್ನು ಹಾಗೂ ವಿಶಿಷ್ಟವಾದ ಲಾವಣಿಗಳನ್ನು ಜನರು ಹಾಡಿಕೊಂಡು ಬಂದಿದ್ದಾರೆ ಮತ್ತು ಆತನ ಬಗ್ಗೆ ಪೂಜ್ಯ ಭಾವನೆಯನ್ನು ಹೊಂದಿದವರಾಗಿದ್ದಾರೆ. ಸಂಗೊಳ್ಳಿ ರಾಯಣ್ಣ ಹುಟ್ಟಿದ್ದು ಆಗಸ್ಟ್ 15, 1796ರಲ್ಲಿ. ವಿಶೇಷವೆಂದರೆ 1947ರ ಆಗಸ್ಟ್ 15ರಂದು ಭಾರತಕ್ಕೆ ಸ್ವಾತಂತ್ರ್ಯ ಸಿಕ್ಕಿತು ಎನ್ನುವುದೇ ರೋಮಾಂಚನವನ್ನು ಉಂಟು ಮಾಡುತ್ತದೆ. ಸಂಗೊಳ್ಳಿ ರಾಯಣ್ಣ ಹುತಾತ್ಮನಾದದ್ದು 26 ಜನವರಿ 1831ರಲ್ಲಿ. 1950ರ ಜನವರಿ 26ರಂದು ಭಾರತವು ಗಣತಂತ್ರವಾಯಿತೆನ್ನುವುದೂ ಗಮನಾರ್ಹ. ದಿನಾಂಕಗಳು ಕೂಡಿಬಂದಿರುವುದು ಕಾಕತಾಳೀಯ ಎಂದು ಹೇಳಬಹುದಾದರೂ ಇಂತಹ ಒಬ್ಬ ದೇಶಪ್ರೇಮಿ ಕ್ರಾಂತಿವೀರನನ್ನು ನೆನೆಸಿಕೊಳ್ಳಲು ಇದಕ್ಕಿಂತ ಉತ್ತಮವಾದ ಸಂದರ್ಭಗಳು ಇರಲಿಕ್ಕಿಲ್ಲ ಎನ್ನಬಹುದು. ಭಾರತ ಸ್ವಾತಂತ್ರ್ಯದ ಅಮೃತ ಮಹೋತ್ಸವ ಸಂದರ್ಭದಲ್ಲಿ ಇಂತಹ ಸ್ವಾತಂತ್ರ್ಯ ಯೋಧರನ್ನು ನೆನಪಿಸಿಕೊಳ್ಳುವುದು ಮುಖ್ಯವಾಗುತ್ತದೆ.

ರಾಯಣ್ಣ ಜನಿಸಿದ್ದು ಬೆಳಗಾವಿ ಜಿಲ್ಲೆಯ ಬೈಲಹೊಂಗಲದ ಸಂಪಗಾವಿ ತಾಲೂಕಿನ ಸಂಗೊಳ್ಳಿ ಗ್ರಾಮದಲ್ಲಿ ಬರಮಪ್ಪ ರೋಗಣ್ಣವರ ಮತ್ತು ಕೆಂಚವ್ವ ರೋಗಣ್ಣವರ ಪುತ್ರನಾಗಿ. ಇವರದ್ದು ಪ್ರಸಿದ್ಧ ಕುಟುಂಬ. ರಾಯಣ್ಣನ ತಾತ ರೋಗಪ್ಪ ವೀರಪ್ಪ ದೇಸಾಯಿ ಯುದ್ಧದಲ್ಲಿ ತೋರಿದಂತಹ ಶೌರ್ಯಕ್ಕೆ ಸಾವಿರ ಸರದಾರ ಎಂಬ ಬಿರುದು ಸಿಕ್ಕಿತು. ಇವರು ರಕ್ತ ಮಾನ್ಯ ಭೂಮಿಯನ್ನೂ ಕಿತ್ತೂರು ಸಂಸ್ಥಾನದಿಂದ ಬಳುವಳಿಯಾಗಿ ಪಡೆದಿದ್ದರು. ರಾಯಣ್ಣನಿಗೆ ವೀರ ರಾಯ, ವೀರ ಸಂಗೊಳ್ಳಿ ರಾಯಣ್ಣ , ಶೂರ ರಾಯಣ್ಣ, ಧೀರ ರಾಯಣ್ಣ, ಕ್ರಾಂತಿವೀರ ರಾಯಣ್ಣ ಎಂದೆಲ್ಲಾ ಕರೆಯುತ್ತಿದ್ದರು. ಕಿತ್ತೂರು ಚೆನ್ನಮ್ಮನ ಬಲಗೈ ಬಂಟನಾಗಿ ರಾಯಣ್ಣ ದೊಡ್ಡ ಸಾಹಸಗಳನ್ನು ಮಾಡಿ ಬ್ರಿಟಿಷರಿಗೆ ನಡುಕವನ್ನುಂಟುಮಾಡಿದ್ದ. ಬೆಳಗಾವಿ ಜಿಲ್ಲೆಯ ಗೋಕಾಕ ತಾಲೂಕಿನಲ್ಲಿರುವ ಗಣೇಶವಾಡಿ ಗ್ರಾಮವು ರಾಯಣ್ಣನ ತಾಯಿ ಕೆಂಚವ್ವನ ತವರುಮನೆ. ವಸಾಹತು ಸಾಮ್ರಾಜ್ಯಶಾಹಿ ಬ್ರಿಟಿಷರ ವಿರುದ್ಧ ಗೆರಿಲ್ಲಾ ಯುದ್ಧ ಸಾರಿದ ಧೀರ ಯೋಧ ಕೀರ್ತಿ ರಾಯಣ್ಣನಿಗೆ ಸಲ್ಲುತ್ತದೆ. ಹಣದಾಹಿ ಜಮೀನ್ದಾರರಿಗೆ ಹಾಗೂ ಬ್ರಿಟಿಷರ ಅಡಿಯಾಳಾಗಿದ್ದ ಭೂಮಾಲೀಕರಿಗೆ ಸಿಂಹಸ್ವಪ್ನವಾಗಿದ್ದ ರಾಯಣ್ಣ ಬ್ರಿಟಿಷರ ಆಡಳಿತಕ್ಕೆ ಸೇರಿದ ಅನೇಕ ದುರ್ವ್ಯವಸ್ಥೆಗಳನ್ನು ನಾಶ ಮಾಡಿ ಬಡವರಿಂದ ಅವರು ದೋಚಿದ್ದ ಹಣವನ್ನು ಕಸಿದುಕೊಳ್ಳತೊಡಗಿದನು. ಬಡವರ ಹಣವನ್ನು ಬಡವರಿಗೆ ಮರಳಿ ದೊರಕಿಸಿ ಕೊಡುತ್ತಿದ್ದನು. ಇದರಿಂದ ಬ್ರಿಟಿಷ್ ಸಾಮ್ರಾಜ್ಯದ ಸಂಪತ್ತಿನ ಮಾರ್ಗಕ್ಕೆ ಅಪಾರವಾದ ಹಾನಿಯಾಯಿತು. ರಾಯಣ್ಣ ಬ್ರಿಟಿಷರ ವಿರುದ್ಧ ರಹಸ್ಯವಾಗಿ ಸೇನೆಯನ್ನು ಕಟ್ಟಲಾರಂಭಿಸಿದನು. ಇದಲ್ಲದೆ ರಾಯಣ್ಣ ಕಿತ್ತೂರು ಚೆನ್ನಮ್ಮನ ಸೇನೆಯ ಅಧಿಪತಿಯಾಗಿದ್ದನು. ರಾಯಣ್ಣನ ಕೆಚ್ಚೆದೆಯ ಒಂದು ಕರೆಗೆ ದೇಶಭಕ್ತರ ದೊಡ್ಡ ದಂಡೇ ಯುದ್ಧಕ್ಕೆ ಸನ್ನದ್ಧವಾಗಿ ನಿಲ್ಲುತ್ತಿತ್ತು. ಕಿತ್ತೂರು ಅಜೇಯವಾಗಿದ್ದಿತು.

ಕಿತ್ತೂರು ಚೆನ್ನಮ್ಮನನ್ನು ಹಿಡಿಯಬೇಕಾದರೆ ಆಕೆಯ ಬಲಗೈ ಬಂಟನಾಗಿದ್ದ ರಾಯಣ್ಣನನ್ನು ಮೆಟ್ಟಿ ನಿಲ್ಲಬೇಕೆಂದು ನಿರ್ಧರಿಸಿದ ಬ್ರಿಟಿಷ್ ಅಧಿಕಾರಿಗಳು ಸಂಚು ಹೂಡಿ ರಾಯಣ್ಣನನ್ನು ತಮ್ಮ ವಶಕ್ಕೆ ತೆಗೆದುಕೊಂಡರು. ಬ್ರಿಟಿಷರು ರಾಯಣ್ಣನ ಸ್ವಂತ ಮಾವ ಲಕ್ಷ್ಮಣನನ್ನು ತಮ್ಮ ಕುತಂತ್ರದ ದಾಳವನ್ನಾಗಿ ಬಳಸಿಕೊಂಡರು. ರಾಯಣ್ಣನು ಬೇನಾಚಿ ಹಳ್ಳದಲ್ಲಿ ಸ್ನಾನ ಮಾಡುತ್ತಿದ್ದಾಗ ಆತನ ಮೇಲೆ ಸೈನಿಕರು ಆಕ್ರಮಣ ಮಾಡಿದಾಗ ರಾಯಣ್ಣನ ಖಡ್ಗ ಮಾವ ಲಕ್ಷ್ಮಣನ ಬಳಿಯಲ್ಲಿತ್ತು. ರಾಯಣ್ಣ ಖಡ್ಗ ನೀಡಬೇಕೆಂದು ಕೇಳಿದರೂ ಲಕ್ಷ್ಮಣ ಕೊಡದೆ ಮೋಸ ಮಾಡಿದ್ದರಿಂದ ರಾಯಣ್ಣನು ಬ್ರಿಟಿಷರ ಸೆರೆ ಸಿಗುವಂತಾಯಿತು.

1831ರ ಜನವರಿ 26ರಂದು ಬೆಳಗಾವಿ ಜಿಲ್ಲೆಯ ಖಾನಾಪುರ ತಾಲೂಕಿನ ನಂದಗಡ ಗ್ರಾಮದಲ್ಲಿ ರಾಯಣ್ಣನನ್ನು ಗಲ್ಲಿಗೇರಿಸಲಾಯಿತು. ಗಲ್ಲಿಗೇರಿಸುವ ಮುನ್ನ ಬ್ರಿಟಿಷ್ ಅಧಿಕಾರಿಗಳು ನಿನ್ನ ಕಡೆಯ ಆಸೆ ಏನೆಂದು ಕೇಳಿದಾಗ ''ನನ್ನ ಕೊನೆಯ ಆಸೆ ನಾನು ಈ ದೇಶದಲ್ಲಿ ಜನ್ಮತಾಳಿ ಈ ಪುಣ್ಯ ಭೂಮಿಯಲ್ಲಿ ಬ್ರಿಟಿಷರ ವಿರುದ್ಧ ಹೋರಾಟವನ್ನು ಮುಂದುವರೆಸುವುದು ಹಾಗೂ ಬ್ರಿಟಿಷರನ್ನು ಹೊಡೆದೋಡಿಸಲು ಮನೆಗೊಬ್ಬ ರಾಯಣ್ಣ ಹುಟ್ಟುತ್ತಾನೆ...'' ಎಂದು ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಗಲ್ಲಿಗೇರಿಸುವ ಮುನ್ನ ಹೇಳಿದ ವೀರಾವೇಶದ ಮಾತು ಇತಿಹಾಸದ ಪುಟಗಳಲ್ಲಿ ದಾಖಲಾಗಿದೆ. ನಂದಗಡ ರಾಯಣ್ಣನ ಸಮಾಧಿ ಸ್ಥಳವಾಗಿದೆ.

ರಾಯಣ್ಣನ ಸಮಾಧಿ ಸ್ಥಳದ ಚಿತ್ರ

ರಾಯಣ್ಣನ ಮರಣದ ನಂತರ ಸಂಗೊಳ್ಳಿ ಗ್ರಾಮದ ಬಿಚ್ಚುಗತ್ತಿ ಚನ್ನಬಸವಣ್ಣ ಮಾರುವೇಷದಲ್ಲಿ ರಾಯಣ್ಣನ ಅಂತಿಮ ಸಂಸ್ಕಾರದಲ್ಲಿ ಪಾಲ್ಗೊಂಡು ಸಮಾಧಿಯ ಮೇಲೆ ಆಲದ ಸಸಿ ನೆಡುವ ಮೂಲಕ ತನ್ನ ಗೆಳೆಯನಿಗೆ ನಮನ ಸಲ್ಲಿಸಿದನು. ಅಂದು ನೆಟ್ಟ ಆಲದ ಸಸಿ ಇಂದು ಹೆಮ್ಮರವಾಗಿ ಬೆಳೆದು ನಿಂತಿದೆ. ಇದೇ ಒಂದು ಜಾಗೃತವಾದ ಜೀವಂತ ಸ್ಮಾರಕವಾಗಿದೆ. ಇದು ನಮ್ಮ ರಾಷ್ಟ್ರೀಯ ವೃಕ್ಷವಾಗಿ ದೇಶಾಭಿಮಾನಿಗಳಿಗೆ ಸದಾಕಾಲವೂ ಸ್ಫೂರ್ತಿಯ ಸಂಕೇತವಾಗಿ ಬೃಹದಾಕಾರವಾಗಿ ಬೆಳೆದು ಇಂದು ಪೂಜ್ಯ ಭಾವನೆಗಳಿಗೆ ಕಾರಣವಾಗುವ ಪುಣ್ಯ ಸ್ಥಳವಾಗಿದೆ. ರಾಯಣ್ಣನ ನಿಸ್ವಾರ್ಥ ಹೋರಾಟ, ದೇಶಪ್ರೇಮ ಯುವಜನತೆಯಲ್ಲಿ ಸ್ಫೂರ್ತಿಯನ್ನು ತುಂಬುತ್ತದೆ. ಇಂತಹ ಮಹಾ ಪರಾಕ್ರಮಿ ಮಹಾ ತ್ಯಾಗಿ ಮಹಾವೀರ ಸಂಗೊಳ್ಳಿ ರಾಯಣ್ಣ ನಿಜಾರ್ಥದಲ್ಲಿ ಸ್ವಾತಂತ್ರ್ಯ ಹೋರಾಟಗಾರ ಮಾತ್ರವಲ್ಲದೆ 1947ರ ತನಕವೂ ದೇಶಪ್ರೇಮಿಗಳಿಗೆ ಹಾಗೂ ಸ್ವಾತಂತ್ರ್ಯ ಹೋರಾಟಗಾರರಿಗೆ ಪ್ರೇರಣೆ ನೀಡಿದ ಮಹಾಚೇತನ ಎಂದರೆ ತಪ್ಪಾಗಲಾರದು. ಸ್ವಾತಂತ್ರ್ಯದ ಅಮೃತ ಮಹೋತ್ಸವ ವರ್ಷದ ಸಂದರ್ಭದಲ್ಲಿ ಅಮರರಾಗಿರುವ ಅವರನ್ನು ಸ್ಮರಿಸಿಕೊಂಡು ಶತ ಶತ ನಮನಗಳನ್ನು ಸಲ್ಲಿಸುತ್ತೇವೆ.

(ಮಾಹಿತಿ: ವಿವಿಧ ಮೂಲಗಳಿಂದ ಸಂಗ್ರಹ)

●

ಶಿಕ್ಷಣ ಪ್ರತಿ ವ್ಯಕ್ತಿಯಲ್ಲೂ ಪರಿಪೂರ್ಣತೆಯನ್ನು ತರಬೇಕು. ಜೀವನವನ್ನು ನಡೆಸುವ ಸಾಮರ್ಥ್ಯ ನೀಡಬೇಕು – **ಜೆ. ಕೃಷ್ಣಮೂರ್ತಿ**

ಪುಸ್ತಕದ ಹಬ್ಬ

✍ **ನವ್ಯಶ್ರೀ ಶೆಟ್ಟಿ,** ದ್ವಿತೀಯ ಬಿ.ಎ. (ಪತ್ರಿಕೋದ್ಯಮ ವಿಭಾಗ)

ಪುಸ್ತಕದ ಓದು ಒಂದು ರೀತಿ ಹೊಸ ಅನುಭವ.

ಪುಸ್ತಕದ ಓದು ಕೊಡುವ ಖುಷಿ ಇಂಟರ್ನೆಟ್ ಯುಗದ ಯಾವ ತಂತ್ರಜ್ಞಾನದ ಓದು ಕೂಡ ಕೊಡಲ್ಲ. ಪುಸ್ತಕಗಳು ಜೀವನ ಪ್ರೀತಿ ಕಲಿಸುತ್ತದೆ. ಪುಸ್ತಕ ಓದುಗನಿಗೆ ಓದು ಒಂದು ರೀತಿಯ ಪಯಣದ ಸೇತುವೆ. ಆದರೆ ಪುಸ್ತಕ ಎಂದರೆ ಕೆಲವರು ಮಾರು ದೂರ ಹೋಗುತ್ತಾರೆ. ಇನ್ನೂ ಕೆಲವರು ಪುಸ್ತಕವನ್ನು ಬಹು ಪ್ರೀತಿಸುತ್ತಾರೆ. ಅಂತಹ ಪುಸ್ತಕ ಪ್ರೇಮಿಗಳಿಗೆ ನಮ್ಮ ಕಾಲೇಜಿನಲ್ಲಿ ಮಾರ್ಚ್ 5 ಮತ್ತು 6ರಂದು ಪುಸ್ತಕೋತ್ಸವ ಹಮ್ಮಿಕೊಳ್ಳಲಾಗಿತ್ತು. ಪುಸ್ತಕ ಪ್ರೇಮಿಗಳಿಗೆ ಹೇಳಿ ಮಾಡಿಸಿದ ಕಾರ್ಯಕ್ರಮ.

ಒಂದು ದಿನ ಕ್ಲಾಸ್‌ನಲ್ಲಿ ಸುಚಿತ್ ಸರ್, ಕಾಲೇಜ್‌ನಲ್ಲಿ ಪುಸ್ತಕ ಪ್ರದರ್ಶನ ಮತ್ತು ಮಾರಾಟ ನಡೆಯುತ್ತೆ, ನೀವು ಪುಸ್ತಕ ಕೊಳ್ಳಿರಿ ಎಂದಾಗ ಮನಸಲ್ಲಿ ನೂರಾರು ಆಲೋಚನೆಯೂ ಹತ್ತಾರು ನಿರೀಕ್ಷೆಗಳು ಇದ್ದವು. ಎಲ್ಲರ ವಾಟ್ಸಾಪ್ ಸ್ಟೇಟಸ್‌ಗಳಲ್ಲಿ ಪೋಸ್ಟರ್ ಹರಿದಾಡತೊಡಗಿದಾಗ ನಿರೀಕ್ಷೆ ಗರಿಗೆದರಿತು.

ಅಂತೂ ಕಾತರದ ದಿನ ಬಂದೇಬಿಟ್ಟಿತು. ಪುಸ್ತಕಗಳನ್ನು ಪ್ರೀತಿಸುವ ನನಗೆ ಅದು ಒಂದು ರೀತಿಯ ಹಬ್ಬದ ಭಾವನೆ. ಸುಮಾರು 10ಕ್ಕೂ ಹೆಚ್ಚು ಪುಸ್ತಕ ಮಳಿಗೆಗಳು, ತರಾವರಿ ಪುಸ್ತಕಗಳು ನಮ್ಮನ್ನು ಮನಸೂರೆಗೊಳ್ಳುವಂತೆ ಮಾಡಿತ್ತು. ಬೇರೆ ಬೇರೆ ಕಾಲೇಜಿನ ವಿದ್ಯಾರ್ಥಿಗಳು, ಉಪನ್ಯಾಸಕರು, ಹಿರಿಯ ನಾಗರಿಕರು, ಪುಸ್ತಕ ಪ್ರೇಮಿಗಳ ದಂಡೇ ಪುಸ್ತಕದ ಹಬ್ಬದಲ್ಲಿ ನೆರೆದಿತ್ತು. ನಮ್ಮ ಕಾಲೇಜಿನಲ್ಲಿ ಒಂದು ಪುಟ್ಟ ಪುಸ್ತಕದ ಮಳಿಗೆಯಿತ್ತು. ಕಾಲೇಜಿನ ಉಪನ್ಯಾಸಕರು ಬರೆದ ಪುಸ್ತಕದ ಪ್ರದರ್ಶನ ಮತ್ತು ಮಾರಾಟ ನಮ್ಮ ಜವಾಬ್ದಾರಿ. ಗ್ರಂಥಾಲಯದ ಓದು , ಆನ್‌ಲೈನ್ ಖರೀದಿಯಲ್ಲಿ ಪುಸ್ತಕ ಓದುತ್ತಿದ್ದ ನಾನು ಎಂದೂ ಪುಸ್ತಕ ಮಾರಾಟದ ಅಂಗಡಿಗೆ ಹೋಗಿರಲಿಲ್ಲ. ಪುಸ್ತಕದ ಅಂಗಡಿಗೆ ಇನ್ನೂ ಹೋಗದ ನನಗೆ ಇದು ಹೊಸ ಅನುಭವ. ವಿಶೇಷ ರಿಯಾಯಿತಿ, ವಿವಿಧ ಆಫರ್‌ಗಳ ನಡುವೆ ನಾವು ಪುಸ್ತಕವನ್ನು ಭರ್ಜರಿಯಾಗಿ ಮಾರಾಟ ಮಾಡಿದ್ದೆವು.

ಪುಸ್ತಕದ ಹಬ್ಬದಲ್ಲಿ ಆಕರ್ಷಣೆಯ ಕೇಂದ್ರಬಿಂದುವಾಗಿದ್ದು ಡೊನೇಟ್ ಬಾಕ್ಸ್ ಎನ್ನುವ ವಿನೂತನ ಕಲ್ಪನೆ. ಪುಸ್ತಕ ಪ್ರೇಮಿಗಳು ತಾವು ಹೊಸದಾಗಿ ಕೊಂಡ ಪುಸ್ತಕ ಅಥವಾ ಹಿಂದೆ ಖರೀದಿಸಿದ ಪುಸ್ತಕಗಳನ್ನು ಇಲ್ಲಿ ನೀಡಬಹುದಿತ್ತು. ಹೀಗೆ ನೀಡಿದ ಪುಸ್ತಕಗಳನ್ನು ಜಿಲ್ಲೆಯ ಸರಕಾರಿ ಶಾಲೆಗಳಿಗೆ ಹಂಚಿ, ಪ್ರಾಥಮಿಕ ಹಂತದಲ್ಲೇ ಓದಿನ ಅಭಿರುಚಿ ಬೆಳೆಸುವ ವಿನೂತನ ಕಲ್ಪನೆಗೆ ನೂರಾರು ಪುಸ್ತಕಗಳು ಹರಿದು ಬರತೊಡಗಿತು.

ಸಂಜೆ ಕಾಲೇಜಿನ ಕನ್ನಡ ಉಪನ್ಯಾಸಕ ಪ್ರಶಾಂತ್ ಸರ್ ತಂಡದಿಂದ ಮನೋರಂಜನಾ ಕಾರ್ಯಕ್ರಮ. ರಂಗಗೀತೆಗಳ ಈ ಕಾರ್ಯಕ್ರಮದಲ್ಲಿ ಎಲ್ಲರಿಗೂ ಮುಕ್ತ ಅವಕಾಶವಿತ್ತು. ಅಂತಿಮ ದಿನ ಹಿರಿಯ ಲೇಖಕರೊಬ್ಬರು ಹಾಡಿದ ತುಳು ಹಾಡು ಎಲ್ಲರ ಮೆಚ್ಚುಗೆ ಗಳಿಸಿತ್ತು. ಕಾಲೇಜಿನ ವಿದ್ಯಾರ್ಥಿ ಸಂಘಟನೆಯ ''ನಿಮಗಾಗಿ ಪುಸ್ತಕದ ಉಡುಗೊರೆ'' ಎನ್ನುವ ಕಲ್ಪನೆ ಸಾಕಷ್ಟು ಜನರನ್ನು ಆಕರ್ಷಿಸಿತ್ತು.

ಪುಸ್ತಕದ ಖರೀದಿಗೆ ಆಲೋಚಿಸಿ ರವೀಂದ್ರ ಮಂಟಪದ ಒಳ ಹೊಕ್ಕಾಗ ಯಾವ ಪುಸ್ತಕ ತೆಗೆದುಕೊಳ್ಳುವುದು ಅನ್ನುವುದೇ ದೊಡ್ಡ ಗೊಂದಲವಾಗಿತ್ತು. ಸಾವಿರಾರು ಪುಸ್ತಕಗಳ ನಡುವೆ ಪುಸ್ತಕದ ಆಯ್ಕೆ ಯಕ್ಷಪ್ರಶ್ನೆ. ಕೊನೆಗೂ ನೂರಾರು ಪುಸ್ತಕಗಳನ್ನು ತಡಕಾಡಿ ಒಂದಷ್ಟು ಪುಸ್ತಕಗಳನ್ನು ಖರೀದಿ ಮಾಡಿದೆವು. ಮನೆಯ ಪುಟ್ಟ ಗ್ರಂಥಾಲಯಕ್ಕೆ ಹೊಸ ಪುಸ್ತಕ ಸೇರ್ಪಡೆ.

ದಿನ ತರಗತಿ ಕೋಣೆಗಳ ನಡುವೆ, ಪಾಠದ ಗುಂಗಿನಲ್ಲಿ ಇರುತ್ತಿದ್ದ ನಮಗೆಲ್ಲ ಎರಡು ದಿನದ ಪುಸ್ತಕದ ಹಬ್ಬ ಪಠ್ಯದ ಶಿಕ್ಷಣಕ್ಕೂ ಮಿಗಿಲಾಗಿ ಹೊಸ ಪಾಠ ಕಲಿಸಿತ್ತು. ಎರಡು ದಿನಗಳ ಪುಸ್ತಕದ ಹಬ್ಬ ಸಾಕಷ್ಟು ವಿಶೇಷತೆಗಳಿಂದ ಕೂಡಿತ್ತು. ಪುಸ್ತಕಗಳ ಖರೀದಿಯಲ್ಲಿ ಕಾಲೇಜಿನ ವಿದ್ಯಾರ್ಥಿಗಳದ್ದೇ ಸಿಂಹ ಪಾಲು. ವಿದ್ಯಾರ್ಥಿಗಳು ಆನ್ ಲೈನ್ ಓದು, ಮೊಬೈಲ್ ಬಳಕೆಗಳ ನಡುವೆ ಪುಸ್ತಕ ಓದಲ್ಲ ಅನ್ನುವ ಅಪವಾದಗಳ ನಡುವೆ ಪುಸ್ತಕದ ಹಬ್ಬ ಎಲ್ಲವನ್ನೂ ಸುಳ್ಳು ಮಾಡಿಸಿತ್ತು. ಎರಡು ದಿನದ ಪುಸ್ತಕದ ಹಬ್ಬ ನಮಗಂತೂ ಓದಿನ ರುಚಿ ಹೆಚ್ಚಿಸಿದ್ದು ಸುಳ್ಳಲ್ಲ.

●

ಆಟಿ ಕಳೆಂಜ

✍ **ಕೆ. ಎನ್. ಕಾರ್ತಿಕ್,** ದ್ವಿತೀಯ ಬಿ.ಎ. (ಪತ್ರಿಕೋದ್ಯಮ ವಿಭಾಗ)

ಕರಾವಳಿ ಕರ್ನಾಟಕ ಮತ್ತು ಕೇರಳದ ಕಾಸರಗೋಡು ಜಿಲ್ಲೆಯಲ್ಲಿ ಮಳೆಗಾಲದ ತುಳು ಮಾಸ ಆಟಿಯಲ್ಲಿ ಆಚರಿಸುವ ಒಂದು ಜಾನಪದ ಕಲೆಯೇ ಆಟಿ ಕಳೆಂಜ.

ಆಟಿ ಕಳೆಂಜ ತುಳುನಾಡಿನ ಜನಪದ ಕುಣಿತಗಳಲ್ಲಿ ಒಂದು ಆಚರಣಾತ್ಮಕ ಕಲಾ ಪ್ರಕಾರ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಹೆಚ್ಚಾಗಿ ನಲಿಕೆ ಜನವರ್ಗದಲ್ಲಿ ಕಾಣಸಿಗುವ ಕುಣಿತ. ಇದೇ ಕುಣಿತವನ್ನು ಬೆಳ್ತಂಗಡಿ ಭಾಗದಲ್ಲಿ ಮೇರ ಜನವರ್ಗದವರು ನಡೆಸಿಕೊಡುತ್ತಾರೆ. ಈ ಕುಣಿತವನ್ನು ಆಷಾಢ ತಿಂಗಳಲ್ಲಿ ನಡೆಸುವುದರಿಂದ ಇದನ್ನು 'ಆಟಿ ಕಳೆಂಜ' ಎಂತಲೂ ಕರೆಯಲಾಗಿದೆ. ಕಳೆಂಜ ಎಂದರೆ ಚಿಕ್ಕ ಬಾಲಕ, ದುಷ್ಟಶಕ್ತಿಗಳನ್ನು ಹೊಡೆದೋಡಿಸುವ ಮಾಂತ್ರಿಕ ಎಂದರ್ಥವೂ ಇದೆ. ಕಳೆಂಜನು ಊರಿಗೆ ಬಂದ ಮಾರಿಯನ್ನು (ರೋಗ-ರುಜಿನವನ್ನು) ಹೊಡೆದೋಡಿಸುತ್ತಾನೆ ಎನ್ನುವ ಆಶಯದಿಂದಾಗಿ ಈ ಕುಣಿತ ಪ್ರಕಾರವನ್ನು ಆಹ್ವಾನಿಸಿ ದಾನ ನೀಡುವರು. ನಲಿಕೆ ಜನವರ್ಗದವರು ನಡೆಸಿಕೊಡುವ ಈ ಕಳೆಂಜ ವೇಷ ಕಣಿಂಜ ಇದ್ದಿರಬಹುದೇನೋ ಎನ್ನುವ ಅನುಮಾನವೂ ಇದೆ. ಕಾರಣ ಕಣಿಂಜ ಎಂದರೆ ಮಾಟ-ಮಂತ್ರಗಳನ್ನು ದೂರ ಮಾಡುವವ ಎಂದರ್ಥ. ತುಳುವಿನ ಆಟಿ (ಆಷಾಢ: ಚಾಂದ್ರಮಾನದಲ್ಲಿ ನಾಲ್ಕನೆಯ ತಿಂಗಳು) ತಿಂಗಳಲ್ಲಿ ನಲಿಕೆ ಅಥವಾ ಪಾಣಾರ ಜನವರ್ಗದವರು ಆಟಿ ಕಳೆಂಜ ವೇಷವನ್ನು ಹಾಕಿಕೊಂಡು ಮನೆ ಮನೆಗೆ ಹೋಗಿ ಕುಣಿಯುತ್ತಾರೆ. ಸಣ್ಣ ಬಾಲಕನಿಗೆ ತಾಳೆಗರಿಯ ತತ್ರ (ಛತ್ರಿ) ಕೊಟ್ಟು ಕುಣಿಯಲು ಹಿಮ್ಮೇಳದಲ್ಲಿ 'ತೆಂಬರೆ'ಯನ್ನು (ಚರ್ಮ ವಾದ್ಯ) ಪುರುಷ ವ್ಯಕ್ತಿ ನುಡಿಸುತ್ತಿರುತ್ತಾನೆ. ಕಳೆಂಜನ ವೇಷ ಭೂಷಣದಲ್ಲಿ ಮುಖ್ಯವಾಗಿ ಸೊಂಟಕ್ಕೆ ತೆಂಗಿನ ತಿರಿ, ಕಾಲಿಗೆ ಗಗ್ಗರ, ಅಥವಾ ಕೈ-ಮೈಗೆ ಬಣ್ಣ ಮುಖ್ಯವಾಗಿ ಗಡ್ಡ ಮತ್ತು ಮೀಸೆ, ಅಡಿಕೆ ಹಾಳೆಯಿಂದ ಮಾಡಿದ ಮತ್ತು ಕಿಸಗಾರ ಹೂವಿನಿಂದ ಸಿಂಗರಿಸಿದ ಟೊಪ್ಪಿಗೆ ಇವುಗಳು ಆಟಿ ಕಳೆಂಜನ ವೇಷಗಳು.

ಆಟಿ ಕಳೆಂಜ ವೇಷದ ವಿವರ

ಬೆಳ್ತಂಗಡಿ ತಾಲ್ಲೂಕಿನ ಮೇರರಲ್ಲಿನ ಆಟಿ ಕಳೆಂಜ ವೇಷದಲ್ಲಿ ಕಳೆಂಜನ ವೇಷ ಹಾಕುವವರು ವಯಸ್ಕರು ಮತ್ತು ಕೈಯಲ್ಲಿ 'ದುಡಿ' ಎನ್ನುವ ವಿಶೇಷ ವಾದ್ಯವನ್ನು ಹಿಡಿದು ನುಡಿಸುತ್ತಾ ಪಾಡ್ದನವನ್ನು ಹೇಳುತ್ತಾ ಕುಣಿಯುತ್ತಾರೆ.

ಆಟಿ ಕಳೆಂಜ ಕುಣಿತದ ಉದ್ದೇಶ

ಮನುಷ್ಯನಿಗಾಗಲಿ, ಪ್ರಾಣಿ ಪಶುಗಳಿಗಾಗಲಿ ಬಂದು ಮಾರಿಯನ್ನು ಅಥವಾ ರೋಗವನ್ನು ಓಡಿಸುವುದು ಆಟಿ ಕಳೆಂಜನ ಕಾರ್ಯ ಎಂಬುದಾಗಿ ತುಳು ಪಾಡ್ದನದಿಂದ ತಿಳಿದುಬರುವುದು. ತುಳುವಿನಲ್ಲಿ ಆಷಾಢ ಆರಂಭವಾಗುವುದು ಎಂದರೆ ಮಳೆಗಾಲದ ಆರಂಭವೆಂದರ್ಥ, ಕೆಲವೊಮ್ಮೆ ಮಳೆ ಬೀಳದಿದ್ದರೆ ಬಿಸಿ ಹೆಚ್ಚಾಗಿ ಕೆರೆ-ಕುಂಟೆಗಳು ಬತ್ತಲಾರಂಭಿಸಿ ಜನ ನೀರಿಗಾಗಿ ಪರಿತಪಿಸುವರು, ಸಹಜವಾಗಿ ರೋಗ-ರುಜಿನ ಹುಟ್ಟಿಕೊಳ್ಳುವುದು. ಮಳೆಗಾಲ ಆರಂಭ ಹಾಗೂ ಬೇಸಿಗೆಯ ಕೊನೆಯ ಈ ಕಾಲವು ಸಂಕ್ರಮಣದ ಸ್ಥಿತಿಯನ್ನು ತಂದೊಡ್ಡುತ್ತವೆ. ಆಟಿ ಅಥವಾ ಆಷಾಢ ತಿಂಗಳಲ್ಲಿ ಬಿಸಿಲು ಕಾದರೆ ಆನೆಯ ಬೆನ್ನೂ ಬಿರಿಯುವುದೆಂಬುದಾಗಿ ತುಳುವಿನಲ್ಲಿ ಗಾದೆಯಿದೆ. (ಆಟಿದ ದೊಂಬು ಆನೆದ ಬೆರಿ ಪುಡಪು) ಹೀಗಾಗಿ ಆಟಿ ಕಳೆಂಜ ಬಂದರೆ ರೋಗ-ರುಜಿನಗಳನ್ನು ನಿವಾರಣೆ ಮಾಡುತ್ತಾನೆ ಎನ್ನುವ ನಂಬಿಕೆ ಜನರಲ್ಲಿ ಇದೆ. ಹೀಗಾಗಿ ಆಟಿ ಕಳೆಂಜನಿಗೆ ತುಳುನಾಡಿನಲ್ಲಿ ಮಹತ್ವದ ಸ್ಥಾನವಿದೆ. ಕಾಸರಗೋಡು ಪ್ರಾಂತ್ಯದಲ್ಲಿ ಕಳೆಂಜ ಕುಣಿತವನ್ನು 'ಕೋಪಾಳ'ರು ನಡೆಸಿದರೆ 'ಮಲಯ' ಜನಾಂಗದವರು ಬೇಡ ಕುಣಿತವನ್ನೂ 'ವಣ್ಣನ್' ಜನಾಂಗದವರು 'ಮರ್ದ' ಎಂಬ ಕುಣಿತ ನೀಡಿ ಪಡಿ ಹಣ ತೆಗೆದುಕೊಂಡು ಹೋಗುವ ಸಂಪ್ರದಾಯವನ್ನು ಕಾಣಬಹುದು

●

ಪತ್ರಕರ್ತ ಸಂಪರ್ಕ ಇಟ್ಟುಕೊಳ್ಳಬೇಕು ಹೊರತು ಸಂಬಂಧವಲ್ಲ

✍ **ನವ್ಯಶ್ರೀ ಶೆಟ್ಟಿ**, ದ್ವಿತೀಯ ಬಿ.ಎ. (ಪತ್ರಿಕೋದ್ಯಮ ವಿಭಾಗ)

ಕಾಲೇಜಿನ ಪತ್ರಿಕೋದ್ಯಮ ವಿಭಾಗದ ಚಿತ್ತು ಚಿತ್ತಾರ ಫೇಸ್ಬುಕ್ ಪುಟಕ್ಕಾಗಿ ದಿಗ್ವಿಜಯ ನ್ಯೂಸ್‌ನ ಖ್ಯಾತ ಪತ್ರಕರ್ತ ರಕ್ಷಿತ್ ಶೆಟ್ಟಿ ಅವರೊಂದಿಗೆ ಸಂದರ್ಶನ ಮಾಡಲಾಗಿತ್ತು. ಪತ್ರಿಕೋದ್ಯಮದ ಬಗ್ಗೆ ರಕ್ಷಿತ್ ಸಾಕಷ್ಟು ವಿಷಯಗಳನ್ನು ಸಂದರ್ಶನದಲ್ಲಿ ಹಂಚಿಕೊಂಡಿದ್ದರು. ರಕ್ಷಿತ್ ಶೆಟ್ಟಿ ಕುರಿತಾದ ಸಂದರ್ಶನ ಇಲ್ಲಿದೆ .

''ಪತ್ರಕರ್ತನಿಗೆ ಮೊದಲು ವಿಷಯಗಳನ್ನು ಕುತೂಹಲದಿಂದ ಅಧ್ಯಯನ ಮಾಡುವ ಗುಣ, ಕಲಿಯುವ ಆಸಕ್ತಿ ಇರಬೇಕು. ಕೆಲವರು ಈ ಕ್ಷೇತ್ರಕ್ಕೆ ಇಷ್ಟಪಟ್ಟು ಬರುತ್ತಾರೆ. ಇನ್ನೂ ಕೆಲವರು ಕೆಲಸದ ಅನಿವಾರ್ಯತೆಗಾಗಿ ಬರುತ್ತಾರೆ. ಆದರೆ, ನಾವು ಒಮ್ಮೆ ಈ ರಂಗಕ್ಕೆ ಬಂದ ಮೇಲೆ ಏನು ಮಾಡುತ್ತೇವೆ ಅನ್ನುವುದೇ ಮುಖ್ಯ. ಕೆಲಸ ಮಾಡುವ ಸ್ಥಳದಲ್ಲಿ ವೃತ್ತಿ ಸ್ವಾತಂತ್ರ್ಯ ಆತನಿಗಿರಬೇಕು. ಆಗ ಮಾತ್ರ ಆತ ನಿಜವಾದ ಪತ್ರಕರ್ತನಾಗಲು ಸಾಧ್ಯ'' ಎನ್ನುವುದು ರಕ್ಷಿತ್ ಶೆಟ್ಟಿಯವರ ಮಾತು.

ರಕ್ಷಿತ್ ಸ್ಪಂದನ ವಾಹಿನಿಯ ತಿರುಗುಬಾಣ ಮೂಲಕ ಕರಾವಳಿಯಲ್ಲಿ ಹೊಸ ಸಂಚಲನ ಮೂಡಿಸಿದ್ದರು. ಕರಾವಳಿಯ ಬಹುತೇಕ ಗಣ್ಯರ ಸಂದರ್ಶನ ಮಾಡಿದ್ದ ಹೆಗ್ಗಳಿಕೆ ಇವರದ್ದು. ಡಿಬೇಟ್ ಜೊತೆಗೆ ರಾಜಕೀಯದ ಆಗುಹೋಗುಗಳ ವಿಶ್ಲೇಷಣೆಯ ಕಾರ್ಯಕ್ರಮಗಳ ಮೂಲಕ ರಕ್ಷಿತ್ ಮಾಧ್ಯಮ ರಂಗದಲ್ಲಿ ಹೊಸ ಹೆಜ್ಜೆ ಗುರುತು ಸೃಷ್ಟಿಸಿದವರು. ದಿಗ್ವಿಜಯ ಚಾನೆಲ್‌ನಲ್ಲಿ ಚುನಾವಣೆ ಸಮಯದಲ್ಲಿ ಇವರು ನಡೆಸಿಕೊಡುವ ಯುದ್ಧ ಕಾಂಡ ಹಾಗೂ ಪ್ರತೀ ಆದಿತ್ಯವಾರ ಇವರು ನಡೆಸುವ ಮೆಗಾ ಡಿಬೇಟ್ ಬಹುತೇಕರ ನೆಚ್ಚಿನ ಕಾರ್ಯಕ್ರಮ.

ರಕ್ಷಿತ್ ಶೆಟ್ಟಿ ಮೂಲತಃ ಉಪ್ಪಿನಂಗಡಿಯವರು. ಪತ್ರಿಕೋದ್ಯಮ ದಲ್ಲಿ ಪದವಿ ಪಡೆದ ರಕ್ಷಿತ್ ಕೆಲ ಕಾಲ ಮಂಗಳೂರಿನ ಸ್ಥಳೀಯ ಮಾಧ್ಯಮ ಹಾಗೂ ಪತ್ರಿಕೆಯಲ್ಲಿ ಕೆಲಸ ಮಾಡಿದ್ದರು. ಆ ಬಳಿಕ ಉಡುಪಿಯ ಸ್ಪಂದನ ವಾಹಿನಿ ಸೇರಿಕೊಂಡರು. ಸ್ಪಂದನದಲ್ಲಿ ಆಗಿನ ಉಪಮುಖ್ಯಮಂತ್ರಿಯಾಗಿದ್ದ ಈಶ್ವರಪ್ಪ ಅವರನ್ನು ರಕ್ಷಿತ್ ಸಂದರ್ಶನ ಮಾಡಬೇಕಿತ್ತು, ರಕ್ಷಿತ್ ನೋಡಿದ ಈಶ್ವರಪ್ಪ, ಇವರ ಇಂಟರ್ವ್ಯೂ ಬಗ್ಗೆ ಅನುಮಾನಿಸಿದ್ದರು. ಕಾರಣ ಆಗ ರಕ್ಷಿತ್ ತುಂಬಾ ಚಿಕ್ಕವರು, ಹುಡುಗಾಟಿಕೆ ವಯಸ್ಸು. ಆದರೆ ಇಂಟರ್ವ್ಯೂ ಮುಗಿದ ಮೇಲೆ ರಕ್ಷಿತ್ ಅವರನ್ನು ಹೊಗಳಿ ನೀನು ಎತ್ತರಕ್ಕೆ ಬೆಳೆಯುತ್ತೀಯಾ ಅಂದಿದ್ದರಂತೆ ಈಶ್ವರಪ್ಪ. ಬಳಿಕ ಉಡುಪಿಯಿಂದ ಮಹಾನಗರಿಗೆ ಪಯಣ.

ಬೆಂಗಳೂರು ಗೊತ್ತೇ ಇಲ್ಲದ ಹುಡುಗ ತನ್ನ ಬದುಕು ಕಟ್ಟಿಕೊಳ್ಳಲು ಅನುಭವಿಸಿದ ಕಷ್ಟ ಅನೇಕ. ವಿಶ್ವವಾಣಿಯಲ್ಲಿ ಪೊಲಿಟಿಕಲ್ ರಿಪೋರ್ಟರ್ ಆಗಿ ಉದ್ಯೋಗ ಆರಂಭಿಸಿದ್ದರು. ಇವರ ಕೆಲವು ವರದಿಗಳು ವಿಧಾನಸೌಧದಲ್ಲಿ ಕೂಡ ಪ್ರಸ್ತಾಪವಾಗಿತ್ತು. ಮತ್ತೆ ಟಿವಿ ಯಲ್ಲಿ ಕೆಲಸ ಮಾಡುವ ಆಸೆ ಚಿಗುರೊಡೆದಿತ್ತು.

ಒಂದು ಸುದ್ದಿ ಸಂಸ್ಥೆಯಲ್ಲಿ ಕೆಲಸ ಮಾಡುತ್ತಿದ್ದ ರಕ್ಷಿತ್, ಅಮ್ಮನಿಗೆ ಹುಷಾರಿಲ್ಲ ರಜೆ ಬೇಕೆಂದಾಗ ಕನಿಷ್ಠ ಮಾನವೀಯತೆ ತೋರದವರ ಎದುರು ಐಡಿ ಬಿಸಾಡಿ ರಾಜೀನಾಮೆ ಕೊಟ್ಟಿದ್ದರು. ಇದು ಮಾಧ್ಯಮ ಬದುಕಲ್ಲಿ ಅವರು ಕಲಿತ ಅತಿ ದೊಡ್ಡ ಪಾಠ. ಹೀಗೆ ಕೆಲವು ವಾಹಿನಿಯಲ್ಲಿ ಕೆಲಸ ಮಾಡಿ ಸಿಹಿ ಕಹಿ ನೋವುಂಡ ರಕ್ಷಿತ್ ಅವರ ಮಾಧ್ಯಮ ಬದುಕಿನ ದಿಕ್ಕು ಬದಲಾಯಿಸಿದ್ದು ದಿಗ್ವಿಜಯ ನ್ಯೂಸ್. ಇಂದು ಅವರ ಮಾಧ್ಯಮ ಬದುಕಿನ ಪಯಣಕ್ಕೆ 9 ವರ್ಷ.

ಅಬ್ಬರವಿಲ್ಲದ ನಿರೂಪಣೆ, ಹರಿತವಾದ ಮಾತು, ಎಲ್ಲರನ್ನೂ ಧೈರ್ಯವಾಗಿ ಪ್ರಶ್ನಿಸಬಲ್ಲ ವ್ಯಕ್ತಿತ್ವ. ಒಬ್ಬ ಅಟೆಂಡರ್ ಮಗ ಇಂದು ರಾಜ್ಯ ಮಟ್ಟದ ವಾಹಿನಿಯಲ್ಲಿ ಮಿಂಚುತ್ತಿರುವುದು ಸುಲಭದ ಮಾತಲ್ಲ. ಬಡತನದ ನಡುವೆ ಬೆಳೆದು ಬಂದ ಇವರಿಗೆ ತಂಗಿಯೇ ಬೆನ್ನೆಲುಬು. ಕರಾವಳಿ ಬಿಟ್ಟು ಬೆಂಗಳೂರಿಗೆ ಹೋಗಲು ಇವರಿಗೆ ತಂಗಿಯೇ ಪ್ರೇರಣೆ. ಕೊಲೆ ಬೆದರಿಕೆಗಳು ಬಂದಾಗ ಅಮ್ಮ ಹೆದರಿದರೆ, ಇನ್ನಷ್ಟು ಮಾಡು ಎಂದು ಹೇಳುತ್ತಾ ಅಣ್ಣನಿಗೆ ಸದಾ ಪ್ರೋತ್ಸಾಹ ನೀಡುತ್ತಿದ್ದಾರೆ ತಂಗಿ ರಮ್ಯ. ಸಿಲಿಕಾನ್ ಸಿಟಿಗೆ ಬಂದಾಗ ಅಲ್ಲಿ ಇವರ ಕೈ ಹಿಡಿದ ಕರಾವಳಿಗರು ಅನೇಕರು.

ರಕ್ಷಿತ್ ಅನುಭವದ ಪ್ರಕಾರ ಸ್ಥಳೀಯ ಮಾಧ್ಯಮದಲ್ಲಿ ಕೆಲಸ ಮಾಡಿ ನಾವು ಏನೇ ಆಗಿದ್ದರೂ ರಾಜ್ಯ ಮಟ್ಟದ ಮಾಧ್ಯಮ ಸಂಸ್ಥೆಗೆ ಬಂದಾಗ ಅಲ್ಲಿ ನಾವು ಏನೂ ಅಲ್ಲ. ಪ್ರತಿ ವಿಷಯವನ್ನು ಹೊಸತಾಗಿ ಕಲಿಯಬೇಕಾಗುತ್ತದೆ. ಜೊತೆಗೆ ಯಾವುದೇ ರೀತಿಯ ಮಡಿವಂತಿಕೆ ಆತ ಇಟ್ಟುಕೊಳ್ಳಬಾರದು. ಎಲ್ಲ ವಿಷಯಗಳ ಬಗ್ಗೆ ತಿಳಿದುಕೊಳ್ಳಬೇಕು. ಪತ್ರಕರ್ತ ನಿಮಿಷ ನಿಮಿಷಕ್ಕೆ, ಗಂಟೆ ಗಂಟೆಗೆ ದಿನದ ಆಗುಹೋಗುಗಳ ಬಗ್ಗೆ ಅಪ್ಡೇಟ್ ಆಗಬೇಕು. ಆಗ ಮಾತ್ರ ಆತ ಈ ರಂಗದಲ್ಲಿ ಬದುಕಲಿಕ್ಕೆ ಸಾಧ್ಯ.

ರಕ್ಷಿತ್ ಸಾಕಷ್ಟು ರಾಜಕೀಯ ಒತ್ತಡಗಳನ್ನ ಎದುರಿಸಿದವರು. ಇವರು ಹೇಳುವಂತೆ ಮಾಧ್ಯಮ ಕ್ಷೇತ್ರದಲ್ಲಿ ರಾಜಕೀಯ ಒತ್ತಡಗಳು ಬರುವುದು ಸಾಮಾನ್ಯ. ಆದರೆ ಧೈರ್ಯದಿಂದ ಪ್ರಶ್ನೆ ಮಾಡುವ ಗುಣವಿರಬೇಕು. ಅದು ನಾವು ಪ್ರಾಮಾಣಿಕರಾದಾಗ ಮಾತ್ರ ಸಾಧ್ಯ.

ಚಿಂತಕ ಓಶೋ ಹೇಳುವಂತೆ 'ಪತ್ರಕರ್ತನಾದವನು ಎಲ್ಲರ ಜೊತೆ ಸಂಪರ್ಕ ಇಟ್ಟುಕೊಳ್ಳಬೇಕು ಹೊರತು ಸಂಬಂಧವಲ್ಲ'.

ಪತ್ರಿಕೋದ್ಯಮಕ್ಕೆ ಇನ್ನೊಂದು ಹೆಸರೇ ಸವಾಲು.

ಸವಾಲುಗಳನ್ನ ಸ್ವೀಕರಿಸಬಲ್ಲವನೇ ನಿಜವಾದ ಪತ್ರಕರ್ತ. ಇತರರು ಹೇಳಿದ್ದನ್ನು ಬರೆಯುವವನು ಪತ್ರಕರ್ತನಾಗಲಾರ. ಅದನ್ನು ಯಾರು ಬೇಕಾದರೂ ಬರೆಯಬಲ್ಲರು. ಅದಕ್ಕೂ ಹೊರತಾಗಿ ಹೊಸತಾಗಿ ಏನನ್ನಾದರೂ ಮಾಡಬೇಕು. ಆಗ ಮಾತ್ರ ಆತ ಪತ್ರಕರ್ತನಾಗುತ್ತಾನೆ ಎನ್ನುವುದು ಇವರ ಮಾತು.

ರಕ್ಷತ್ ಡಿಬೇಟ್ ಕಾರ್ಯಕ್ರಮಗಳ ಮೂಲಕ ಜನ ಮನಸ್ಸು ಗೆದ್ದವರು. ಡಿಬೇಟ್‌ಗಳಿಗಾಗಿ ಮೊದಲೇ ತಯಾರಿ ಮಾಡಿಕೊಳ್ಳಬೇಕು. 1 ಗಂಟೆ ಡಿಬೇಟ್ ಕಾರ್ಯಕ್ರಮಕ್ಕೆ ಸುಮಾರು 2 ಗಂಟೆಯಾದರೂ ತಯಾರಿ ಮಾಡಿಕೊಳ್ಳಬೇಕು. ಆತ್ಮವಿಶ್ವಾಸದಿಂದ ಪೂರ್ವ ತಯಾರಿ ಇಲ್ಲದೇ ಹೋದರೆ ನಾವೇ ಟ್ರೋಲ್ ಆಗುತ್ತೇವೆ ಎನ್ನುತ್ತಾರೆ ರಕ್ಷತ್.

ಕೆಲವರಿಗೆ ಏರು ಧ್ವನಿಯಲ್ಲಿ ಮಾತಾಡಿದರೆ ಮಾತ್ರ ನಿರೂಪಣೆ ಎನ್ನುವ ತಪ್ಪು ಕಲ್ಪನೆಯಿದೆ. ಆದರೆ, ಏರು ಧ್ವನಿಯಲ್ಲಿ ಮಾತನಾಡುವುದೇ ನಿರೂಪಣೆಯಲ್ಲ. ಯಾವ ವಿಷಯವನ್ನು ಏರು ಧ್ವನಿಯಲ್ಲಿ ಹೇಳಬೇಕೋ ಆ ವಿಷಯ ಮಾತ್ರ ಹೇಳಬೇಕು ಹೊರತು ಎಲ್ಲ ವಿಷಯವನ್ನಲ್ಲ ಎನ್ನುತ್ತಾರೆ ರಕ್ಷತ್ ಶೆಟ್ಟಿ.

ಇಂದಿನ ದಿನಗಳಲ್ಲಿ ಓದು ಮುಗಿಸಿ ಮಾಧ್ಯಮ ರಂಗಕ್ಕೆ ಬರುವವರಿಗೆ ಪ್ರಾಯೋಗಿಕ ಜ್ಞಾನದ ಕೊರತೆಯಿದೆ. ಅದಕ್ಕಾಗಿ ಕಾಲೇಜುಗಳಲ್ಲಿ ಪತ್ರಿಕೋದ್ಯಮ ವಿಭಾಗಗಳು ಅಪ್ಡೇಟ್ ಆಗಬೇಕು. ಪ್ರಾಯೋಗಿಕ ಜ್ಞಾನ ಹೆಚ್ಚಿಸಲು, ಪ್ರಿಂಟ್ ಮೀಡಿಯಾ, ನ್ಯೂಸ್ ಮೀಡಿಯಾದವರನ್ನು ಕರೆಸಿ ಕಾರ್ಯಕ್ರಮ ಮಾಡಬೇಕು. ಜೊತೆಗೆ ಎಲ್ಲವನ್ನೂ ಕುತೂಹಲದಿಂದ ನೋಡುವ ಗುಣ ಬೆಳೆಸಿಕೊಳ್ಳಬೇಕು. ಕುತೂಹಲ ನಮಗೆ ಜ್ಞಾನ ನೀಡುತ್ತೆ. ಕುತೂಹಲ ಸತ್ತರೆ ನಮ್ಮೊಳಗಿನ ಪತ್ರಕರ್ತ ಕೂಡ ಸಾಯುತ್ತಾನೆ ಎನ್ನುತ್ತಾರೆ ರಕ್ಷತ್ ಶೆಟ್ಟಿ. ●

ಅವಳು

ಅವಳನ್ನ ನೋಡಿದ್ದು ಐದು ವರ್ಷಗಳ ಹಿಂದೆ
ಹೈಸ್ಕೂಲಿನಲ್ಲಿ...
ಮಾತಾಡಿದ್ದು ಐದು ವರ್ಷಗಳ ನಂತರ
ಫೋನಿನಲ್ಲಿ...

ಅವಳು ಮಾತಾಡಲು ನಿಂತರೆ ಪಟಪಟ
ಕೇಳಿದ್ದಕ್ಕೆ ಉತ್ತರ ಹೇಳಬೇಕು ಪಟಪಟ

ಮುದ್ದು ಮುಖದ ಮುಗುಳ್ನಗುವವಳು
ಮೃದು ಮನಸ್ಸಿನ ಮೊಗದವಳು
ಕೋಪದಲ್ಲೂ ಕಂಪಿಸುವಳು
ಮಾತಲ್ಲೂ ಮುದ್ದಿಸುವಳು

ಕೆಲವೊಮ್ಮೆ ಮಾತಾಡಲು ಅಸಿದ್ಧಳವಳು
ಮಾತಾಡಿದ್ರೆ ಮಾತೇ ಮುಗಿಸದೆ ಮಾತಾಡುವವಳು

ಕಳೆದ ಹಿಂದಿನ ನೆನಪುಗಳ ನೆನಪಿಸಿ
ಕಿಸಕ್ಕನೆ ನಗುವವಳು...
ಸ್ನೇಹಕ್ಕೂ, ಪ್ರೀತಿಗಿಂತ ಮಿಗಿಲಾಗಿ
ಪ್ರೀತಿಸುವವಳು...

✍ **ಸದಾಶಿವ ಬಿ. ಎನ್.,** ತೃತೀಯ ಬಿ.ಎ.

ಸೋಲು-ಗೆಲುವು

✍ **ಕೆ. ಈ. ದಿಶಾ ಭಟ್**, ಪ್ರಥಮ ಬಿ.ಕಾಂ.

'ಸೋಲು ಗೆಲುವಿನ ಸೋಪಾನ.' ಸೋಲು ಮತ್ತು ಗೆಲುವು ಒಂದೇ ನಾಣ್ಯದ ಎರಡು ಮುಖಗಳಿದ್ದಂತೆ. ಹುಟ್ಟು-ಸಾವು ಹೇಗೋ ಹಾಗೆ ಸೋಲು-ಗೆಲುವು ಕೂಡ ಪ್ರತಿಯೊಂದು ಜೀವಿಯಲ್ಲಿಯೂ ಬರುತ್ತದೆ. ಪ್ರತಿಯೊಬ್ಬ ಮನುಷ್ಯನು ಹುಟ್ಟಿನಿಂದ ಸಾಯುವ ತನಕ ಎಷ್ಟೋ ಬಾರಿ ಸೋಲು-ಗೆಲುವುಗಳನ್ನು ಕಂಡಿರುತ್ತಾನೆ. ಸೋತಾಗ ಕುಗ್ಗದೆ ಗೆದ್ದಾಗ ಹಿಗ್ಗದೆ ಎರಡನ್ನೂ ಸಮಾನಾಗಿ ಸ್ವೀಕರಿಸಿದರೆ ಮಾತ್ರ ಜೀವನದಲ್ಲಿ ಯಶಸ್ಸು ಕಾಣಬಹುದು.

ಅಜ್ಞಾನತಿಮಿರಾಂಧಸ್ಯ ಜ್ಞಾನಾಂಜನಶಲಾಕಯ
ಚಕ್ಷುರುನ್ಮೀಲಿತಂ ಯೇನ ತಸ್ಮೈ ಶ್ರೀ ಗುರುವೇ ನಮಃ

ಜ್ಞಾನ ಎಂದರೆ ಗೆಲುವು, ಅಜ್ಞಾನವೆಂದರೆ ಸೋಲು. ಅಜ್ಞಾನವೆಂಬ ಕತ್ತಲೆಯಿಂದ ಅಂಧನಾದ ಶಿಷ್ಯನ ಕಣ್ಣನ್ನು ಜ್ಞಾನವೆಂಬ ಅಂಜನಾಶಲಾಕೆಯ ಮೂಲಕ ತೆರೆಯುವವನು ಗುರು. ಒಬ್ಬ ಗುರು ಕೂಡ ತನ್ನ ಶಿಷ್ಯನನ್ನು ಸೋಲಿನಿಂದ ಗೆಲುವಿನ ಕಡೆ ಕರೆದೊಯ್ಯುವಲ್ಲಿ ಮುಖ್ಯಪಾತ್ರ ವಹಿಸುತ್ತಾನೆ ಎಂಬುದನ್ನು ಈ ಕೆಳಗಿನ ಕಥೆ ವಿವರಿಸುತ್ತದೆ:

ಒಂದು ಊರಲ್ಲಿ ಒಂದು ಪುಟ್ಟ ಸಂಸಾರ. ತಂದೆ-ತಾಯಿ ಹಾಗೂ ಇಬ್ಬರು ಮಕ್ಕಳು. ತುಂಬಾ ಖುಷಿಯಿಂದ ಇದ್ದ ಕುಟುಂಬ. ಬಡತನದಲ್ಲಿದ್ದರೂ ಸುಖ-ನೆಮ್ಮದಿಯಿಂದ ಬಾಳುತ್ತಿದ್ದರು. ತಂದೆ ರಾಮಪ್ಪ, ತಾಯಿ ಅಂಬಿಕಾ, ಮಗಳು ಪ್ರೀತಿ, ಮಗ ಕಿರಣ್. ದುರದೃಷ್ಟವಶಾತ್ ಮನೆಯ ಯಜಮಾನ ರಾಮಪ್ಪ ಹೃದಯಾಘಾತದಿಂದ ಅಸುನೀಗಿದ. ಆಗ ಆ ಸಂಸಾರಕ್ಕೆ ನೆಲೆಯೇ ಇಲ್ಲದಂತಾಗುತ್ತದೆ. ಅಂಬಿಕಾ ಹೇಗೋ ಕಷ್ಟಪಟ್ಟು ಯಾರ್‍ಯಾರ ಮನೆಯಲ್ಲಿ ಮುಸುರೆ ತಿಕ್ಕಿ ಕೂಲಿ-ನಾಲಿ ಮಾಡಿ ಹೊಟ್ಟೆ-ಬಟ್ಟೆ ಕಟ್ಟಿ ಮಕ್ಕಳನ್ನು ಶಾಲೆಗೆ ಕಳುಹಿಸುತ್ತಾರೆ. ಮಗಳು ಪ್ರೀತಿ ಕೂಡ ತಾಯಿ ಜೊತೆ ಕೆಲಸ ಮಾಡಿ ಬಿಡುವಿನ ಸಮಯದಲ್ಲಿ ಓದಿಕೊಂಡು ದ್ವಿತೀಯ ಪಿ.ಯು.ಸಿ. ಪರೀಕ್ಷೆಯಲ್ಲಿ ಪ್ರಥಮ ಶ್ರೇಣಿಯಲ್ಲಿ ಪಾಸಾಗುತ್ತಾಳೆ. ಆದರೆ ಮಗ ಕಿರಣ್ ಮಾತ್ರ ಹತ್ತನೇ ತರಗತಿಯಲ್ಲಿ ಎಲ್ಲ ವಿಷಯಗಳಲ್ಲೂ ಅನುತ್ತೀರ್ಣ ಹೊಂದಿದ್ದನು. ಈ ವಿಷಯ ಕೇಳಿದ ಅಂಬಿಕಾಳಿಗೆ ಬರಸಿಡಿಲೇ ಬಡಿದಂತಾಗಿತ್ತು. ತನ್ನ ಜೀವನವೇ ಸೋಲಿನಿಂದ ತುಂಬಿ ಹೋಗಿದೆ ಎಂದು ನೊಂದಳು. ಮಗಳಿಗೆ ಮುಂದೆ ಓದಬೇಕೆಂಬ ಹಂಬಲವಿದ್ದರೂ ತಾಯಿ ಅಂಬಿಕಾಳ ಬಳಿ ಹಣವಿಲ್ಲದ ಕಾರಣ ಇದ್ದ ಅಲ್ಪಸ್ವಲ್ಪ ಹಣದಲ್ಲಿ ಮಗಳ ಮದುವೆ ಮಾಡಿದಳು. ಮಗ ಕಿರಣ್ ಜೀವನದ ಗತಿಯೇನು? ಎಂಬ ಚಿಂತೆ ಅಂಬಿಕಾಳನ್ನು ಸದಾ ಕಾಡುತ್ತಿತ್ತು. ಆಗ ಕಿರಣ್ ಓದುತ್ತಿದ್ದ ಶಾಲೆಯ ಮುಖ್ಯ ಗುರುಗಳು ಕಿರಣ್‌ನನ್ನು ಸರಿ ಮಾರ್ಗಕ್ಕೆ ತರುತ್ತೇನೆ ಎಂಬ ಮಾತನ್ನು ಅಂಬಿಕಾಳಿಗೆ ನೀಡುತ್ತಾರೆ.

ದಿನ ಕಳೆದಂತೆ ಕಿರಣ್ ಮತ್ತು ಆತನ ಸ್ನೇಹಿತರು ಮಾದಕ ವ್ಯಸನದ ದಾಸರಾಗಿದ್ದರು. 'ಸಹವಾಸದಿಂದ ಸನ್ಯಾಸಿ ಕೆಟ್ಟ' ಎಂಬ ಮಾತಿನಂತೆ ಕಿರಣ್ ಕೂಡ ಆತನ ಸ್ನೇಹಿತರೊಂದಿಗೆ ಸೇರಿ ತನ್ನ ಜೀವನವನ್ನೇ ಹಾಳು ಮಾಡಿಕೊಳ್ಳಲು ಮುಂದಾಗಿದ್ದ. ಹೀಗೆ ದಿನ ಸಾಗುತ್ತ ಒಮ್ಮೆ ಕಿರಣ್ ಮತ್ತು ಆತನ ಸ್ನೇಹಿತರು ಪೋಲಿಸರ ಕೈಯಲ್ಲಿ ಸಿಕ್ಕಿಬಿದ್ದರು. ಆತನ ಸ್ನೇಹಿತರು ಶ್ರೀಮಂತರಾದ ಕಾರಣ ದುಡ್ಡು ಕೊಟ್ಟು ಬಿಡುಗಡೆಯಾದರು. ಆದರೆ ಕಿರಣ್ ಮಾತ್ರ ಜೈಲಲ್ಲೇ ಉಳಿದ. ವಿಷಯ ತಿಳಿದ ಕೂಡಲೇ ಕಿರಣ್ ತಾಯಿ ಅಂಬಿಕಾ ಮತ್ತು ಆತನ ಗುರುಗಳು ಪೋಲಿಸ್ ಠಾಣೆಗೆ ಬಂದರು. ಗುರುಗಳ ಸಹಾಯದಿಂದ ಕಿರಣ್ ಬಿಡುಗಡೆ ಕೂಡ ಆಯಿತು. ಆಗಲೇ ಕಿರಣ್‌ಗೆ ತನ್ನ ತಪ್ಪಿನ ಅರಿವಾಗಿತ್ತು. ನಂತರ ಗುರುಗಳು ಕಿರಣ್‌ನನ್ನು ಕರೆದು ಜೀವನದ ಮುಖ್ಯ ಘಟ್ಟಗಳಾದ ಸೋಲು-ಗೆಲುವು ಎಂಬ ವಿಷಯದ ಮಹತ್ವವನ್ನು ಬಿಡಿಸಿ ತಿಳಿಸಿದರು. ಇದನ್ನೇ ತಲೆಯಲ್ಲಿಟ್ಟುಕೊಂಡು ಕಿರಣ್ ತನ್ನ ವಿದ್ಯಾಭ್ಯಾಸ ಮುಂದುವರೆಸಿದ. ಯಾವುದೇ ಪುಂಡು-ಪೋಕರಿಗಳ ಸಹವಾಸ ಮಾಡದೇ ತನ್ನಷ್ಟಕ್ಕೆ ತಾನಿದ್ದು ಉತ್ತಮವಾಗಿ ಓದಿ ಐ.ಎ.ಎಸ್. ಪಾಸಾದ. ಈ ಸಂತೋಷದ ವಿಷಯ ಮೊದಲು ತನ್ನ ತಾಯಿಗೆ ತಿಳಿಸಿ ನೇರ ಗುರುಗಳ ಮನೆಗೆ ಹೋಗಿ ವಿಷಯ ತಿಳಿಸಿದ. ಗುರುಗಳು ಆನಂದಬಾಷ್ಪ ಸುರಿದು ನೀನು ಕಷ್ಟಪಟ್ಟಿದ್ದಕ್ಕೆ ದೊರೆತ ಫಲ ಎಂದು ಹೇಳಿ ತಬ್ಬಿಕೊಂಡರು. ನಂತರ ಯಾರ ಒತ್ತಡಕ್ಕೂ ಮಣಿಯದೆ, ಬಡವರು-ಶ್ರೀಮಂತರು ಎಂಬ ಭೇದ-ಭಾವ ತೋರದೆ ತನ್ನ ಕರ್ತವ್ಯವನ್ನು ತಾನು ನಿಷ್ಠೆಯಿಂದ ಮಾಡಿ ಭಾರಿ ಜನಮನ್ನಣೆ ಗಳಿಸಿದ. ತನ್ನ ಗೆಲುವಿಗೆ ಕಾರಣರಾದ ಗುರುಗಳಿಗೆ ಏನಾದರೂ ಗುರುಕಾಣಿಕೆ ನೀಡಬೇಕೆಂದು ಅವರ ಮನೆಗೆ ಹೋಗುತ್ತಾನೆ. ಆಗ ಗುರುಗಳು ನಿಜವಾಗಿಯೂ ನನಗೆ ಗುರುಕಾಣಿಕೆ ನೀಡಬೇಕೆಂದಿದ್ದರೆ ನನ್ನ ಮಗಳನ್ನು ನೀನೇ ಮದುವೆಯಾಗು. ಯಾಕೆಂದರೆ ನನಗೂ ವಯಸ್ಸಾಯಿತು. ನನ್ನ ಆಯಸ್ಸು ಮುಗಿದರೆ ಅವಳಿಗೆ ಯಾರೂ ಗತಿ ಇಲ್ಲದಂತಾಗುತ್ತದೆ. ಆದ ಕಾರಣ ಬರೀ ಸೋಲೇ ತುಂಬಿದ್ದ ನಿನ್ನ ಜೀವನಕ್ಕೆ ನಾನು ಬೆಳಕಾದೆ, ಈಗ ನನ್ನ ಮಗಳ

ಜೀವನಕ್ಕೆ ನೀನು ಬೆಳಕಾಗಿ ನನ್ನ ಈ ಒಂದು ಕೊನೆ ಆಸೆ ನೆರವೇರಿಸು ಎಂದಾಗ ಗುರುಗಳ ಮಾತಿಗೆ ಇಲ್ಲ ಎನ್ನಲಾಗದೆ ತನ್ನ ತಾಯಿ ಹಾಗೂ ಅಕ್ಕನ ಒಪ್ಪಿಗೆ ಪಡೆದು ಗುರುಗಳ ಮಗಳನ್ನು ಮದುವೆಯಾಗಿ ಸುಖ-ನೆಮ್ಮದಿಯಿಂದ ಬಾಳುತ್ತಾನೆ. ಕಿರಣ್ ತಾಯಿ ಅಂಬಿಕಾ ಕೂಡ ತನ್ನ ಮಗನ ಗೆಲುವನ್ನು ಕಂಡು ತೃಪ್ತಿ ಪಡುತ್ತಾರೆ.

ಹೀಗೆ ಮನುಷ್ಯನ ಜೀವನದಲ್ಲಿ ಸೋಲೇ ಶಾಶ್ವತವಲ್ಲ, ಹಾಗಂತ ಗೆಲುವೂ ಶಾಶ್ವತವಲ್ಲ. ಸೋಲು-ಗೆಲುವು ಇದ್ದರೆ ಮಾತ್ರ ಜೀವನಕ್ಕೆ ಒಂದು ಮುಖ್ಯ ಅರ್ಥ ಎನ್ನಬಹುದು. ನಮಗಾಗಿ ಅಲ್ಲದಿದ್ದರೂ ನಮ್ಮ ಸೋಲನ್ನು ನೋಡಲು ಕಾಯುತ್ತಿರುವವರಿಗೆ ನಾವು ಗೆಲ್ಲಲೇಬೇಕು. ಜೀವನದಲ್ಲಿ ''ನಂಬಿಕೆಯೇ ಗೆಲುವು, ಹಿಂಜರಿಕೆಯೇ ಸೋಲು.'' ●

ಪುಕ್ಸಟ್ಟೇ ಜೀವನ ಆಗುತ್ತಾ ಪಾವನಾ?

ಪುಕ್ಸಟ್ಟೇ ಜೀವನ ಆಗುತ್ತಾ ಪಾವನಾ?
ಇರುವುದೊಂದೆ ಬಾನಿನಡಿಯಲಿ
ವಿರುದ್ಧದ ಹಾದಿಗಳ ಮೂಲೆ ಮೂಲೆಯಲಿ

ಮಾಯಾಲೋಕದ ಹಗಲಿರುಳುವಿಕೆಗಳು
ಇಂದು ನಾಳೆ ಬೆಸೆಯದ ದಿನಗಳು
ನಿಲುಕದ ದೆಸೆಯಲಿ ಸಾಗುವ ವಿಧಿಗಳು
ಹಂಗಿನಲಿ ಅಜರಾಮರವೆನಿಸುವ ಜನ್ಮಸಿದ್ಧ ಹಕ್ಕುಗಳು
ಪುಕ್ಸಟ್ಟೇ ಜೀವನ ಆಗುತ್ತಾ ಪಾವನಾ?
ಇರುವುದೊಂದೆ ಬಾನಿನಡಿಯಲಿ
ವಿರುದ್ಧದ ಹಾದಿಗಳ ಮೂಲೆ ಮೂಲೆಯಲಿ

ಕಾಯೋ ದೇವನ ಯೋಚನೆ ಕಾಣರಿಯದ ಕಲ್ಪನೆ
ಹುಟ್ಟುಸಾವಿನ ರೋದನೆ ನಾನಾ ತರಹದ ಯಾತನೆ
ಕಂಬಿಯೊಳು ಬಂಧಿಯಾದ ನಂಬಿ ಕೆಟ್ಟವರ ನಿಂದನೆ
ಭೂಮಿಯೊಳು ಬಂಧಿಪನಾದ ಜೀವ ನರರ ಬೋಧನೆ
ಪುಕ್ಸಟ್ಟೇ ಜೀವನ ಆಗುತ್ತಾ ಪಾವನಾ?
ಇರುವುದೊಂದೆ ಬಾನಿನಡಿಯಲಿ
ವಿರುದ್ಧದ ಹಾದಿಗಳ ಮೂಲೆ ಮೂಲೆಯಲಿ

ಅರಿವ ಪುಸ್ತಕದ ಭಾಷಣ ಅರಿತ ಮಸ್ತಕದ ಶೋಷಣೆ
ದಯಾ ದಾಕ್ಷಿಣ್ಯಗಳ ಮುಗ್ಧತೆ ಕಣ್ಣೆದುರಿನ ಕ್ರೌರ್ಯಗಳಿಗೆ ಸ್ತಬ್ಧತೆ
ನಮ್ಮವರ ಸಾವುಗಳ ಭಾವನೆ ನಮ್ಮ ಸಾವಿಗೆ ಮಾನಸಿಕ ತಯಾರಿಯ ಸೂಚನೆ
ಪುಕ್ಸಟ್ಟೇ ಜೀವನ ಆಗುತ್ತಾ ಪಾವನಾ?
ಇರುವುದೊಂದೆ ಬಾನಿನಡಿಯಲಿ
ವಿರುದ್ಧದ ಹಾದಿಗಳ ಮೂಲೆ ಮೂಲೆಯಲಿ.

✍ **ಶ್ರೀಧರ ಡಿ. ಹೆಗ್ಡೆ,** ತೃತೀಯ ಬಿ.ಕಾಂ.

ಕೋವಿಡ್-19: ಇನ್ನೂ ಮುಗಿಯದ ಮಹಾ ಸಾಂಕ್ರಾಮಿಕ

✍ **ರಮ್ಯಶ್ರೀ ಡಿ.,** ತೃತೀಯ ಬಿ.ಎ.

ನಮ್ಮ ಸಮಕಾಲೀನ ಜಗತ್ತಿನ ಸಾಧನೆಗಳನ್ನು ಹೇಳಿಕೊಳ್ಳುತ್ತಾ ನಾವೆಲ್ಲರೂ ಆಧುನಿಕ ಕಾಲದಲ್ಲಿ ಇದ್ದೇವೆ ಎಂದು ನಂಬಿಕೊಂಡು ನಮ್ಮ ಪಾಡಿಗೆ ಇದ್ದ ಕಾಲವದು. ಯಾರೂ ಊಹಿಸಿರಲಾಗದಂತಹ ಒಂದು ರೋಗವು ಸಾಮೂಹಿಕವಾಗಿ ಹರಡಿ ಜಾಗತಿಕ ಮಹಾ ಸಾಂಕ್ರಾಮಿಕವಾಗಿ ಮಹಾಮಾರಿಯಾಗಿ ಆಧುನಿಕ ಕಾಲದ ಸಾಧನೆಗಳನ್ನು ಒಮ್ಮೆಲೇ ಸ್ತಬ್ದಗೊಳಿಸಿದ ಕತೆ ಇದು. 2019ನೇ ಇಸವಿಯ ನವೆಂಬರ್-ಡಿಸೆಂಬರ್ ಅವಧಿಯಲ್ಲಿ ಚೀನಾದ ವುಹಾನಿನಲ್ಲಿ ಒಂದು ಹೊಸ ವೈರಾಣು ರೋಗವು ಪತ್ತೆಯಾಗಿ ದೊಡ್ಡ ಸಾಂಕ್ರಾಮಿಕ ರೋಗವಾಗಿ ಹರಡಲು ಆರಂಭವಾಯಿತು. ಆ ಹೊಸ ರೋಗಕ್ಕೆ ಕೋವಿಡ್-19 ಎಂಬ ಹೆಸರನ್ನು ನೀಡಲಾಯಿತು ಮತ್ತು ಅದಕ್ಕೆ ಕಾರಣವಾದ ವೈರಾಣುವನ್ನು ಕೊರೋನಾ ವೈರಸ್ ಪ್ರಭೇದವಾಗಿ ಸಾರ್ಸ್-ಕೋವ್-2 ಎಂದು ಹೆಸರಿಸಲಾಯಿತು. ಇದು ಚೀನಾದಲ್ಲಿ ಸಾಂಕ್ರಾಮಿಕವಾಗಿ ಹರಡುತ್ತಿದ್ದರೂ ಅಲ್ಲಿನ ಸರಕಾರ ಅದರ ವಾಸ್ತವ ಸ್ವರೂಪದ ಬಗ್ಗೆ ಮಾಹಿತಿಯನ್ನು ವಿಶ್ವಸಮುದಾಯದ ಜೊತೆಗೆ ಹಂಚಿಕೊಳ್ಳದೆ ಗೌಪ್ಯವಾಗಿಟ್ಟಿತ್ತು. ಆದರೆ ಚೀನಾದ ಜನನಿಬಿಡ ವಾಣಿಜ್ಯ ನಗರಗಳ ಜೊತೆಗೆ ಸಂಪರ್ಕದಲ್ಲಿದ್ದ ಇತರ ದೇಶಗಳಿಗೂ ಇದು ಹರಡುವುದು ಮತ್ತು ಮರಣಗಳಿಗೆ ಕಾರಣವಾಗುತ್ತಿರುವುದು ಕಂಡುಬರುತ್ತಿದ್ದಂತೆ ಇದನ್ನು 'ಜಾಗತಿಕ ಮಹಾ ಸಾಂಕ್ರಾಮಿಕ ' ಅಥವಾ 'ಮಹಾಮಾರಿ' ಅಥವಾ 'ಪ್ಯಾಂಡೆಮಿಕ್' ಎಂದು ಘೋಷಿಸಲಾಯಿತು. ವಿಶ್ವ ಆರೋಗ್ಯ ಸಂಸ್ಥೆಯೂ ಸೇರಿ ಜಾಗತಿಕ ಸಮುದಾಯಕ್ಕೆ ಇಂತಹದೊಂದು ಹೊಸ ರೋಗವನ್ನು ನಿಭಾಯಿಸುವ ಅರಿವು ಇರಲಿಲ್ಲದ ಕಾರಣ ಇಡೀ ವಿಶ್ವವೇ ಕಂಗಾಲಾಯಿತು. ಆಧುನಿಕ ಕಾಲದಲ್ಲಿ ಇಡೀ ಜಗತ್ತೇ ಒಂದು ಹಳ್ಳಿಯಂತೆ ಎಂಬ ಪರಿಕಲ್ಪನೆ ಇದೆ. ಏಕೆಂದರೆ ಎಲ್ಲಾ ದೇಶಗಳೂ ವೈಮಾನಿಕ ಮಾರ್ಗದಲ್ಲಿ ಹತ್ತಿರವಾಗಿವೆ. ಹಾಗೆಯೇ ಆ ಹತ್ತಿರದ ಸಂಪರ್ಕವೇ ಕೋವಿಡ್ ಪ್ರಸರಣದ ವೇಗವನ್ನು ಹೆಚ್ಚಿಸಿ ಇನ್ನೂರಕ್ಕೂ ಹೆಚ್ಚು ದೇಶಗಳಲ್ಲಿ ಈ ಸೋಂಕು ಕಂಡುಬಂದಿತು. ಹಾಗಾಗಿ 2021ನೇ ಇಸವಿಯ ಸೆಪ್ಟೆಂಬರ್-ಅಕ್ಟೋಬರ್ ತಿಂಗಳುಗಳಲ್ಲಿಯೂ ಕೋವಿಡ್-19 ಅಥವಾ ಕೊರೋನಾವನ್ನು ಮುಗಿಯದ ಮಹಾ ಸಾಂಕ್ರಾಮಿಕ ಎಂದೇ ಕರೆಯುತ್ತಿರುವುದನ್ನು ನಾವು ಗಮನಿಸಬಹುದಾಗಿದೆ. ಹಿಂದಿನ ಕಾಲದ ಮಹಾಮಾರಿಗಳಾಗಿದ್ದ ಪ್ಲೇಗ್, ಸ್ಪ್ಯಾನಿಷ್ ಫ್ಲ್ಯೂ ಮುಂತಾದುವು ದೇಶವನ್ನು ಶತಮಾನದ ಹಿಂದೆ ಕಾಡಿದ್ದಾಗ ನಮ್ಮಲ್ಲಿ ವೈದ್ಯಕೀಯ ವ್ಯವಸ್ಥೆಯ ಕೊರತೆ ಇದ್ದ ಕಾರಣ ಅಪಾರ ಸಾವುನೋವುಗಳು ಆಗಿದ್ದವು. ಆದರೆ ಈಗ ಎಲ್ಲಾ ಅತ್ಯಾಧುನಿಕ ಸೌಲಭ್ಯಗಳಿದ್ದರೂ ಔಷಧ, ಚಿಕಿತ್ಸೆ ಇಲ್ಲದ ಈ ಮಹಾ ಸಾಂಕ್ರಾಮಿಕವನ್ನು ನಿಯಂತ್ರಿಸಲು ವಿಶ್ವಸಮುದಾಯಕ್ಕೆ ಇಪ್ಪತ್ತು ತಿಂಗಳ ಬಳಿಕವೂ ಆಗುತ್ತಿಲ್ಲ ಎನ್ನುವುದು ಕಹಿ ವಾಸ್ತವವಾಗಿದೆ.

ಅಲೆಯ ಮೇಲೊಂದು ಅಲೆಯಂತೆ ಅಪ್ಪಳಿಸಿದ ಕೋವಿಡ್:

ಭಾರತದಲ್ಲಿ ಕೋವಿಡ್-19ರ ಮೊದಲ ಪ್ರಕರಣವು ದಕ್ಷಿಣ ಭಾರತದ ಕೇರಳ ರಾಜ್ಯದಲ್ಲಿ 2020ರ ಜನವರಿ 30ರಂದು ಪತ್ತೆಯಾಯಿತು. ಸೋಂಕು ಪತ್ತೆಯಾದ ವ್ಯಕ್ತಿಯು ಚೀನಾದ ವುಹಾನಿನಲ್ಲಿ ವಿದ್ಯಾರ್ಥಿಯಾಗಿದ್ದು ಭಾರತಕ್ಕೆ ಮರಳಿ ಬಂದವರಾಗಿದ್ದರು. ಆ ಮೊದಲ ಪ್ರಕರಣದಿಂದ 2021ರ ಸೆಪ್ಟೆಂಬರ್ 27ರ ತನಕದ ಒಟ್ಟು ಸೋಂಕಿತರ ಸಂಖ್ಯೆಯನ್ನು ಗಮನಿಸಿದರೆ ಭಾರತದಲ್ಲಿ ಒಟ್ಟು 3,36,78,786 ಮಂದಿಯಲ್ಲಿ ಸೋಂಕು ವರದಿಯಾಗಿತ್ತು. ಈ ಲೆಕ್ಕಾಚಾರದಲ್ಲಿ ಭಾರತವು ಜಗತ್ತಿನ ಕೋವಿಡ್ ಪೀಡಿತ ದೇಶಗಳ ಸಾಲಿನಲ್ಲಿ ಎರಡನೇ ಸ್ಥಾನದಲ್ಲಿತ್ತು. ಆ ತನಕದ ಕೋವಿಡ್ ಮರಣಗಳ ಸಂಖ್ಯೆಯು ಭಾರತದಲ್ಲಿ 4,53,712 ಎಂದು ವರದಿಯಾಗಿದ್ದ ಕಾರಣ ಭಾರತವು ಜಗತ್ತಿನಲ್ಲಿಯೇ ಮೂರನೇ ಅತಿ ಹೆಚ್ಚು ಕೋವಿಡ್ ಮರಣಗಳನ್ನು ಕಂಡಿದ್ದ ದೇಶ ಎನ್ನುವಂತಾಯಿತು. 2020 ಮಾರ್ಚ್ 8ರಂದು ಬೆಂಗಳೂರಿನಲ್ಲಿ ಕರ್ನಾಟಕದ ಪ್ರಥಮ ಕೋವಿಡ್ ಪ್ರಕರಣವು ವರದಿಯಾಗಿತ್ತು. ಅದೇ ವರ್ಷದ ಮಾರ್ಚ್ 12ರಂದು ಕಲಬುರ್ಗಿಯಲ್ಲಿ ವೃದ್ಧರೊಬ್ಬರು ಕೋವಿಡ್ ಕಾರಣದಿಂದ ಮೃತರಾದದ್ದು ವರದಿಯಾಯಿತು. ಇದು ದೇಶದಲ್ಲಿ ಕೋವಿಡ್-19ನಿಂದ ಮರಣ ಸಂಭವಿಸಿದ ಪ್ರಥಮ ಪ್ರಕರಣವಾಗಿ ದಾಖಲಾಯಿತು. ಮಹಾಮಾರಿಯ ಆತಂಕದಲ್ಲಿ ಮಾರ್ಚ್ 13ರ ಬಳಿಕ ಶಾಲಾ ಕಾಲೇಜುಗಳಲ್ಲಿ ಭೌತಿಕ ತರಗತಿಗಳು ಸ್ಥಗಿತವಾದವು. ವಿದ್ಯಾರ್ಥಿಗಳಿಗೆ ಮನೆಯೇ ಪಾಠಶಾಲೆಯಾಯಿತು. 360 ಕೋವಿಡ್ ಪ್ರಕರಣಗಳು ಇದ್ದಾಗಲೇ ರವಿವಾರ, ಮಾರ್ಚ್ 13ರಂದು ಜನತಾ ಕರ್ಫ್ಯೂ ನಡೆಯಿತು. ಆ ಮೂಲಕ ಕೋವಿಡ್ ಮಹಾ ಸಾಂಕ್ರಾಮಿಕವು ಹರಡದಂತೆ ಮುಂಜಾಗ್ರತಾ ಕ್ರಮಗಳನ್ನು ಅನುಸರಿಸುವ ಬಗ್ಗೆ ಜನರಲ್ಲಿ ಜಾಗೃತಿಯನ್ನು ಮೂಡಿಸಲಾಯಿತು. ಮಾರ್ಚ್ 23ರ ಬಳಿಕ ಕರ್ನಾಟಕ ಲಾಕ್‌ಡೌನ್ ಘೋಷಿಸಿತು. ಮಾರ್ಚ್ 25ರಿಂದ ದೇಶಾದ್ಯಂತ ಲಾಕ್‌ಡೌನ್ ಆರಂಭವಾಯಿತು. ಒಂದು ರೀತಿಯಲ್ಲಿ ಒಮ್ಮೆಗೇ ಎಲ್ಲವೂ ಸ್ತಬ್ಧವಾದ ಅನುಭವವಾಯಿತು. ಓದು, ಅಧ್ಯಯನ,

ಕಲಿಕೆ, ಕೆಲಸ ಮತ್ತಿತರ ಚಟುವಟಿಕೆಗಳನ್ನು ಮನೆಯಿಂದಲೇ ಮೊಬೈಲ್, ಕಂಪ್ಯೂಟರ್, ಅಂತರ್ಜಾಲದ ಮೂಲಕ ನಡೆಸುವ ಅನಿವಾರ್ಯತೆ ಎದುರಾಯಿತು. ಮಾರ್ಚ್ 23ರಿಂದ 25ರ ನಡುವೆ ಉಡುಪಿಯಲ್ಲಿ ಮೊದಲ ಕೋವಿಡ್ ಕೇಸ್ ಪತ್ತೆಯಾಯಿತು. ಲಾಕ್ ಡೌನ್ ಜಾರಿಯಾಗುತ್ತಲೇ ಹಂತ ಹಂತವಾಗಿ ವಿಸ್ತರಣೆಯಾಗುತ್ತಲೇ ಹೋಯಿತು. ಇದರಿಂದ ಬೇರೆ ಬೇರೆ ಊರುಗಳಲ್ಲಿ ಉದ್ಯೋಗ ನಿರತರಾಗಿದ್ದ ವಲಸೆ ಕಾರ್ಮಿಕರು ಸಂಕಷ್ಟಗಳನ್ನು ಎದುರಿಸಿದರು. ಸಾರಿಗೆ ವ್ಯವಸ್ಥೆಯು ಸ್ತಬ್ಧವಾದ ಕಾರಣ ಹಲವರಿಗೆ ಕಾಲ್ನಡಿಗೆಯೇ ಗತಿಯಾಯಿತು. ಅತ್ತ ಊರುಗಳಲ್ಲಿಯೂ ಹೊರಗಿನಿಂದ ಬಂದವರನ್ನು ಸೋಂಕು ಹರಡಿಯಾರು ಎಂಬ ಭಯದಿಂದ ಸಂಶಯದಿಂದ ನೋಡುತ್ತಿದ್ದ ಬಗ್ಗೆ ವರದಿಯಾಗುತ್ತಿದ್ದವು. ಒಟ್ಟಿನಲ್ಲಿ ಎಲ್ಲಾ ಕಡೆಗಳಲ್ಲಿಯೂ ಜನರಿಗೆ ಮತ್ತು ಸರಕಾರಕ್ಕೆ ಕಣ್ಣಿಗೆ ಬಟ್ಟೆ ಕಟ್ಟಿ ಕತ್ತಲಲ್ಲಿ ಬಿಟ್ಟಂತಹ ಪರಿಸ್ಥಿತಿ ಎದುರಾಗಿತ್ತು. ಎಲ್ಲಾ ಕಡೆಗಳಲ್ಲಿಯೂ ಆತಂಕವೇ ಜಾಸ್ತಿಯಾಗಿತ್ತು. ಭಯ ಬೇಡ ಎಚ್ಚರವಿರಲಿ ಎಂಬ ಘೋಷಣೆಗಳು ಹೆಚ್ಚೇನು ಪರಿಣಾಮವನ್ನು ಬೀರುವಂತಾಗಲಿಲ್ಲ. ಮೊದಲ ಲಾಕ್‌ಡೌನ್‌ನಿಂದ ಆರಂಭವಾಗಿ ಲಾಕ್‌ಡೌನ್‌ಗಳು ಅಂತ್ಯವಾದದ್ದು 2020ರ ಜೂನ್ 1ರ ಬಳಿಕ. ಆದರೂ ರಾತ್ರಿ ಕರ್ಫ್ಯೂ, ವಾರಾಂತ್ಯ ಕರ್ಫ್ಯೂ ಎಲ್ಲಾ ಮತ್ತೆಯೂ ಮುಂದುವರೆದಿದ್ದವು. 2020ರಲ್ಲಿ ಸುಮಾರು 40 ದಿನಗಳ ಸಂಪೂರ್ಣ ಲಾಕ್‌ಡೌನ್ ಆಗಿದ್ದದ್ದು ದಾಖಲಾಗಿದೆ. ಸುಮಾರು 50ಕ್ಕೂ ಅಧಿಕ ದಿನಗಳ ಕಾಲ ಸಾಮಾನ್ಯ ಸಾರ್ವಜನಿಕ ಸಾರಿಗೆಯು ಇರಲಿಲ್ಲ ಎನ್ನುವುದು ಗಮನಾರ್ಹವಾಗಿದೆ. ಈ ಅವಧಿಯಲ್ಲಿ ಮಾಸ್ಕ್, ಪಿ.ಪಿ.ಇ. ಕಿಟ್, ಆಹಾರದ ಕಿಟ್ ವಿತರಣೆ, ಆರ್ಟಿಪಿಸಿಆರ್ ಟೆಸ್ಟ್, ಸ್ಯಾನಿಟೈಸರ್, ಪಾಸಿಟಿವ್, ಕ್ವಾರೆಂಟೈನ್ ಮುಂತಾದ ಪದಗಳು ಹೆಚ್ಚು ಬಳಕೆಯಲ್ಲಿದ್ದವು.

ಲಾಕ್‌ಡೌನ್ ಪರಿಣಾಮ ಎಂಬಂತೆ 2020ರ ಜೂನ್ ಹತ್ತರ ಅಂಕಿಅಂಶಗಳ ಅನುಸಾರ ಮೊದಲ ಬಾರಿ ಕೋವಿಡ್‌ನಿಂದ ಗುಣವಾದವರ ಸಂಖ್ಯೆಯು ಸಕ್ರಿಯ ಪ್ರಕರಣಗಳನ್ನು ಮೀರಿಸಿ ಸೋಂಕಿನ ಪ್ರಸರಣವು ನಿಯಂತ್ರಣಕ್ಕೆ ಬರುತ್ತಿರುವ ಸೂಚನೆ ಸಿಕ್ಕಿತ್ತು. ಆದರೆ ಅದೇ ಸೆಪ್ಟೆಂಬರ್ ಮಧ್ಯಭಾಗದಲ್ಲಿ ಕೋವಿಡ್-19ರ ಮೊದಲ ಅಲೆಯು ಉತ್ತುಂಗಕ್ಕೇರಿ ದಿನಕ್ಕೆ 90,000ಕ್ಕೂ ಹೆಚ್ಚು ಪ್ರಕರಣಗಳು ವರದಿಯಾಗತೊಡಗಿದವು. ನವೆಂಬರ್ 17ರ ಬಳಿಕ ಅಂತಿಮ ವರ್ಷದ ಕಾಲೇಜ್ ವಿದ್ಯಾರ್ಥಿಗಳಿಗೆ ಭೌತಿಕ ತರಗತಿಗಳಿಗೆ ಬರಬಹುದಾದ ಅವಕಾಶ ದೊರಕಿತ್ತು. ವಿದ್ಯಾರ್ಥಿಗಳು ಕೋವಿಡ್ ನೆಗೆಟಿವ್ ವರದಿಯ ಜೊತೆಗೆ ಪಾಲಕರ ಒಪ್ಪಿಗೆ ಪತ್ರವನ್ನು ಸಲ್ಲಿಸಿ ತರಗತಿಗಳಿಗೆ ಹೋಗಬಹುದಾಗಿತ್ತು. ಆದರೂ ಆನ್‌ಲೈನ್ ತರಗತಿಗಳೂ ಜಾರಿಯಲ್ಲಿದ್ದವು. ಸೋಂಕು 2021 ಜನವರಿಯಲ್ಲಿ ದಿನಕ್ಕೆ 15,000ಕ್ಕಿಂತಲೂ ಕಡಿಮೆಯಾಗುತ್ತಾ ನಿಧಾನಕ್ಕೆ ನಿಯಂತ್ರಣಕ್ಕೆ ಬಂದಂತೆ ಕಂಡರೂ ವೈರಸ್ ರೂಪಾಂತರಗೊಂಡು ಮತ್ತೂ ತೀವ್ರವಾಗಿ 2021ರ ಮಾರ್ಚ್‌ನಲ್ಲಿ ಎರಡನೇ ಅಲೆಯನ್ನು ಎಬ್ಬಿಸಿತ್ತು. ಆ ರೂಪಾಂತರಿ ವೈರಾಣುವನ್ನು ಡೆಲ್ಟಾ ರೂಪಾಂತರಿ ಎಂದು ಗುರುತಿಸಲಾಯಿತು. ಈ ಎರಡನೇ ಅಲೆಯು ಮೊದಲ ಅಲೆಗಿಂತಲೂ ಹೆಚ್ಚು ತೀವ್ರ ಹಾಗೂ ಭಯಾನಕವಾಗತೊಡಗಿತ್ತು. ಲಸಿಕೆಗಳ ಅಭಾವ, ಆಸ್ಪತ್ರೆ ಬೆಡ್‌ಗಳ ಅಭಾವ, ಆಮ್ಲಜನಕ ಸಿಲಿಂಡರ್‌ಗಳ ಹಾಗೂ ಜೀವರಕ್ಷಕ ಔಷಧಿಗಳ ಕೃತಕ ಅಭಾವ ಮುಂತಾದ ಪಿಡುಗುಗಳು ಅದನ್ನು ಅತ್ಯಂತ ಭಯಾನಕ ಸಮಯವನ್ನಾಗಿಸಿದ್ದವು. ಆಸ್ಪತ್ರೆಯಲ್ಲಿನ ಚಿಕಿತ್ಸೆ ಸಾಮಾನ್ಯರ ಕೈಗೆಟುಕದಷ್ಟು ದುಬಾರಿ ಆಗಿತ್ತು. ಏಪ್ರಿಲ್ 30ರಂದು ಭಾರತದಲ್ಲಿ ಒಂದೇ ದಿನದಲ್ಲಿ 4,08,323 ಕೇಸುಗಳು ಪತ್ತೆಯಾದವು. ಆ ದಿನವೇ ಸುಮಾರು 3,464 ಕೋವಿಡ್ ಮರಣಗಳು ವರದಿಯಾಗಿದ್ದವು. ಆ ದಿನ ಕರ್ನಾಟಕದಲ್ಲಿ 48,000 ಕೇಸುಗಳು ಪತ್ತೆಯಾಗಿದ್ದವು. ತಿಂಗಳಾಂತ್ಯಕ್ಕೆ ಜಗತ್ತಿನಲ್ಲಿಯೇ ಹೆಚ್ಚು ಸಕ್ರಿಯ ಪ್ರಕರಣಗಳು ಭಾರತದಲ್ಲಿದ್ದವು. 2021ರ ಮೇ 18ಕ್ಕೆ ಭಾರತದಲ್ಲಿ ಮೊದಲ ಬಾರಿಗೆ ಒಂದೇ ದಿನದಲ್ಲಿ 4,529 ಕೋವಿಡ್ ಮರಣಗಳು ಸಂಭವಿಸಿದ್ದವು. ಮೇ ತಿಂಗಳಲ್ಲಿ ಅಲ್ಲಲ್ಲಿ ಮ್ಯೂಕರ್ ಮೈಕಾಸಿಸ್ ಎಂಬ ಹೆಸರಿನ ಕಪ್ಪು ಶಿಲೀಂಧ್ರದ ಸೋಂಕು ಕೋವಿಡ್ ರೋಗಿಗಳಲ್ಲಿ ಅವಕಾಶವಾದೀ ಸೋಂಕಾಗಿ ಕಾಣಿಸಿಕೊಳ್ಳುವುದು ಹೆಚ್ಚಾಗುತ್ತಾ ಹೋಯಿತು. ಎರಡನೇ ಅಲೆಯಲ್ಲಿ ದೇಶದ ರಾಜಧಾನಿ, ರಾಜ್ಯದ ರಾಜಧಾನಿ ಎಲ್ಲಾ ತೀವ್ರ ಸಂಕಷ್ಟವನ್ನು ಎದುರಿಸಿದ್ದವು. ಕೊರೋನಾದ ಎರಡನೇ ಅಲೆಯು ಬಹಳ ದುಃಖದಾಯಕವಾಗಿತ್ತು. ಇದು ಎಲ್ಲರಲ್ಲಿಯೂ ಭಯವನ್ನು, ಅಸಹಾಯಕತೆಯನ್ನು ಹಾಗೂ ವಿಷಾದವನ್ನು ಮೂಡಿಸಿತ್ತು. ಹಲವಾರು ಜನರು ತಮ್ಮ ಪ್ರೀತಿಪಾತ್ರರನ್ನು ಕಳೆದುಕೊಂಡದ್ದು, ಉದ್ಯೋಗವನ್ನು ಕಳೆದುಕೊಂಡದ್ದು, ನಷ್ಟವನ್ನು ಅನುಭವಿಸಿದ್ದು ಎಲ್ಲವೂ ಕೋವಿಡ್ ಕತೆಯ ದುಃಖದ ಅಧ್ಯಾಯಗಳಾಗಿವೆ. ಕರ್ನಾಟಕವೂ ಸೇರಿ ಬಹುತೇಕ ಎಲ್ಲಾ ರಾಜ್ಯಗಳು 2021 ಏಪ್ರಿಲ್ 27ರಿಂದ ಜೂನ್ 14ರ ತನಕ ಲಾಕ್‌ಡೌನ್ ಮಾಡಿದ್ದವು. 2021ರಲ್ಲಿ 48 ದಿನಗಳ ಸಂಪೂರ್ಣ ಲಾಕ್‌ಡೌನ್ ಎಲ್ಲರ ಅನುಭವಕ್ಕೆ ಬಂದಿತ್ತು. ಈ ನಡುವೆ ಪರೀಕ್ಷೆಗಳಿಲ್ಲದೆಯೇ ಪಾಸಾದ ಅನುಭವವೂ ವಿದ್ಯಾರ್ಥಿಗಳಿಗೆ ಸಿಕ್ಕಿತ್ತು.

ಲಸಿಕೆಯ ವರ:

ಭಾರತವು ಲಸಿಕೆಯ ಸಂಶೋಧನೆಯಲ್ಲಿ ಹಾಗೂ ಲಸಿಕೆಗಳ ತಯಾರಿಕೆಯಲ್ಲಿ ವಿಶಿಷ್ಟವಾದ ಸಾಧನೆಯನ್ನು ಮಾಡಿತ್ತು. ಭಾರತದಲ್ಲೇ ಅಭಿವೃದ್ಧಿಪಡಿಸಲಾದ ಕೋವ್ಯಾಕ್ಸಿನ್ ಹಾಗೂ ಭಾರತದಲ್ಲಿಯೇ ತಯಾರಾದ ಕೋವಿಶೀಲ್ಡ್ ಲಸಿಕೆಗಳನ್ನು ಉಚಿತವಾಗಿ ನೀಡುವ ಕಾರ್ಯಕ್ರಮವನ್ನು ಒಂದು ದೊಡ್ಡ ಅಭಿಯಾನವಾಗಿ 16 ಜನವರಿ 2021ರಿಂದ ಆರಂಭಿಸಿತು. ಲಸಿಕೆಗಳ ಪೂರೈಕೆಯಲ್ಲಿನ ಅಭಾವವನ್ನು ಮತ್ತು ಅವ್ಯವಸ್ಥೆಗಳ ಸವಾಲುಗಳನ್ನು

ಎದುರಿಸುತ್ತಲೇ ಹೆಚ್ಚಿನ ಜನರನ್ನು ತಲುಪಿ ವಿಶ್ವದ ಯಶಸ್ವಿ ಲಸಿಕಾ ಅಭಿಯಾನ ಎಂದು ಗುರುತಿಸಲ್ಪಟ್ಟಿತು. ಎರಡನೇ ಅಲೆಯ ಬಳಿಕ ಕಾಲೇಜುಗಳು 26 ಜೂನ್ ಬಳಿಕ ಆರಂಭವಾದವು. ಅದಕ್ಕೂ ಮೊದಲಿಗೆ ಕಾಲೇಜುಗಳಲ್ಲಿ ವಿದ್ಯಾರ್ಥಿಗಳಿಗಾಗಿಯೇ ಉಚಿತ ಲಸಿಕಾ ಅಭಿಯಾನಗಳು ಯಶಸ್ವಿಯಾಗಿ ನಡೆದವು. ಎರಡನೇ ಡೋಸ್ ಕೊಡಬೇಕಾದ ಅವಧಿಯಲ್ಲಿ ಎರಡನೇ ಡೋಸನ್ನು ಕಾಲೇಜಿನಲ್ಲಿಯೇ ನೀಡುವ ವ್ಯವಸ್ಥೆಯನ್ನು ಮಾಡಿದ್ದರು.

ನಮ್ಮ ಕಾಲೇಜಿನಲ್ಲಿ ಅರಿವು:

ಕೋವಿಡ್ ಭಾರತದಲ್ಲಿ ಕಂಡು ಬಂದ ಬಗ್ಗೆ ವರದಿಯಾದ ಕೂಡಲೇ ನಮ್ಮ ಕಾಲೇಜಿನಲ್ಲಿ ಪ್ರಾಂಶುಪಾಲರ ನೇತೃತ್ವದಲ್ಲಿ ಆ ಬಗ್ಗೆ ಅರಿವನ್ನು ಮೂಡಿಸಲಾಯಿತು. ಕಾಲೇಜಿನ ಗಾಂಧಿ ಅಧ್ಯಯನ ಕೇಂದ್ರದ ಮಾರ್ಗದರ್ಶನದಲ್ಲಿ ಕೋವಿಡ್-19 ಬಗ್ಗೆ ವಿಸ್ತಾರವಾದ ಅಧ್ಯಯನವನ್ನು MGM Social Observatory Initiative ಮೂಲಕ ಮಾಡಲಾಯಿತು. ಅದರ ಭಾಗವಾಗಿ ವಿದ್ಯಾರ್ಥಿಗಳು ಕೋವಿಡ್ ಮಹಾ ಸಾಂಕ್ರಾಮಿಕದ ಬಗ್ಗೆ ಮಾಹಿತಿ ಸಂಗ್ರಹ ಹಾಗೂ ಅಂಕಿಅಂಶಗಳ ವಿಶ್ಲೇಷಣೆ ನಡೆಸಿ ಈ ಶತಮಾನದ ಅತೀ ದೀರ್ಘ ಸಾಂಕ್ರಾಮಿಕವು ಜಾಗತಿಕವಾಗಿ, ದೇಶ ಮಟ್ಟದಲ್ಲಿ, ರಾಜ್ಯದಲ್ಲಿ, ನಮ್ಮ ಜಿಲ್ಲೆಯಲ್ಲಿ ಉಂಟುಮಾಡಿದ ಬಹುವಿಧಗಳ ತೊಂದರೆಗಳನ್ನು ಗುರುತಿಸಲಾಯಿತು. ಜೊತೆಗೆ ಸುಸ್ಥಿರ ಅಭಿವೃದ್ಧಿ ಮುನ್ನೋಟಗಳು, ಗಾಂಧೀಜಿಯ ಸರ್ವೋದಯದ ಸಮಗ್ರ ಪರಿಕಲ್ಪನೆ ಹಾಗೂ ಆತ್ಮನಿರ್ಭರತೆಯ ಚಿಂತನೆಗಳ ಮೂಲಕ ಅಂತಹ ಸಂದಿಗ್ಧ ಪರಿಸ್ಥಿತಿಯನ್ನೂ ಸುಧಾರಿಸಲು ಸಾಧ್ಯವಿದೆ ಎನ್ನುವುದನ್ನು ಮನಗಾಣಲಾಯಿತು. ಮಹಾ ಸಾಂಕ್ರಾಮಿಕಗಳ ಬಗ್ಗೆ ಸಮಾಜ ವಿಜ್ಞಾನದ ಹಿನ್ನೆಲೆಯಲ್ಲಿ ಬಹು ಆಯಾಮಗಳಲ್ಲಿ ಅಧ್ಯಯನವನ್ನು ಮಾಡುವ ಕ್ರಮದ ಬಗ್ಗೆ ಗಾಂಧಿ ಅಧ್ಯಯನ ಕೇಂದ್ರದ ಪ್ರಾಧ್ಯಾಪಕರಾದ ವಿನೀತ್ ರಾವ್ ತಿಳಿಸಿಕೊಟ್ಟಿದ್ದರು. ಆ ಹಿನ್ನೆಲೆಯಲ್ಲಿ ರೋಗ ಪ್ರಸರಣವನ್ನು ತಡೆಯಲು ಬೇಕಾದ ಜಾಗೃತಿಯನ್ನು ಮೂಡಿಸಲಾಯಿತು. ಕಾಲೇಜಿನ ವಿವಿಧ ವಿಭಾಗಗಳು, ಎನ್.ಎಸ್.ಎಸ್., ಎನ್.ಸಿ.ಸಿ., ರೋವರ್ಸ್, ರೇಂಜರ್ಸ್ ಮೊದಲಾದ ಘಟಕಗಳು ಮತ್ತು ಫ್ಯಾಶನ್ ಡಿಸೈನಿಂಗ್ ಯೂನಿಟ್ ಕೋವಿಡ್ ಬಗ್ಗೆ ಜಾಗೃತಿ ಮೂಡಿಸುವ ಕಾರ್ಯದಲ್ಲಿ ತೊಡಗಿದ್ದವು ಮತ್ತು ವಿದ್ಯಾರ್ಥಿಗಳು ಮಾಸ್ಕ್ ತಯಾರಿಸಿ ವಿತರಿಸಿದ್ದರು. ಎಸ್.ಡಬ್ಲ್ಯೂ.ಸಿ.ಯ ವಿದ್ಯಾರ್ಥಿ ಪದಾಧಿಕಾರಿಗಳು ಹಾಗೂ ಇತರ ಅನೇಕ ವಿದ್ಯಾರ್ಥಿಗಳು ಲಾಕ್‌ಡೌನ್ ಸಮಯದಲ್ಲಿ ಊರಿನ ಲಸಿಕಾ ಕೇಂದ್ರಗಳಲ್ಲಿ ಸ್ವಯಂಸೇವಕರಾಗಿ ಕೆಲಸವನ್ನು ಮಾಡಿದ್ದೂ ಗಮನಾರ್ಹ ಸಂಗತಿಯಾಗಿದೆ.

ಕೊನೆಯದಾಗಿ ಹೇಳುವುದಾದರೆ ಕೋವಿಡ್ ಕಾರಣದಿಂದಾಗಿ ನಮ್ಮ ವಿದ್ಯಾರ್ಥಿ ಜೀವನದ ಅತ್ಯಂತ ದೀರ್ಘವಾದ ಶೈಕ್ಷಣಿಕ ವರ್ಷಗಳಿಗೆ ಸಾಕ್ಷಿಯಾದೆವು. ನಮ್ಮ ಪದವಿಯ ಸುದೀರ್ಘವಾದ ಫೈನಲ್ ವರ್ಷದ ಅಂತಿಮ ಸೆಮಿಸ್ಟರ್ ಪರೀಕ್ಷೆಗಳನ್ನು ಮಾಸ್ಕ್ ಧರಿಸಿಕೊಂಡು ಬರೆದದ್ದಾಗಿದೆ. ಆ ಪರೀಕ್ಷೆಗಳು ಅಕ್ಟೋಬರ್ ತಿಂಗಳಾಂತ್ಯದೊಳಗೆ ಮುಗಿಯಲಿದ್ದು, ಅಂತೂ ಇಂತೂ ನಮ್ಮ ಪದವಿಯ ಫೈನಲ್ ಇಯರ್ ಕೊನೆಗೂ ಮುಗಿಯಿತು ಎನ್ನುವಂತಾಗಿದೆ. ಆದರೆ ದೇಶದಲ್ಲಿ ಕೋವಿಡ್-19 ಇನ್ನೂ ಮುಗಿಯದ ಕತೆಯಾಗಿ ಕಾಡುತ್ತಾ ಇದೆ ಎನ್ನುವುದೇ ಬೇಸರದ ಸಂಗತಿಯಾಗಿದೆ. ಒಟ್ಟಿನಲ್ಲಿ ಈ ಮಹಾ ಸಾಂಕ್ರಾಮಿಕವು ಇನ್ನೂ ಮುಗಿಯದ ಕಾರಣ ನಾವು ಕೋವಿಡ್ ತಡೆಯಲು ಬೇಕಾದ ಶಿಷ್ಟಾಚಾರಗಳನ್ನು ಪಾಲಿಸುವುದು ಅಗತ್ಯವಾಗಿದೆ. ಕೈಗಳನ್ನು ಸ್ವಚ್ಛವಾಗಿರಿಸುವುದು, ಮಾಸ್ಕ್ ಧರಿಸುವುದು ಹಾಗೂ ದೈಹಿಕ ಅಂತರವನ್ನು ಪಾಲಿಸುವುದನ್ನು ಮೂರನೇ ಅಲೆ ಬರದಂತೆ ತಡೆಯಲು ಎಂದಿಗೂ ಮರೆಯಬಾರದು. ●

ನೆರೆ ಕೆನ್ನೆಗೆ, ತೆರೆ ಗಲ್ಲಕೆ, ಶರೀರ ಗೂಡ ಹೋಗದ ಮುನ್ನ, ಹಲ್ಲು ಹೋಗಿ ಬೆನ್ನು ಬಾಗಿ ಅನ್ಯರಿಗೆ ಹಂಗಾಗದ ಮುನ್ನ, ಕಾಲಮೇಲೆ ಕೈಯೂರಿ ಕೋಲು ಹಿಡಿಯದ ಮುನ್ನ, ಮುಪ್ಪಿಂದೊಪ್ಪವಳಿಯದ ಮುನ್ನ, ಮೃತ್ಯು ಮುಟ್ಟದ ಮುನ್ನ ಪೂಜಿಸು ಕೂಡಲ ಸಂಗಮ ದೇವನ – **ಶ್ರೀ ಬಸವೇಶ್ವರರು**

* * *

ಜೀವ ಧಾರಣೆಗೆ ಆಹಾರ ಅವಶ್ಯವಿದ್ದಂತೆ ಬಾಳನ್ನು ಬೆಳಗಿಸಲು ಪುಸ್ತಕ ಒಂದು ದಿವ್ಯ ಜ್ಯೋತಿ – **ಡಿ.ವಿ.ಜಿ.**

ಪುಟ್ಟು

✍ **ವಿಜೇತಾ ಹೆಗಡೆ,** ಪ್ರಥಮ ಬಿ.ಎ.

ಟಪ್... ಟಪ್... ಟಪ್... ಮಳೆ ಹನಿಗಳು ಇನ್ನೂ ಬೀಳುತ್ತಲೇ ಇದ್ದವು. ಪುಟ್ಟುವಿನ ಮನದಲ್ಲಿ ಮೂಡಿದ್ದ ನೂರಾರು ಪ್ರಶ್ನೆಗೆ ಉತ್ತರ ಹೊಳೆಯುತ್ತಲೇ ಇರಲಿಲ್ಲ. ಕೈಯಲ್ಲಿ ಹಿಡಿದಿದ್ದ ಬಿಸ್ಕತ್ತು ಗರಿಮುರಿ ಇದ್ದದ್ದು ಮೆತ್ತಗಾಗುತ್ತ ಕೈಗೆಲ್ಲ ಅಂಟಿಕೊಂಡಿತ್ತು. ಮತ್ತೆ ಆಚೆ ಈಚೆ ತನ್ನನ್ನು ಯಾರಾದರೂ ನೋಡುತ್ತಾರೋ ಎಂದು ಗುಂಡನೆಯ ಕಣ್ಣನ್ನು ಹೊರಳಿಸುತ್ತ ಕೈನಲ್ಲಿದ್ದ ಬಿಸ್ಕತ್ತನ್ನು ಎದೆಗವಚಿಕೊಂಡು ತೋಟದತ್ತ ಓಡಿದಳು.

ಅಲ್ಲೇ ದೂರದಲ್ಲಿ ಅಂಗಳದ ಬೇಲಿಯ ಗೂಟಕ್ಕೆ ಡೇರೆ ಹೂ ಗಿಡ ಕಟ್ಟುತ್ತಿದ್ದ ಮೇಲಿನ ಮನೆಯ ವೆಂಕಜ್ಜಿಗೆ ಇವಳೆಲ್ಲಿಗೆ ಓಡುತ್ತಾಳೆ, ಇನ್ನೂ ಶಾಲೆ ಬಿಟ್ಟು ಹದಿನೈದು ನಿಮಿಷ ಆಗಿಲ್ಲ. ಮನೆಗೆ ಬಂದು ಪಾಟಿಚೀಲ ಇಟ್ಟು ಆರಾಮಾಗಿ ಒಲೆ ಮುಂದೆ ಕೂತು ಬೆಳಗಿನ ದೋಸೆ ತಿನ್ನುತ್ತಿದ್ದ ಇವಳೇಕೆ ಓಡಿದಳು ಎಂದು ಅಜ್ಜಿ ಪ್ರಶ್ನೆ ಕೇಳುವುದರೊಳಗಾಗಿಯೇ ಆಕೆ ನಾಲ್ಕು ಮಾರು ದೂರ ಓಡಿದ್ದಾಗಿತ್ತು. ಪುಟ್ಟು ಕೊಟ್ಟಿಗೆಮನೆ ತಲುಪುವ ಹೊತ್ತಿಗೆ ಮಳೆ ಧೋ ಎನ್ನಲಾರಂಭಿಸಿತ್ತು. ಕುಯ್... ಕುಯ್... ಸದ್ದು ನಿಧಾನಕ್ಕೆ ಕೊಟ್ಟಿಗೆಯ ಒಳಗಿಂದ ಕ್ಷೀಣವಾಗಿ ಕೇಳುತ್ತಿತ್ತು. ಸಣ್ಣದಾದ ನಾಯಿಮರಿ ಗಡ ಗಡ ನಡುಗುತ್ತ... ಮೇಲೇಳಲಾರದೆ ಪುಟ್ಟುವಿನ ಬರುವಿಕೆಗೆ ಕಾಯುತ್ತಿರುವಂತೆ ಅವಳು ಬಂದತ್ತಲೇ ಅಳುಗಣ್ಣಿನಿಂದ ನೋಡುತ್ತಿತ್ತು. ಅದರ ಹತ್ತಿರ ಹೋದ ಪುಟ್ಟು ತನ್ನ ಕೈನಲ್ಲಿದ್ದ ಬಿಸ್ಕತ್ತು ಹಾಕಿ ಪ್ರೀತಿಯಿಂದ ಮೈಮುಟ್ಟಿ 'ನಿಂಗೆ ಏನೂ ಆಗಲ್ಲ ನಾನೀದೀನಿ ಆರಾಮಾಗಿ ತಿಂದು ಮಲಗು' ಎಂದು ಮನೆಗೆ ವಾಪಾಸ್ಸಾದಳು. ಹೀಗೆ ನಾಲ್ಕಾರು ದಿನ ಕಳೆದವು. ನಾಯಿ ಮರಿ ಆರಾಮಾಗಿ ಅಲ್ಲಲ್ಲಿ ಓಡಾಡಲಾರಂಭಿಸಿತ್ತು. ಅದನ್ನು ನೋಡಿ ಪುಟ್ಟುಗೆ ಸಂತೋಷವಾಗಿತ್ತು. ಶಾಲೆಯ ಅಂಗಳದಲ್ಲಿ ಕಾಲಿಗೆ ಪೆಟ್ಟಾಗಿ ಮೇಲೇಳಲಾಗದೆ ಮಲಗಿದ್ದ ನಾಯಿಮರಿಯನ್ನು ಎತ್ತಿಕೊಂಡು ಬಂದಿದ್ದಳು. ನಾಯಿಮರಿ ಕಾಲಿಗೆ ಗಾಯವಾದಲ್ಲಿ ತನ್ನ ಯೂನಿಫಾರ್ಮ್ ಟೈಯನ್ನೇ ಅದರ ಕಾಲಿಗೆ ಕಟ್ಟಿ ರಕ್ತ ಸೋರುವುದನ್ನು ನಿಲ್ಲಿಸಿದ್ದಳು. ನಾಯಿ ಮರಿಯನ್ನು ಮನೆಗೆ ತಂದರೆ ಬೈಯ್ಯುತ್ತಾರೆಂದು ಅದನ್ನು ಕೊಟ್ಟಿಗೆಯಲ್ಲಿಟ್ಟು ಆರೈಕೆ ಮಾಡಿದ್ದಳು.

ಅದೀಗ ಗುಣಮುಖವಾಗಿತ್ತು. ಆದರೆ ಪುಟ್ಟು ದಿನವೂ ಶಾಲೆಯಿಂದ ಬಂದವಳು ಎಲ್ಲಿಗೆ ಹೋಗುತ್ತಾಳೆಂದು ಮೇಲಿನ ಮನೆ ವೆಂಕಜ್ಜಿ ಕಂಡು ಹಿಡಿದೇಬಿಟ್ಟಳು. 'ಪುಟ್ಟು ನಿನ್ನ ನಾಯಿಮರಿ ಕೊಟ್ಟಿಗೆಯಲ್ಲಿ ಬೇಡ ನಾನು ಮನೆಗೆ ತಂದು ಸಾಕುತ್ತೇನೆ' ಎಂದು ವೆಂಕಜ್ಜಿ ಹೇಳಿದಾಗ ಪುಟ್ಟುಗೆ ಖುಷಿ ತಡೆಯಲಾಗಲಿಲ್ಲ... ಹಾಗಾದ್ರೆ ದಿನಾಲೂ ಶಾಲೆ ಬಿಟ್ಟ ನಂತರ ನಿಮ್ಮನೆಗೆ ಬರ್ತಿನಜ್ಜಿ ಎನ್ನುತ್ತ ಪುಟ್ಟು ಶಾಲೆಯತ್ತ ಹೊರಟಳು. ಶಾಲೆಯಲ್ಲಿ ಟೀಚರ್ ಮಕ್ಕಳಿಗೆಲ್ಲ ಏನೋ ಕಾರಣಕ್ಕೆ ಬೈಯ್ಯುತ್ತಿದ್ದರು. ಅದೇ ಸಮಯಕ್ಕೆ ಕ್ಲಾಸ್‌ರೂಮ್‌ಗೆ ಹೋದ ಪುಟ್ಟುಗೆ ಟೀಚರ್ ಗದರಿದರು. 'ಇದೇನು ಒಂದು ವಾರದಿಂದ ಟೈ ಇಲ್ಲದೆ ಶಾಲೆಗೆ ಬರುತ್ತಿದ್ದಿಯಲ್ಲ, ಟೈ ಏನಕ್ಕೆ ಧರಿಸೋದು ಗೊತ್ತಾ' ಎಂದು ಗದರಿದರು. ಗೊತ್ತು ಟೀಚರ್ ಶಿಸ್ತಿಗೆ ಎಂದು ಕಣ್ಣಲ್ಲಿ ನೀರು ತುಂಬಿಕೊಂಡ ಪುಟ್ಟು ತಲೆತಗ್ಗಿಸಿದಳು. 'ಅಲ್ಲ... ಅಲ್ಲ... ಟೈ ಕಟ್ಟೋದು ಯಾರಿಗಾದ್ರೂ ಗಾಯ ಆದಾಗ ಕಟ್ಟೋದಿಕ್ಕೆ' ಎಂದು ಟೀಚರ್ ನಕ್ಕಾಗ ಎಲ್ಲ ಮಕ್ಕಳು ನಕ್ಕರು. ಪುಟ್ಟುಗೆ ಮಾತೇ ಬರದೆ ಅಭಿಮಾನದಿಂದ ಟೀಚರ್ ಕಡೆ ನೋಡಿ ಧನ್ಯವಾದ ಹೇಳಿದಳು. ●

ದಯೆ ಇಲ್ಲದ ಧರ್ಮ ಯಾವುದಯ್ಯ, ದಯವೇ ಬೇಕು ಸಕಲ ಪ್ರಾಣಿಗಳಲ್ಲಿ, ದಯವೇ ಧರ್ಮದ ಮೂಲವಯ್ಯ – **ಶ್ರೀ ಬಸವೇಶ್ವರರು**

* * *

ಸಂಸ್ಕೃತಿ ಬುದ್ಧಿಯನ್ನು ಹದಗೊಳಿಸಿ ಮನಸ್ಸನ್ನು ಶುದ್ಧಗೊಳಿಸಿ ಆತ್ಮವನ್ನು ವಿಕಾಸಗೊಳಿಸತಕ್ಕಂತಹ ಒಂದು ಸಾಧನ – **ಶ್ರೀನಿವಾಸ**

ನಂಬಿಕೆಯಿದ್ದರೆ ಮೌನವೂ ಅರ್ಥವಾಗುತ್ತದೆ

✍ **ಶ್ರೀಧರ ಡಿ. ಹೆಗ್ಡೆ** ತೃತೀಯ ಬಿ.ಕಾಂ.

ಈ ಕತೆಯೊಂದು ಕಾಲ್ಪನಿಕ, ಇಲ್ಲಿ ಬರುವ ಪಾತ್ರಗಳು, ಹೆಸರುಗಳು ಯಾರ ಭಾವನೆಗೂ ಧಕ್ಕೆ ಉಂಟುಮಾಡುವ ಉದ್ದೇಶವಲ್ಲ. ಒಂದು ಹಾರರ್ ಚಿತ್ರಣವನ್ನು ಮುಂದಿಟ್ಟುಕ್ಕೊಂಡು ಕಾಲ್ಪನಿಕವಾಗಿ ಬಿಂಬಿಸಿದ ಕತೆಯಿದು.

ನನ್ನ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣವನ್ನು ಊರಿನಲ್ಲಿ proud ಆಗಿ ಮುಗಿಸಿದೆ, ಇನ್ನೇನು ಮುಂದಿನ ಅಭ್ಯಾಸಕ್ಕೆಂದು ಕರಾವಳಿಯಲ್ಲೊಂದಾದ ತುಳುನಾಡ ಉಡುಪಿ ಜಿಲ್ಲೆಗೆ ಬಂದೆ. ಇಲ್ಲಿನ ಸಾಂಸ್ಕೃತಿಕ ನೆಲೆಗಳು ಅಭೂತಪೂರ್ವವಾದದ್ದು. ಕಲಿಕೆ ಒಂದು ಕಡೆ ಆರಾಮವಾಗಿ ಸಾಗುತ್ತಿತ್ತು. ಇನ್ನೊಂದು ಕಡೆ ಮನುಷ್ಯನ ಸರ್ವೇಸಾಮಾನ್ಯ ಗುಣ ಇರಲಾರದೆ ಇರುವೆ ಬಿಟ್ಟುಕೊಳ್ಳುವುದು, ಹೌದು ನನಗೆ ಚಿಕ್ಕಂದಿನಿಂದಲೂ ಈ ದೈವ, ಭೂತ, ಪ್ರೇತ, ಪಿಶಾಚಿಗಳ ಕುರಿತು ಬಹಳ ಕುತೂಹಲ. ಕೆಲವು ಕುತೂಹಲಗಳು ಕ್ಷಣಮಾತ್ರವಾದರೆ ಉಳಿದವುಗಳು ಕೌತುಕಗಳತ್ತ ಸಾಗಲು ಎಡೆ ಮಾಡಿಕೊಡುತ್ತವೆ.... ಚಿಕ್ಕವರಿದ್ದಾಗ ನೋಡಿ ಭಯಪಟ್ಟ ಆಪ್ತಮಿತ್ರ ಚಲನಚಿತ್ರವು ಇಂದು ನೋಡಿದರೆ, ಈ ಸಿನಿಮಾಕ್ಕೆ ನಾನು ಅಂದು ಭಯಪಟ್ಟೆನೆಂಬುದು ತುಸು ನಾಚಿಕೆ. ಆದರೆ ಈ ನಾಗವಲ್ಲಿ ಪಾತ್ರದ ಕುರಿತು ಊಹಾಪೋಹಗಳ ಸುದ್ದಿಗಳು ಬಂದರೆ !! ಇಂದಿಗೂ ಅದೇನೋ ಒಂದು ಕೌತುಕ ಅಲ್ಲವೇ?.... ಈ ಹಾರರ್ ವಿಷಯ ಕುರಿತು ಅಂದಿನ ಕಾಲದಲ್ಲೇ ಬಹಳ ಹೆಸರು ಪಡೆದ 'ಗುಡ್ಡದ ಭೂತ' ಧಾರಾವಾಹಿಯ ಕುರಿತು ವರ್ಣಿಸಲು ನನ್ನ ಪದಮಾಲಿಕೆಯೇ ಬಹುಶಃ ಸೋತಿದೆಯೇನೋ... ಧಾರಾವಾಹಿಯ ಕಿರು ಗೀತೆ, ಸಾಹಿತ್ಯ, ಸಂಗೀತ, ನಿರ್ದೇಶನವು ಅದ್ಭುತವಾಗಿ ಜ಼ೀ ಕನ್ನಡ ವಾಹಿನಿಯಲ್ಲಿ ಮೂಡಿ ಬಂದಿತ್ತು. ಇವೆಲ್ಲಾ ಪ್ರಸ್ತಾವನೆ ಯಾಕೆ ಬೇಕು ಅಂತ ನೀವು ಅನ್ಕೊಬಹುದು, ಇಲ್ಲಿಂದನೆ ನನ್ನ ಕೌತುಕದ ಮೊದಲ ಮೆಟ್ಟಿಲು. ಧಾರಾವಾಹಿಯಲ್ಲಿ ಪ್ರಸಾರವಾದ 'ಕಮರೊಟ್ಟು' ಚಿತ್ರಣವು ಒಮ್ಮೆ ನೆನಪಿಸಿಕೊಂಡರೆ ರೋಮಾಂಚನಗೊಳ್ಳುವುದು ಖಂಡಿತ. ಮೊದ ಮೊದಲು ಈ ಕಮರೊಟ್ಟಿನ ವಿಷಯ ಅಲ್ಪವಾಗಿ ಉಳಿದಿತ್ತು. ತದನಂತರದಲ್ಲಿ ಬಹುತೇಕವಾಗಿ ಆ ಹೆಸರೇ ನನ್ನ ಕಿವಿಗೆ ಕಂಪಿಸಲಾಯಿತು. ಹೀಗೆ ಒಮ್ಮೆ ದಾರಿಯಲ್ಲಿ ಬರುವಾಗ 'ಕಮರೊಟ್ಟು ಚೆಕ್ ಪೋಸ್ಟ್' ಸಿನೇಮಾದ ಬ್ಯಾನರ್ ಕಾಣಿಸಿದವು. ನಂತರದಲ್ಲಿ ಕೇಟರಿಂಗ್ ಎಂದು ತೆರಳಿದಾಗ ಅಲ್ಲಿನ ವಯಸ್ಕರು ಯಾರೋ ಕಮರೊಟ್ಟಿನ ಜಾಗದ ಕುರಿತು ಅವರ ಭಾಷೆಯಲ್ಲಿ ಮಾತನಾಡಿಕೊಳ್ಳುತ್ತಿದ್ದರು.... ಹೀಗೆ ಕೌತುಕಗಳು ಗಾಢವಾಗಿ ತುಂಬಿಕೊಂಡವು. ಇಲ್ಲಿ ಏನೋ ನಿಗೂಢತೆಯಿರುವುದು ನನ್ನ ಮನಸ್ಸಿಗೆ ತೀವ್ರವಾಗಿ ಕಾಡಲಾರಂಭಿಸಿತು. ಸರಿ ಅಂದುಕೊಂಡು ತ್ವರೆ ಮಾತ್ರದಲ್ಲಿ ಲಘು ಉತ್ತರ ನೀಡುವ ಗೂಗಲ್ ಬಳಸಿದೆ. ಗೂಗಲ್ ಮಾಡಿದ್ರೂ ಹೆಚ್ಚು ವಿಷಯ ಸಿಗಲಿಲ್ಲ. ನನ್ನ ಪರಿಚಯದವರು, ಗೆಳೆಯರು, ಅವರಿವರ ಹತ್ತಿರ ಎಲ್ಲಾ ವಿಚಾರಿಸಿದೆ. ಎಲ್ಲರದೂ ಒಂದೇ ಉತ್ತರ.... 'ನಂಗೂ ಗೊತ್ತಿಲ್ಲಾ, ನಿಮಗೆ ಗೊತ್ತಾದ್ರೆ ಹೇಳಿ, ನಾವೂ ಬರ್ತೀವಿ, ಒಂದು ಸಾರಿ ಹೋಗಿ ನೋಡಿ ಬರೋಣಾ.'

ಬಿಡುವಿನ ವೇಳೆಯಲ್ಲಿ ಖಾಲಿ ಉಳಿಯುವುದರ ಬದಲು ಕೇಟರಿಂಗ್ ಹಿಡಿದರೆ ಒಂದೊತ್ತಿನ ಊಟ, ವಾರದ ಖರ್ಚಿಗೆ ಸಾಲುವಷ್ಟು ಧನ ಲಾಭವಾಗುತ್ತಿತ್ತು. ಕೆಲಸಕ್ಕೆಂದು ಬಂದವರ ಜೊತೆ ಪರಿಚಯ, ಹರಟೆ ಹೊಡೆಯುತ್ತಾ ಬಂದವರಲ್ಲಿ ಒಬ್ಬನ ಬಳಿ ನನ್ನ ಸೂಜಿ ಮೇಣದಂತ (ಚೊರ್ರೇ) ವಿಷಯವನ್ನು ಕೇಳಿದೆ. ಆತ ''ಸರಿಯಾಗಿ ಗೊತ್ತಿಲ್ಲಾ. ಆದರೆ, ಬಂಟವಾಳದ ಆಸುಪಾಸಿನಲ್ಲಿ ಉಂಟು ಅಂತಾ ಕೇಳಿದ್ದೇನೆ'' ಅಂದ. ಇಷ್ಟು ಮಾಹಿತಿ ಸಿಕ್ಕಿದ್ದು ಬೇಕಾದಷ್ಟು ಆಯ್ತು.

ನೋಡೇ ಬಿಡೋಣಾ ಅಂಥ ಒಂದು ದಿವಸ ಬೆಳಗ್ಗೆ ನಾನು ಮತ್ತು ನನ್ನ ಸ್ನೇಹಿತ ಅವನ ಬೈಕ್ ತೆಗೆದುಕೊಂಡು ಹೊರಟೆವು, ಬಿ.ಸಿ. ರೋಡ್ ದಾಟಿ, ಬೆಂಗಳೂರು ದಾರಿ ಬಿಟ್ಟು, ಬಂಟವಾಳದೊಳಗೆ ಹೊಕ್ಕಿದೆ. ಸಣ್ಣ ಊರು, ನಗರೀಕರಣದ ಗಾಳಿ ಹೆಚ್ಚಾಗಿ ಬೀಸಿರಲಿಲ್ಲ. ಅದೇ ಗದ್ದೆಗಳು, ಜುಳು ಜುಳು ಹರಿಯುವ ನೇತ್ರಾವತಿ, ಪಾಪ ಬಡವಾಗಿ ಹೋಗಿದ್ದಳು. ಮುಂದೆ ಚಲಿಸುತ್ತಾ ಇರುವಾಗ ಮನೆಗಳಿದ್ದರೂ ಊರೆಲ್ಲಾ ಖಾಲಿ ಖಾಲಿ, ಜನರ ಸುಳಿವೇ ಕಾಣುತ್ತಿಲ್ಲ. ಮುಂದೆ ನಾಲ್ಕೈದು ಕಿಲೋಮೀಟರ್ ಚಲಿಸಿ ತಿರುವಿನಲ್ಲಿ ಗೂಡಂಗಡಿಯೊಂದು ಕಂಡಿತು, ಮರುಭೂಮಿಯಲ್ಲಿ ನೀರು ಸಿಕ್ಕಷ್ಟು ಸಂತೋಷವಾಯಿತು. ರಪ್ಪ ಇಳಿದು ಎಳನೀರು ಕುಡಿಯುತ್ತಾ ಕೇಳಿದೆ, 'ಧನಿಗಳೇ, ಇಲ್ಲಿ ಕಮರೊಟ್ಟು ಎಲ್ಲಿ ಬರುತ್ತೆ!!' ಅದಕ್ಕೆ ಅವರು 'ನಂಗೆ ಸರೀ ಗೊತ್ತಿಲ್ಲ. ಉಂಟೋ ಇಲ್ವೋ ಅದೂ ಗೊತ್ತಿಲ್ಲ. ತಡೀರಿ, ಸ್ವಲ್ಪ ಕುಳಿತುಕೊಳ್ಳಿ, ವಿಚಾರಿಸಿ ಹೇಳ್ತೇನೆ' ಅಂದ್ರು. ಬರುವಾಗ ಜನರ ಗೋಚರವೇ ಆಗದ ನನಗೆ ಈ ತಂಗುದಾಣಕ್ಕೆ ಬಂದ ಮೇಲೆ ಅನೇಕರು ಬಂದರು. ನಮ್ಮ ಧನಿಗಳು ಕೂಡಾ ಆ ಕಡೆ ಈ ಕಡೆ ಇದ್ದವರನ್ನೆಲ್ಲಾ ಕರೆದು 'ಏರಾಂಡ ಕಮರೊಟ್ಟು ಪುದರ್ ಕೇಂದರಾ ಮುಲ್ಪ' (ನಿಮ್ಮಲ್ಲಿ ಯಾರಾದರೂ ಕಮರೊಟ್ಟು ಹೆಸರು ಕೇಳಿದ್ದೀರಾ) ಅಂತಾ ಹೇಳಿದರು. ಯಾರ್ಯಾರೋ ಏನೇನೋ

ಮಾತಾಡಿಕೊಂಡರು. ಅವರ ಮಾತನ್ನು ಕೇಳಿ ನನ್ನ ಸ್ನೇಹಿತ ''ಅಜ್ಜಾ ನಮ್ಮನ್ನು ಕಾಪಾಡು'' ಎಂದು ಬೇಡಿಕೊಂಡನು. ಕೊನೆಗೆ ಒಬ್ಬ 'ಮಾರಾಯ್ರೇ ನೀವು ಒಂದು ಕೆಲಸ ಮಾಡಿ. ನಿಮಗೆ ಮಾಹಿತಿ ಬೇಕೇ ಬೇಕಾದ್ರೆ.. ಇಲ್ಲೊಬ್ಬ ಭೂತ ಕೋಲದವರ ಪರಿಚಯ ಇರುವವ ಇದ್ದಾನೆ. ಅವನಿಗೆ ಗೊತ್ತು ಅನ್ನಿಸುತ್ತೆ. ಕರೆಯುದಾ!!?' 'ಸರಿ, ಕರೆಸಿ' ಅಂದೆ. ಅಂತೂ, ಒಂದರ್ಧ ಗಂಟೆ ಧನಿಗಳ ಅಂಗಡಿ ಕಟ್ಟೆ ಮೇಲೆ ಒಂದು ಸಣ್ಣ ವಿಚಾರಗೋಷ್ಠಿಯೇ ನಡೆದುಹೋಯ್ತು. ಕುಳಿತವರು ಹೇಳಿದರು 'ನೀವು ಪಿಚ್ಚರು ಮಾಡುವವರಾ ಇಲ್ಲಾ ದೂರದರ್ಶನದವರಾ?' ಎಂಥದು ಮಾರ್‍ರೇ ಹೇಳೋದಾದರೆ ಎಷ್ಟು ವಿಷ್ಯ ಉಂಟು. ಅದು ಎಲ್ಲಾ ಬಿಟ್ಟು ನೀವು, ಮಂಗಳೂರು ಅಂದ್ರೆ ಒಂದು ದೆವ್ವದ ಮನೆ ಇರುವ ಜಾಗ ಅಂಥಾ, ಕುತೂಹಲ ಮಾಡಿಸಿಬಿಟ್ರಿ ಅಲ್ವಾ... ಅಲ್ಲಪ್ಪಾ, ನಾನು ಇಲ್ಲಿಯವನೇ, ಏನು ವಿಷ್ಯ ಅಂತ ತಿಳಿದುಕೊಳ್ಳೋಣಾ ಅಂತ ಅಷ್ಟೇ ಅಂದೆ. ಕೊನೆಗೆ ಒಬ್ಬ ಬಂದ. ಅವನು ಬಂದ ಕೂಡಲೇ ಇವರೆಲ್ಲಾ ಸರಿ ನಾವಿನ್ನು ಹೊರಡುತ್ತೇವೆ ಎಂದು ಅಲ್ಲಿಂದ ಹೊರಟರು. ಆತ ಇನ್ನೇನು ಸಮೀಪಿಸುತ್ತಿರುವಾಗ ಆತನ ಕಣ್ಣಿನಲ್ಲಿ ಅದೇನೋ ಮಾಯೇ!! ನಮಸ್ಕಾರ ಧನಿಗಳೇ ಎಂದು ಸತ್ಕರಿಸಿ ನನ್ನೆಲ್ಲಾ ವಿಷಯ ಅವರ ಮುಂದೆ ತಿಳಿಸಿದೆ, ಇಷ್ಟೊತ್ತು ನಿಮಗೆ ಕಾಯುತ್ತಿದ್ದೆ, ನಿಮ್ಮನ್ನು ಕರೆಯಲು ಹೋದವನು ನಿಮ್ಮ ಜೊತೆಯಲ್ಲಿ ಬರಲಿಲ್ಲವೇ ಎಂದು ಕೇಳಿದೆ. ಆಗ ಅವರು ಇಲ್ಲ ನಾನು ಪಕ್ಕದ ಊರಿನ ಹಬ್ಬಕ್ಕೆಂದು ತೆರಳುತ್ತಿರುವೆ, ಮನಸ್ಸಿನ ಕೂಗೊಂದು ನನಗೆ ಕೇಳಿಸಿತು ಅದಕ್ಕೆಂದು ಬಂದೆ ಎಂದರು. ಮನಸ್ಸಿನ ಕೂಗೋ ಅಥವಾ ಮನೆಯಲ್ಲಿ ಕೂಗು ಕೇಳಿಸಿತೋ ಎಂಬುದು ಅವರ ಪದ ಬಳಕೆಯಲ್ಲಿ ತಿಳಿಯಲಿಲ್ಲ. ತಲೆಕೆಡಿಸಿಕೊಳ್ಳಲಿಲ್ಲ ಬಹುಶಃ ಇಲ್ಲಿರುವ ಮನೆಯ ಕೂಗು ಕೇಳಿಸಿರಬಹುದು ಅಂದುಕೊಂಡೆ. ನಂತರದಲ್ಲಿ ಅವರು ಆ ಜಾಗವನ್ನು ನಮಗೆ ತಿಳಿಸಿದರು. ಅದೊಂದು ಮನೆಯ ಹೆಸರು, ಇಲ್ಲೇ ಸ್ವಲ್ಪ ಹೈವೇನಲ್ಲಿ ಹೋಗಿ ಅಡ್ಡ ತಿರುಗಿ, ಒಂದಷ್ಟು ದೂರ ನಡೆದು ಹೋದರೆ, ಹೊಳೆಯ ಪಕ್ಕದಲ್ಲಿ ಉಂಟು ಅಂದರು. ವಿಚಿತ್ರ ಅಂದ್ರೆ, ಅಲ್ಲಿದ್ದ ಯಾರೊಬ್ಬರೂ ಅದನ್ನು ನೋಡಿರಲಿಲ್ಲ, ಕೇಳಿರಲಿಲ್ಲ. 'ಆಯ್ತು, ಇವರಿಗೆ ಆ ಮನೆ ತೋರಿಸಬೇಕು' ಅಂತಾ ನನ್ನ ಪರವಾಗಿ ಭೇಟಿ ಮಾಡಿಸಿಕೊಟ್ಟರು.

ಬೈಕ್ ಹತ್ತಿ ನಾವು ಮೂವರು ಹೊರಟೆವು. ಅವರು ನನ್ನ ಹಿಂದೆ ಕುಳಿತು ದಾರಿ ತೋರಿಸಿದರು. ಪುನಃ ಬಿ.ಸಿ. ರೋಡಿಗೆ ಬಂದು, ಬೆಂಗಳೂರು ದಾರಿಯಲ್ಲಿ ಸುಮಾರು 20-25 ಕಿ.ಮೀ. ಬಂದೆವು. ಮೊದಲೇ ತ್ರಿಬಲ್ ರೈಡಿಂಗ್ ಆಗಿದ್ದರಿಂದ ಹದ್ದಿನ ಕಣ್ಣಿನಂತೆ ಸುತ್ತಲೂ ನೋಡಿಕೊಂಡು ಓಡಿಸಿದೆ. ಎದುರುಗಡೆ ಪೋಲಿಸ್ ಇದ್ದಿದನ್ನು ಗಮನಿಸಿ ಗಾಡಿ ನಿಲ್ಲಿಸಿದೆ. ಆಗ ಅವರು ತೊಂದರೆ ಇಲ್ಲ ನೀ ಹೊರಡು ಎಂದರು. ಪೋಲಿಸ್ ಅವರು ನನ್ನ ಗಾಡಿಯನ್ನು ನಿಲ್ಲಿಸಲಿಲ್ಲ. ಬಹುಶಃ ಇವರು ಊರಿನ ದೊಡ್ಡ ಜನರಿರಬೇಕು ಅಂದುಕೊಂಡೆ. ಮಣ್ಣಿನ ದಾರಿ, ಒಂದಷ್ಟು ದೂರ ಸಾಗುತ್ತಾ, ಇಲ್ಲೇ ನಿಲ್ಲಿಸಿ, ಇಳೀರಿ, ಮುಂದೆ ಗಾಡಿ ಹೋಗೋದಿಲ್ಲ, ಈ ಗದ್ದೆಯ ಹುಣಿಯಲ್ಲೇ ಹೋಗಬೇಕು ಅಂದರು. ಸರಿ, ಲಾಕ್ ಮಾಡಿ, ಅವರ ಹಿಂದೆ, ಗದ್ದೆಯ ಹುಣಿಯಲ್ಲಿ ಸಾಗಿದೆ. ಕೆಲವು ತಿರುವುಗಳು, ಎಲ್ಲೆಲ್ಲೋ ಕರೆದುಕೊಂಡು ಹೋದರು. ಅಲ್ಲಲ್ಲಿ ಒಂದೋ ಎರಡೋ ಮನೆಗಳು ಮಾತ್ರ. ಅಂತೂ ಸುಮಾರು ಅರ್ಧ ಗಂಟೆ ನಡೆದ ಬಳಿಕ ಒಂದು ಜಾಗ ಬಂತು. 'ಅದೇ, ನೋಡಿ, ಕಮರೊಟ್ಟು ಮನೆ' ಅಂದರು. ಇನ್ನೇನು ಹಿಡಿದ ಕೆಲಸದ ಉತ್ಸಾಹ ಕಡಿಮೆಯಾಗುತ್ತಿರುವಾಗ ಅವರ ಮಾತುಗಳು ದೀಪ ಉರಿಯುತ್ತಿರುವ ಜುಂಜಿನಷ್ಟೇ ಬೆಳಕು ತುಂಬುತ್ತಿತ್ತು.

ವಾವ್, ಹಳೆಯ ಹಂಚಿನ ಮನೆ. ಸಾಕಷ್ಟು ದೊಡ್ಡದಾಗೇ ಇತ್ತು. ಯಾರೂ ವಾಸವಿದ್ದ ಹಾಗೆ ಕಾಣಿಸಲಿಲ್ಲ. ಹೆಂಚುಗಳೂ ಅಲ್ಲಲ್ಲಿ ಉದುರಿ ಹೋಗಿದ್ದವು. ಮನೆಯ ಎದುರು ಒಂದು ಹಜಾರ. ಅದಕ್ಕೆ ಯಾವುದೇ ಆವರಣ ಇರಲಿಲ್ಲ. ಒಂದು ಹಳೆಯ ಮುರುಕಲು ಕುರ್ಚಿ. ಹಜಾರದ ಉದ್ದಕ್ಕೂ ಒಂದು ದಂಡೆ. ಆ ದಂಡೆ, ಕುರ್ಚಿಗಳ ಮೇಲೆ ಸುಮಾರು ಅರ್ಧ ಸೆಂಟಿಮೀಟರ್‌ನಷ್ಟು ಧೂಳು ಕೂತಿತ್ತು. ಮನೆಯ ಗೋಡೆಯ ಮೇಲೆ ಸಣ್ಣದಾಗಿ ಬರೆದಿತ್ತು – ಕಮರೊಟ್ಟು......!!!!!!!

ನನ್ನ ಹಿಂದೆಯೇ ಬಂದಿದ್ದವರು ಅಲ್ಲೇ ಒಂದು ತೆಂಗಿನ ಮರದ ಕೆಳಗೆ ಕುಳಿತರು, ನಾನು ಕೇಳಿದೆ. 'ಇದರ ಬಗ್ಗೆ ಏನಾದರೂ ಗೊತ್ತಾ ನಿಮಗೆ?' 'ಉಹುಂ, ನಾನು ಸಣ್ಣವನಿರುವಾಗ ಯಾರೋ ಇಲ್ಲಿ ಇದ್ದ ನೆನಪು ಅಷ್ಟೇ. ಇಲ್ಲಿಗೆ ಯಾರೂ ಬರುವುದೂ ಇಲ್ಲಾ, ಹೆಚ್ಚಿಗೆ ಗೊತ್ತಿಲ್ಲ. ಆಯ್ತು ಇನ್ನು ವಾಪಸು ಹೋಗೋಣವಾ?'

ನನಗೆ ಅಷ್ಟು ಬೇಗ ಹೊರಡೋ ಆತುರ ಇರಲಿಲ್ಲ. ಆದರೂ ಹೇಳಿದೆ 'ನಾನು ಒಂದಷ್ಟು ಹೊತ್ತು ಇಲ್ಲಿದ್ದು, ಸಂಜೆಯ ವೇಳೆಗೆ ಬರ್ತೇನೆ. ಈಗ ನೀನು ಹೋಗು' ಅಂದೆ.

ಆಯ್ತು ಎಂದು ಎದ್ದು ನಿಂತು ತಲೆ ತುರಿಸತೊಡಗಿದ. ಗೊತ್ತಾಯ್ತು ಬಹುಶಃ ಸಹಾಯ ಧನ ಕೊಡಬೇಕೆಂದು. ಮುಂದೆ ಬಂದೆ ಅಷ್ಟರಲ್ಲಿ ಆತ ನನ್ನ ತಲೆ ಮೇಲೆ ಕೈ ಇಟ್ಟು ಆಶೀರ್ವದಿಸಿದ. ನಾನಿನ್ನು ಹೊರಡುತ್ತೇನೆ ಎಂದು ಹೊರಟ. ನಾವು ಬರೋದಿಲ್ಲ ಅಂದ್ರೆ, ಅವನು ಹೋಗೋದಾದ್ರು ಹೇಗೆ!! ಬಹುಶಃ ಆಸುಪಾಸಿನಲ್ಲಿ ಹತ್ತಿರದ ದಾರಿಯಿರಬೇಕು ಅಂದುಕೊಂಡು ಸುಮ್ಮನಾದೆ. ಮೊದಲೇ ಆ ಜಾಗವು ಹಲವು ಕಿರುದಾರಿಗಳಿಂದ ಕೂಡಿದ್ದವು. ಸುತ್ತಲೂ ನಿಶ್ಯಬ್ದ. ಮರಗಿಡಗಳ ನೆರಳು. ಆ ಕಡೆ ಈ ಕಡೆ ಓಡಾಡಿದೆ. ಮೆಟ್ಟಿಲು ಹತ್ತಿ ಹಜಾರ ಪ್ರವೇಶಿಸಿದೆ. ಒಳ ಹಾಲ್‌ಗೆ ಹೋಗುವ ಕೋಣೆಯ ಬಾಗಿಲು ಹಾಕಿತ್ತು. ಬೀಗ ಜಡಿದಿತ್ತು. ಪಕ್ಕದಲ್ಲೇ ಒಂದು ದೊಡ್ಡದಾದ ಕಿಟಕಿ ಇತ್ತು. ಅದರ ಬಾಗಿಲು ಕೂಡಾ ಹಾಕಿತ್ತು. ತಳ್ಳಿದೆ, ಆ ಕಡೆ ಈಕಡೆ ನೋಡಿದೆ. ಹಜಾರದ ದಂಡೆಯ ಬಳಿ ಒಂದೆಡೆ ಒಂದಷ್ಟು ಇಟ್ಟಿಗೆ ಪೇರಿಸಿಟ್ಟದ್ದು ಕಂಡು ಬಂತು. ಸರಿಯಲ್ಲ ಅನಿಸಿದರೂ, ಕುತೂಹಲ ಜಾಸ್ತಿ ಆಗಿತ್ತು. ಒಂದು ಇಟ್ಟಿಗೆ ಎತ್ತಿಕೊಂಡು ಬಂದು ಕಿಟಕಿ ಬಾಗಿಲಿಗೆ ಗುದ್ದಿದೆ. ಓಪನ್ ಆಯ್ತು. ಒಳಗೆ ಇಣುಕಿದೆ. ಕತ್ತಲಿಗೆ

ಕಣ್ಣು ಹೊಂದಿಕೊಳ್ಳಲು ಒಂದಷ್ಟು ಹೊತ್ತೇ ಬೇಕಾಯ್ತು. ಅಡ್ಜಸ್ಟ್ ಮಾಡಿ ನೋಡಿದೆ. ಎಲ್ಲಾ ಖಾಲಿ ಖಾಲಿ. ಗೋಡೆಗೆ ಅಂಟಿಸಿದ್ದ ಮರದ ಕಪಾಟು, ಒಂದು ಮಂಚ, ಎರಡು ಕುರ್ಚಿಗಳು, ಒಂದಷ್ಟು ಹಿತ್ತಾಳೆಯದ್ದೋ, ತಾಮ್ರದ್ದೋ ಪಾತ್ರೆಗಳು ಆ ಮಂಚದ ಮೇಲೆ ಅಷ್ಟೇ. ಠುಸ್ ಎನಿಸಿತು!!!

ಪುನಃ ಮೆಟ್ಟಿಲು ಇಳಿದು ಮನೆಯ ಹಿಂಭಾಗಕ್ಕೆ ಹೋದೆ. ಅಲ್ಲಿ ಎಲ್ಲೂ ಬಾಗಿಲುಗಳು ಇರಲಿಲ್ಲ. ಸಮಾನಾಂತರ ದೂರದಲ್ಲಿ ಮೂರು ಕಿಟಕಿಗಳಿದ್ದವು. ಒಂದರ ಗ್ಲಾಸ್ ಒಡೆದಿತ್ತು. ಇನ್ನೊಂದು ಅರ್ಧ ತೆರೆದಿತ್ತು. ಮತ್ತೊಂದು ಮುಚ್ಚಿಕೊಂಡಿತ್ತು. ಎಲ್ಲಾ ಕಿಟಕಿಗಳ ಬಿಂಜ್ಲು (ಜೇಡರ ಬಲೆ) ಒರೆಸುತ್ತಾ ಇರುವಾಗ ಕಿಟಕಿಯ ಮರದ ಚೌಕಟ್ಟಿನಲ್ಲಿ ಸಿಕ್ಕಿಸಿದ ಕೆಲವು ಮಾಸಿದ ಭಾವಚಿತ್ರಗಳು ಕಂಡವು.... ಪ್ರತಿಯೊಂದು ಭಾವಚಿತ್ರವು ಮಾಸಿದರೂ ತಕ್ಕಮಟ್ಟಿಗೆ ಏನಿರಬಹುದೆಂದು ಊಹಿಸಬಹುದಿತ್ತು.... ಆ ಮನೆಯ ಸದಸ್ಯರ ತುಂಬು ಕುಟುಂಬದ ಗತವೈಭವದ ಚಿತ್ರಗಳಾಗಿದ್ದವು. ಕ್ರಮೇಣ ಮನೆಯಲ್ಲಿ ಅಲೆದಾಡುತ್ತ ಇರುವಾಗ ಒಂದು ಟ್ರಂಕ್ ಸಿಕ್ಕಿತು!! ಟ್ರಂಕ್ ತೆರೆಯುವಾಗ ನನ್ನ ಸ್ನೇಹಿತನು ಇದು ಸರಿಯಲ್ಲ ಇಲ್ಲಿ ಅಗಾಧ ನಂಬಿಕೆಗಳಿವೆ, ಅವುಗಳಿಗೆ ಧಕ್ಕೆ ತರುವುದು ಸರಿಯಲ್ಲ, ಮನೆ ನೋಡಿ ಆಯಿತಲ್ಲ, ನಾವಿನ್ನು ಹೊರಡೋಣ ಎಂದನು. ಸ್ವಲ್ಪ ತಡಿ ಇನ್ನೂ ಸ್ವಲ್ಪ ಮನೆಯ ಆಚೆ ಈಚೆ ತಿರುಗಿ ಬರೋಣ.... ತಿರುಗುತ್ತಾ ಇಲ್ಲಿಯ ಆರಾಧನೆ, ನೇಮ, ಭೂತ, ಕೋಲಗಳ ಕುರಿತು ಮಾಹಿತಿಗಳನ್ನು ತಿಳಿದುಕೊಳ್ಳುತ್ತ ಮನೆಯನ್ನು ಮುಚ್ಚುತ್ತಿರುವಾಗ ದೊಫ್ ಎಂದು ಒಂದು ಫೋಟೋ ಬಿತ್ತು. ಸ್ವಲ್ಪ ನಡುಕ ಹುಟ್ಟಿದರೂ ಏನೆಂದು ನೋಡುವಾಗ ಆ ಫೋಟೋದಲ್ಲಿ ನಾವು ಈ ಸ್ಥಳಕ್ಕೆ ಬರಬೇಕಾದಾಗ ಯಾರನ್ನೆಲ್ಲಾ ಭೇಟಿಯಾಗಿದ್ದೆವೋ ಅವರದ್ದೆಲ್ಲಾ ಭಾವಚಿತ್ರವಿತ್ತು. ಆದರೆ ನಮ್ಮನ್ನು ಕರೆತಂದವರದ್ದು ಇಲ್ಲ. ಹಾಗಾದರೆ ಇವರು ಆ ಗುಂಪಿನ ಸದಸ್ಯರೊಬ್ಬರಲ್ಲ ಎಂಬುದು ಖಾತ್ರಿಯಾಯಿತು. ಸುತ್ತಮುತ್ತ ಅಗೋಚರ ಶಬ್ದಗಳು ಹಬ್ಬದ ಗದ್ದಲಗಳು, ವಾದ್ಯಗಳ ಶಬ್ದ ನನಗೆ ಕೇಳಿಸಿದ್ದು ನನ್ನ ಸ್ನೇಹಿತನಿಗೆ ಕೇಳಿಸುತ್ತಿರಲಿಲ್ಲ. ಬಹುಶಃ ಏನೋ ಲೋಪ ಉಂಟಾಗಿರಬಹುದೆಂದು ಅಲ್ಲಿಂದ ಕಾಲ್ಕಿತ್ತೆವು. ಸಮಯ ಚಂದ್ರನನ್ನು ಸ್ವಾಗತಿಸುತ್ತಿತ್ತು. ಇತ್ತ ಭಯ ನಮ್ಮನ್ನು ಬೀಳ್ಕೊಡುತ್ತಿತ್ತು. ಪಕ್ಕದಲ್ಲೇ ಮನೆಗೆ ಸಂಬಂಧಿಸಿದ ಗುಡಿಯೊಂದು ಕಾಣಿಸಿತು. ಅದು ಆ ಮನೆಗೆ ಸಂಬಂಧಿಸಿದ ದೈವದ ಗುಡಿಯಿರಬೇಕು ಅಂದುಕೊಂಡು ಭಯದ ಭಾರ ಇಳಿಸಿಕೊಳ್ಳಲು ಅಲ್ಲಿ ನಮಸ್ಕರಿಸಿ ನಮ್ಮಿಂದ ತೊಂದರೆಯಾದರೆ ಕ್ಷಮಿಸಿ ಎಂದು ಅಂಗಲಾಚಿ ಬೇಡಿಕೊಂಡು ಬೈಕ್ ತಿರುಗಿಸಿ ಮರಳಿ ಮನೆ ಸೇರಿದೆವು.

ನಮ್ಮ ನಂಬಿಕೆಯಿದ್ದರೆ ಮೌನವು ಅರ್ಥವಾಗುತ್ತದೆಂಬ ಪಾಠವನ್ನು ನಾ ಅರಿತೆ. ●

ಅಮ್ಮ ನನ್ನವಳು

ಭಾವನೆಗಳ ಬಂಧ ಮೀರಿ
ಬವಣೆಗಳ ಬದಿಗೆ ತೂರಿ
ಬದುಕಿರುವ ಜೀವವಿದುವೆ ನನಗೋಸ್ಕರ !

ತಿಳಿಯದಿದ್ದ ತಪ್ಪನು ತೀಡಿ
ನಾ ಹೇಳುವ ಸುಳ್ಳನು ಕೇಳಿ
ಬದುಕಿನ ಮಹತ್ವ ಬಿಡಿಸಿ ಹೇಳಿ
ಜೊತೆಗಿರುವಳು ನೋಡಿ...

ಬೇರೆ ಯಾರಿಲ್ಲ ಇವಳಿಗೆ ಸರಿಸಾಟಿ...
ಕನಸಿನಲಿ ನನ್ನದೇ ಪಾಟಿ...
ಅಮ್ಮ... ಅವಳು ಪ್ರೀತಿಯ ಕಟ್ಟಿ
ಅವಳಿಗೋಸ್ಕರ ನನ್ನ ಈ ಜೀವನ
ನಿನ್ನಂತಹ ಅಮ್ಮ ಪಡೆದ ನಾನೇ ಧನ್ಯ...

✍ **ಕೆ. ಈ. ದಿಶಾ ಭಟ್,** ಪ್ರಥಮ ಬಿ.ಕಾಂ.

ವಾಸ್ತು ದೋಷ

✍ **ಯಶವಂತ ಮೇಟಿ,** ತೃತೀಯ ಬಿ.ಕಾಂ.

ಕೆಲವೊಂದು ಕಾರ್ಯಕ್ಕೆ ಶಕ್ತಿಗಿಂತ ಯುಕ್ತಿ ಇರಬೇಕಂತೆ. ಅದೇ ಈ ಕಥೆಯ ಸಾರಾಂಶ...

ಮುಂಜಾನೆ ಮನೆ ಕೆಲಸದ ಹನುಮಂತ ಅವ್ವನ ಹತ್ರಾ ಮೆದುಧ್ವನಿಯಿಂದ ಹೇಳ್ತಿದ್ದಾ ಅವ್ವಾರ ನಿನ್ನೆ ಸಂಜಿಕ ಶೆಟ್ರ ಅಂಗಡಿ ರಾಮನ್ನ ಮನೆಯವರಿಗೂ ಸಾಹುಕಾರ ಶಂಕರಪ್ಪನವರಿಗೂ ಜೋರ ಜಗಳರಿ ಪೋಲಿಸ ಕೇಸ ಮಾಡ್ತೆನಂತ ರಾಮನ್ನ ಹೊಂಟಿದ್ದರಿ. ಇಷ್ಟು ಹೇಳೋವಷ್ಟರಲ್ಲಿ ನಾ ಕೇಳಿದೆ ಯಾಕಂತೆ ಅವರಿಬ್ಬರ ಜಗಳ... ಧನಿ ಅದೇನೋ ಶಂಕರಪ್ಪನವರ ಮನಿ ಹಿಂದ ರಸ್ತಾದಾಗ ಅವರ ಮನಿ ಸ್ನಾನದ ನೀರು, ಪಾತ್ರೆ ತೊಳೆದ ನೀರು, ಕಸಕಡ್ಡಿ ಎಲ್ಲಾ ರಸ್ತಾದಾಗ ಹರಿಯುತ್ತಂತೆ. ಶೆಟ್ರು ಎರಡಾಮೂರು ಬಾರಿ ಹೇಳಿರಂತರಿ ಇಂಗು ಗುಂಡಿ ಇಲ್ಲಾ ಪೈಪ್‌ಲೈನ್ ಮಾಡಿಸಿ ಗಟಾರಕ್ಕೆ ಸೇರಸರಿ ಅಂತಾ. ಆದ್ರ ಸಾಹುಕಾರ್ ಕೇಳೆ ಇಲ್ಲ. ನಿನ್ನೆ ಶೆಟ್ಟರ ಮಗ ಬೈಕ ಮೇಲಿಂದ ಅಲ್ಲೆ ಬಿದ್ದಾನ ಪೆಟ್ಟ ಹತ್ಯಾವಂತ ಜಗಳಾ ಸುರು ಆಗಿ ಬಿಟ್ಟೇತರಿ ಪಂಚಾಯತಿಯವರ ಬಂದ ಬಗೆಹರಿಸಿದ್ರು ಇನ್ನು ಮುಗಿವಾತರಿ. ಸಾಹುಕಾರ ಬಾಳ ಮಂಡತನಾ ಯಾರು ಹೇಳಿರು ಕೇಳೊಲ್ಲ ಅಂತಾ ದರ್ಪಾ ತೋರಿಸಿದರಿ.... ಅಷ್ಟರಾಗ ಶೆಟ್ರು ಬಾಗಿಲ ಮುಂದ ಹೊಂಟಿದ್ದು ಕಾಣಿಸ್ತು.. ಶೆಟ್ರ ನಮಸ್ಕಾರ್ರಿ ಯಾಕ ನಿನ್ನೆ ಜೋರ ಆಯ್ತುಂತ ಜಗಳಾ ಅಂದೆ... ಶೆಟ್ರನ್ನ ನಾವು ಕೆಣಕಿದಂಗಾಯ್ತು ಇರೋದು ಬಿಡೋದು ಎಲ್ಲಾ ವಿಷಯಾ ಹೇಳಿ ಸಿಎಂ ಸಾಹೆಬ್ರವರೆಗೂ ಪರಿಚಯಾ, ಶಂಕರಪ್ಪನ ಒದ್ದ ಒಳಗ ಹಾಕೆಸ್ತಿನಿ ನೋಡ್ತಿರಿ ಸರ್ ಅಂತಾ ರಣಕಹಳೆ ಕೂಗಿದ್ರು . ನಾ ಸಮಾಧಾನಿಸಿ ಶೆಟ್ರ ನಾನು ಶಂಕರಪ್ಪನವರಿಗೆ ಹೇಳಿ ನೋಡ್ತಿನಿ ಜಗಳಾ ದೊಡ್ಡದು ಮಾಡಿ ಮತ್ತೊಂದೆನಾರ ಆಗೂದ ಬ್ಯಾಡ ಊರ ಅಂದಮ್ಯಾಲ ಇಂತಾದಿರೋದಲಾ ಅಂದು ಆಗಲೆ ಸಾಹುಕಾರ ಮನಿಕಡೆ ಹೋಗಿ ಬರೋಣ ನಡಿ ಹನುಮಂತಾ ಅಂದೆ. ಈಗ ಬ್ಯಾಡ್ರಿ ಧನಿ ಅವರ ಮನಿಗೆ ಎಂತಾದೊ ದೊಡ್ಡ ಸ್ವಾಮಿಗೋಳ ಬಂದಾರಂತರಿ ಆಯಾಪಾಯಾ ಏನೋ ತಪ್ಪಿ ಮನ್ಯಾಗ ಜಗಳಾ ನೋವು ಸುರುವಾಗ್ಯಾವಂತ ಶಾಂತಿ ಮಾಡಸೂದ ಅಂತರಿ ಅದೆನೊ ವಸ್ತು ದೋಷಾ ಅಂದ್ರಿಪಾ... ನಾ ಜೋರಾಗಿ ನಕ್ಕು ಅದು ವಾಸ್ತು ದೋಷಾ ಹನುಮಂತ.. ನೋಡೋಣ ಸಂಜಿಕ ನಾನೆ ಭೇಟಿ ಆಕ್ಕೆನಿ ಅಂತಾ ಸುಮ್ನಾದೆ.

ಶಂಕರಪ್ಪ ಸಂಜಿ ವಾಕಿಂಗ್ ಬಂದಾಗ ಭೇಟಿ ಆದ್ರು ಕುಶಲೋಪರಿ ಮಾತಾಡ್ತಾ ಮನಿ ವಿಷಯಾ ಬಂತು, ಮನ್ಯಾಗ ಶಾಂತಿ ಇಲ್ಲರಿ ಸರ್ ಏನಾರ ಒಂದ ಜಗಳಾ ರೋಗಾ ತಾಪತ್ರಯ ಹಿರಿಯಾರ ಕಟ್ಟಿಸಿದ ಮನಿ ವಾಸ್ತು ದೋಷ ಆಗೇತಿ ಅನ್ನಾತಿದ್ರು ಅದಕ್ಕ ಮುಂಜಾನೆ ಟಿವಿನಾಗ ಬರ್ತಾರಲ್ಲರಿ ವಾಸ್ತು ತಜ್ಞರು ಕನ್ನೂರ ಶ್ರೀಗಳು ಅವರು ಬಂದು ಶಾಂತಿ ಹೋಮ ಮಾಡೋದು ಆಮೇಲೆ ಕೆಲವೊಂದು ಜಾಗಾ ಬದ್ಲಿ ಮಾಡಬೇಕ ಏನೇನೋ ಹೇಳಿ ಹೋಗ್ಯಾರಿ.... ಅಂದ್ರು... ನಡಿರಿ ನಾನು ನೋಡೆ ಬರ್ತಿನಿ ಅಂತಾ ಸಾಹುಕಾರ ಮನಿಕಡೆ ಹೆಜ್ಜೆ ಹಾಕಿದೆ. ಎಲ್ಲ ಮನೆ ತೋರಿಸಿ ಎಲ್ಲೆಲ್ಲಿ ಏನೇನ ಮಾಡಬೇಕ ಅನ್ನೂದ ಹೇಳಿರು.... ಹಿತ್ತಲಕ್ಕೂ ಕರಕೊಂಡ ಹೋದಾಗ ಕೊಳಚೆ ಕಸಕಡ್ಡಿ ಎಸೆಯೋದು ನೋಡಿದೆ. ಇದೆಲ್ಲಾ ನಿನ್ನ ಜಗಳಕ್ಕೆ ಕಾರಣ ಆಗಿದ್ದು ಅಂತಾ ಮನಸಲ್ಲಿ ಅನಕೊಂಡು ಒಳಬಂದು ಶಂಕ್ರಪ್ಪನವರ ನಾನು ಈ ವಾಸ್ತು ಭವಿಷ್ಯಾ ಇತ್ಯಾದಿ ಬಗ್ಗೆ ಓದಕೊಂಡೇನಿ ನಮ್ಮ ಮನಿ ಗುರುಗಳು ಹೇಳ್ತಿದ್ರು ನಿಮ್ಮ ಮನಿ ದೋಷಾ ಇರೋದು ಒಳಗಷ್ಟ ಅಲ್ಲಾ ಹೊರಗು ಐತಿರಿ.... ಸ್ವಾಮಿಗೋಳ ಏನು ಅಂದಿಲ್ಲ ಏನರಿ...? ಕುತೂಹಲದಿಂದ ಸಾಹುಕಾರ ನನ್ನೆ ಗಮನಿಸ್ತಾ .... ಇಲ್ಲರಿ ಹಿತ್ತಲಕಡೆ ಮುಂದಿನ ಬಾಗಿಲ ಕಡೆ ಹೋಗಿದ್ದರಿ ಆದ್ರ ಯಾವುದೋ ಫೋನ ಬಂತು ಹಂಗ ಮಾತಾಡ್ತಾ ಒಳಗ ಬಂದರಿ... ಅಂದ್ರು... ನೋಡ್ರಿ ಶಂಕ್ರಪ್ಪನವರ ಒಳಗಿನಿಂದ ಹೇಗೆ ದೋಷಾ ಐತ್ಯೋ ಹಾಗೆ ಹೊರಗು ಐತ್ರಿ ಹಿತ್ಲದಾಗಿನ ಬಾತರೂಮ್ ನೀರು ಪಾತ್ರೆ ತೊಳೆದ ನೀರು ಕಸಾಮುಸರಿ ಒಗಿತಿರಿಲಾ ಅದು ನಿಮ್ಮ ಮನೆಯವರ ಆರೋಗ್ಯ ಕೆಡಿಸುವುದರ ಜೊತೆ ಜಗಳಾ ಮತ್ತು ಅಶಾಂತಿ ಹರಡ್ತದ. ಆದರಿಂದ ಋಣಾತ್ಮಕ ಜಾಸ್ತಿ ಇದೆರಿ ಮೊದಲ ಅದನ್ನ ಸುದ್ಧ ಮಾಡಿ ನೋಡ್ರಿ ಆರಾಮ ಇರ್ತಿರಿ ಅಂತಾ ಒಂದಿಷ್ಟು ಉದಾಹರಣೆಗಳ ಕೊಟ್ಟು ತಲೆಲಿ ಹುಳಾ ಬಿಟ್ಟೆ.. ಅಲ್ಲಿಂದ ಎದ್ದು ಮನೆಗೆ ಬಂದೆ. ಮರುದಿನ ಹನುಮಂತ ಧನ್ಯಾರ ಸಾಹುಕಾರ ಮನಿಮುಂದ ಹಿಂದ ಎಲ್ಲಾ ಸ್ವಚ್ಛ ಮಾಡಿಸಿ ಸ್ವಂತ ಖರ್ಚಿನಾಗ ರಸ್ತಾ ಮಾಡಸಾತನರಿ. ನಿನ್ನೆ ಅಷ್ಟ ಕೂಗಾಡಿದ್ದಾ ಇವತ್ತ ಬೆಳಿಗ್ಗೆನೆ ಜೆಸಿಬಿಯಿಂದ ಸ್ವಚ್ಛ ಮಾಡಿಸಿ ರಸ್ತಾಕ ಮಣ್ಣ ಒಗಸಾತನರಿ ಅಂದ. ಅಂತೂ ನನ್ನ ವಾಸ್ತು ದೋಷ ಪರಿಹಾರ ಮಾಡಿಸ್ತು. ಹೀಗಾದ್ರು ಬುದ್ಧಿ ಬಂತಲ್ಲ ಖುಷಿ ಪಟ್ಟೆ.

ನಿಜ ಇದು ಕೇವಲ ಕಥೆಯಾದರೂ ನಮ್ಮ ಮನೆಯ ಸುತ್ತಮುತ್ತಲು ಸ್ವಚ್ಛವಾಗಿದ್ದಾಗಲೆ ನಮಗೆ ಆರೋಗ್ಯ ಊರಿಗೂ ಆರೋಗ್ಯ. ನಿಮ್ಮ ಮನೆಯ ಹಿಂದೆ ಮುಂದೆ ಹೀಗೆ ಗಲೀಜು ಇದ್ದರೆ ಮೊದಲು ಸ್ವಚ್ಛವಾಗಿಡಿ ಇಲ್ಲದಿದ್ದರೆ ವಾಸ್ತು ದೋಷ ನಿಮಗೂ ತಟ್ಟೀತು.

●

ನವರಾತ್ರಿಯ ದಿನ ಕರಾವಳಿಯಲ್ಲಿ ಹೊಸ್ತಿನ ಸಂಭ್ರಮ

✍ **ನವ್ಯಶ್ರೀ ಶೆಟ್ಟಿ**, ದ್ವಿತೀಯ ಬಿ.ಎ. (ಪತ್ರಿಕೋದ್ಯಮ ವಿಭಾಗ)

ನಾಡಹಬ್ಬ ದಸರಾ ಕರುನಾಡಿನ ಅತಿದೊಡ್ಡ ಹಬ್ಬ. ನಾಡಹಬ್ಬ ದಸರಾದಷ್ಟೇ ಅದ್ದೂರಿಯಾಗಿ ಕರಾವಳಿಯ ಬಹುತೇಕ ಮನೆಗಳಲ್ಲಿ ಹೊಸ್ತು ಎನ್ನುವ ವಿಶೇಷ ಆಚರಣೆ ಮಾಡುತ್ತಾರೆ. ಗದ್ದೆಯಲ್ಲಿ ಫಸಲು ಬಿಡಲು ಆರಂಭಿಸಿದ ಭತ್ತದ ತೆನೆಗಳು ಈ ಹಬ್ಬಕ್ಕೆ ಬಹು ಮುಖ್ಯ. ಸಾಂಪ್ರದಾಯಿಕ ಆಚರಣೆಯಲ್ಲಿ ನಡೆಯುವ ಈ ಹೊಸ್ತಿನ ದಿನ ಕುಟುಂಬದ ಸದಸ್ಯರೆಲ್ಲ ಒಗ್ಗೂಡುತ್ತಾರೆ.

ಕರಾವಳಿಯಲ್ಲಿ ನವರಾತ್ರಿಯ ಆ ಒಂಬತ್ತು ದಿನಗಳು ವಿಶಿಷ್ಟ ಆಚರಣೆಗೆ ಸಾಕ್ಷಿಯಾಗುತ್ತದೆ. ಒಂಬತ್ತು ದಿನಗಳು ವಿಶಿಷ್ಟ ಸಂಸ್ಕೃತಿ, ಸಂಪ್ರದಾಯ, ಆಚರಣೆಗೆ ಮುನ್ನುಡಿ ಬರೆಯುತ್ತಾರೆ. ಅದುವೇ ಮೌಲ್ಯಯತ ಸಂಪ್ರದಾಯದ ಹಬ್ಬ ಹೊಸ್ತು. ತುಳು ಮಾತನಾಡುವ ಮಂದಿ ಕೊರಲ್ ಕಟ್ಟುವುದು ಎನ್ನುತ್ತಾರೆ. ಕುಂದಾಪುರ ಭಾಗದಲ್ಲಿ ಹೊಸ್ತು ಎನ್ನುತ್ತಾರೆ. ಕರಾವಳಿಯ ಜನರು ಪಿತೃಪಕ್ಷ ಮುಗಿದ ಬಳಿಕ ಹೊಸ್ತಿನ ಆಚರಣೆ ಮಾಡುತ್ತಾರೆ. ಅದಕ್ಕೂ ಮುನ್ನ ಪ್ರತಿಯೊಬ್ಬರೂ ತಮ್ಮ ಮನೆಗಳನ್ನು ಸ್ವಚ್ಛ ಮಾಡಿ ಕಿಟಕಿ, ಬಾಗಿಲುಗಳಿಗೆ ಶೇಡಿಯನ್ನು ಹಚ್ಚುತ್ತಾರೆ. ಸಾಮಾನ್ಯವಾಗಿ ನವರಾತ್ರಿಯ ದಿನಗಳಲ್ಲಿ ಯಾವುದಾದರು ಒಂದು ದಿನ ಹೊಸ್ತಿನ ಆಚರಣೆ ಮಾಡುತ್ತಾರೆ.

ಹೊಸ್ತಿನ ದಿನ ಬೆಳಗಿನ ಜಾವ ನಸುಕಿನಲ್ಲಿ ಗದ್ದೆಗೆ ಹೋಗಿ ಕದಿರನ್ನು ತಂದು, ಮನೆಯ ಅಂಗಳದಲ್ಲಿ ಇಟ್ಟು, ಮುಳ್ಳು ಸೌತೆ, ತೆಂಗಿನ ಸಾಂತೆ, ಮಾವು ಮತ್ತು ಹಲಸಿನ ಎಲೆ, ಹಲ್ಕತ್ತಿಯನ್ನು ಹರಿವಾಣದಲ್ಲಿಟ್ಟುಕೊಂಡು ಮನೆಯ ಯಜಮಾನ ತಲೆಗೆ ಮುಂಡಾಸು ಕಟ್ಟಿಕೊಂಡು ಜಾಗಂಟೆ ಬಾರಿಸುತ್ತಾ ಕದಿರನ್ನು ಪೂಜೆ ಮಾಡುತ್ತಿರುತ್ತಾರೆ. ಗದ್ದೆಯಿಂದ ಕದಿರನ್ನು ತರುವಾಗ ತಮ್ಮ ಮನೆಯ ಕದಿರನ್ನು ತೆಗೆದುಕೊಂಡು ಬರುವಂತಿಲ್ಲ. ಬೇರೆಯವರ ಮನೆಯ ಕದಿರನ್ನು ಅವರಿಗೆ ಗೊತ್ತಾಗದ ರೀತಿಯಲ್ಲಿ ತೆಗೆದುಕೊಂಡು ಬರಬೇಕು. ಬಹುತೇಕರ ಮನೆಯಲ್ಲಿ ಇದೇ ರೀತಿ ಆಚರಿಸುತ್ತಾರೆ. ಗದ್ದೆಗಳಿರದ ಮನೆಯವರು ಊರಿನ ದೇವಸ್ಥಾನಗಳಲ್ಲಿ ಕೊಡುವ ಕದಿರನ್ನು ತಂದು ಕಟ್ಟುತ್ತಾರೆ.

ಮನೆಯಲ್ಲಿ ಕದಿರನ್ನು ತಂದು ಕಟ್ಟುವ ಸಮಯದಲ್ಲಿ ಮನೆಯ ಯಜಮಾನನನ್ನು ಮನೆಯ ಹೆಣ್ಣುಮಗಳು ಕಾಲು ತೊಳೆದು ಒಳಗೆ ಬರಮಾಡಿಕೊಳ್ಳುತ್ತಾಳೆ. ತದನಂತರ ಮನೆಯ ಯಜಮಾನ ಮನೆಯ ಕಿಟಕಿ, ಬಾಗಿಲು, ವಾಹನ, ಮೋಟಾರ್ ಸೇರಿದಂತೆ ಮನೆಯ ಉಪಕರಣಗಳಿಗೆ ಕದಿರು ಕಟ್ಟುತ್ತಾನೆ. ಇದು ಹೊಸ್ತಿನ ದಿನದ ಆರಂಭದ ಸಂಪ್ರದಾಯ.

ನಂತರ ಆರಂಭವಾಗುವುದೇ ಮಧ್ಯಾಹ್ನದ ವಿಶೇಷ ಭೋಜನದ ತಯಾರಿ ಕಾರ್ಯಕ್ರಮ. ಅಂದಿನ ದಿನ ಒಂಬತ್ತು ವಿಧದ ಪಲ್ಯ ಮಾಡುವ ಪದ್ಧತಿ ರೂಢಿಯಲ್ಲಿದೆ. ಕೆಸುವಿನ ದಂಟು ಹೊಸ್ತಿನ ಅಡುಗೆಯಲ್ಲಿ ಇರಲೇಬೇಕಾದ ಖಾದ್ಯ. ಕೆಲವರು ತಮ್ಮ ಅನುಕೂಲಕ್ಕೆ ತಕ್ಕಂತೆ ಖಾದ್ಯಗಳ ಸಂಖ್ಯೆಯಲ್ಲಿ ಏರಿಕೆ, ಇಳಿಕೆ ಮಾಡಿಕೊಳ್ಳುತ್ತಾರೆ. ಬೇರೆ ಬೇರೆ ತರಕಾರಿಯ ಪಲ್ಯ, ಹಪ್ಪಳ, ಕೊಸುಂಬರಿ, ಉಪ್ಪಿನಕಾಯಿ, ಅನ್ನ, ಸಾರು, ಹುಳಿ, ಪಾಯಸ, ಮಜ್ಜಿಗೆ ಇವು ಅಂದಿನ ಊಟದ ಮೆನು. ಹೆಚ್ಚಾಗಿ ಊರಿನ ಎಲ್ಲಾ ಮನೆಗಳಲ್ಲಿ ಹೊಸ್ತನ್ನು ಮಾಡುತ್ತಾರೆ. ದೂರದೂರಿನ ಸಂಬಂಧಿಕರು ಬರುತ್ತಾರೆ.

ಹೊಸ್ತಿನ ದಿನ ಮನೆಯ ಸೊಸೆಗೆ ಹೆಚ್ಚಿನ ಆದ್ಯತೆ. ಆಕೆ ಮಾವ, ಗಂಡ, ಹಿರಿಯರ ಕಾಲಿಗೆ ನಮಸ್ಕರಿಸಿ ಮನೆಯ ಹಿರಿಯರ ಬಳಿ ಹೊಸ್ತು ಊಟ ಮಾಡುತ್ತೇನೆ ಎಂದು ಹೇಳುವ ಪದ್ಧತಿ ರೂಢಿಯಲ್ಲಿದೆ. ಹೊಸದಾಗಿ ಮದುವೆಯಾದ ಜೋಡಿಗಳಿಗೆ ಹೆಣ್ಣಿನ ಮನೆಯಿಂದ ಸಿಹಿ ತಿಂಡಿ ಸೇರಿದಂತೆ ವಿವಿಧ ಉಡುಗೊರೆಗಳ ಹೊರೆ ಕೊಡುವ ಪದ್ಧತಿ ಇದೆ. ಹಾಲಿಗೆ ಭತ್ತ ಸುಲಿದು ಹಾಕಿದ ಮಿಶ್ರಣವನ್ನು ಊಟದ ಮಧ್ಯೆ ಸೇವಿಸಿದರೆ ಹೊಸ್ತಿನ ಊಟ ಪೂರ್ಣ. ಊಟ ಮುಗಿದ ಬಳಿಕ ಎಲೆ ಅಡಿಕೆ ತಿನ್ನುವುದು, ಮನೆಯ ಗದ್ದೆಗಳತ್ತ ಕಣ್ಣಾಯಿಸುವುದು ವಾಡಿಕೆ. ಒಂದೇ ದಿನ ಏಳು ಮನೆಯಲ್ಲಿ ಊಟ ಮಾಡಿದರೆ ಒಳ್ಳೆಯದು ಎನ್ನುವ ನಂಬಿಕೆ ಕೂಡಾ ಇದೆ.

ಸಂಪ್ರದಾಯದ ಆಚರಣೆಯಲ್ಲಿ ಆರಂಭವಾದ ಹೊಸ್ತು, ಸಂಬಂಧಿಕರನ್ನು ಒಗ್ಗೂಡಿಸುವ, ಸಂಬಂಧಗಳನ್ನು ಗಟ್ಟಿಗೊಳಿಸುವ ಆಚರಣೆಯಾಗಿದೆ. ಅದಕ್ಕಾಗಿ ಕರಾವಳಿಯ ಜನ ದಸರಾ ಹಬ್ಬಕ್ಕೆ ಕಾತುರದಿಂದ ಕಾಯುತ್ತಾರೆ.

●

ಕುಂದಾಪುರದಲ್ಲಿ 'ಅಜ್ಜಿ' ಎನ್ನುವ ವಿಶೇಷ ಆಚರಣೆ

✍ **ನವ್ಯಶ್ರೀ ಶೆಟ್ಟಿ**, ದ್ವಿತೀಯ ಬಿ.ಎ. (ಪತ್ರಿಕೋದ್ಯಮ ವಿಭಾಗ)

ಅಜ್ಜಿ ಎಂದಾಗ ನಮಗೆಲ್ಲ ಸಾಮಾನ್ಯವಾಗಿ ನಮ್ಮ ಅಜ್ಜಿ ನೆನಪಾಗುತ್ತಾರೆ. ಆದರೆ ಕುಂದಾಪುರ ಭಾಗದಲ್ಲಿ ಅಜ್ಜಿ ಎನ್ನುವ ವಿಶೇಷ ಆಚರಣೆಯಿದೆ. ಈ ಆಚರಣೆ ನಡೆಯುವುದು ಕುಂದಾಪುರದ ಆಡು ಭಾಷೆಯಲ್ಲಿ ಹೇಳುವ ಸ್ವಾಣಿ ತಿಂಗಳಿನಲ್ಲಿ. ಅಜ್ಜಿ ದಿನದ ಆಚರಣೆ, ಖಾದ್ಯಗಳು ವಿಶೇಷ. ಕುಂದಾಪುರ ಕನ್ನಡದಲ್ಲಿ ವರ್ಷದ 12 ತಿಂಗಳಿಗೂ ಬೇರೆ ಬೇರೆ ಹೆಸರಿದೆ. ಅವುಗಳಲ್ಲಿ ಸ್ವಾಣಿ ತಿಂಗಳು ಕೂಡ ಒಂದು. ಈ ತಿಂಗಳು ಸಾಮಾನ್ಯವಾಗಿ ಆಗಸ್ಟ್ ತಿಂಗಳ ಅಂತ್ಯದಲ್ಲಿ ಅಥವಾ ಸೆಪ್ಟೆಂಬರ್ ತಿಂಗಳ ಆರಂಭದಲ್ಲಿ ಪ್ರಾರಂಭ. ಕುಂದಾಪುರದಲ್ಲಿ ಅಜ್ಜಿ ಮಾಡುವ ದಿನಗಳಲ್ಲಿ ಹೊಸ್ತಿಲ ಪೂಜೆ ಮಾಡುತ್ತಾರೆ. ಸ್ವಾಣಿ ತಿಂಗಳ ಮೊದಲ ದಿನದಿಂದ ಆರಂಭವಾಗುವ ಹೊಸ್ತಿಲ ಪೂಜೆ ಅದರ ಅಂತ್ಯದವರೆಗೆ ಮಾಡುತ್ತಾರೆ. ಆದರೆ ಹೊಸ್ತಿಲ ಪೂಜೆ ಕೊನೆಯದಾಗಿ ಮಾಡುವ ದಿನ ಅಜ್ಜಿ ದಿನ ಎಂದರ್ಥ. ಆ ದಿನ ಬೆಳಿಗ್ಗೆ ಹೊಸ್ತಿಲ ಪೂಜೆ ಮಾಡುವಂತಿಲ್ಲ. ರಾತ್ರಿ ವೇಳೆ ಮಾಡಬಹುದು. ಹೆಣ್ಣು ಮಕ್ಕಳು ಶ್ರದ್ಧೆಯಿಂದ ಮಾಡುತ್ತಾರೆ. ಬೆಳಿಗ್ಗೆ ಬೇಗನೆ ಎದ್ದು ಸ್ನಾನ ಮಾಡಿ ಬಳಿಕ ಹೊಸ್ತಿಲ ಪೂಜೆಗೆ ತಯಾರಾಗುತ್ತಾರೆ. ಸ್ವಾಣಿ ತಿಂಗಳ ಆರಂಭಕ್ಕೆ ಕೆಲ ದಿನಗಳು ಬಾಕಿಯಿರುವಾಗ ಮೊಳಕೆ ಬರಿಸಿದ ಗಿಡ, ಸ್ವಾಣಿ ಹೂವು, ಅರಶಿನ, ಕುಂಕುಮ, ತೇಯ್ದ ಗಂಧ ಹೊಸ್ತಿಲ ಪೂಜೆಯ ವಿಶೇಷ. ಹೊಸ್ತಿಲ ಪೂಜೆ ಮಾಡುವಾಗ ಹೊಸ್ತಿಲಿಗೆ ಯಾವ ರೀತಿ ವಿನ್ಯಾಸ ಮಾಡಬಹುದು ಎನ್ನುವುದೇ ಒಂದು ಆಸಕ್ತಿಯ ವಿಷಯ. ದಿನಕ್ಕೊಂದು ವಿನ್ಯಾಸವನ್ನು ಶೇಡಿಯಿಂದ ಮಾಡುವುದು ಹೆಣ್ಣು ಮಕ್ಕಳಿಗೆ ಇಷ್ಟ. ಮೊಳಕೆ ಬರಿಸಿದ ಕಾಳನ್ನು ಕೊಳ್ ಎಂದು ಕರೆಯುತ್ತಾರೆ. ಹೊಸ್ತಿಲ ಪೂಜೆಗೆ ಕೊಳ್ ಹೂವು, ಸ್ವಾಣಿ ಹೂವು, ಮಾವಿನ ಎಲೆ, ಅರಶಿನ ಹಚ್ಚಿ ಹೊಸ್ತಿಲನ್ನು ನಮಿಸಿ ಪೂಜೆ ಮಾಡುತ್ತಾರೆ. ತುಳಸಿ ಕಟ್ಟೆಯಿಂದ ಆರಂಭವಾಗುವ ಪೂಜೆ ಪ್ರತಿ ಹೊಸ್ತಿಲಿಗೂ ನಡೆಯುತ್ತದೆ.

ಯಾರು ಹೊಸ್ತಿಲ ಪೂಜೆ ಮಾಡುತ್ತಾರೋ ಅವರು ಅಜ್ಜಿ ಎಂದರ್ಥ. ಯಾವ ವಯಸ್ಸಿನ ಹೆಣ್ಣು ಮಕ್ಕಳೂ ಕೂಡ ಹೊಸ್ತಿಲ ಪೂಜೆ ಮಾಡಬಹುದು. ಬಾಲ್ಯದ ದಿನಗಳಲ್ಲಿ ಯಾರ ಮನೆಯಲ್ಲಿ ಯಾರು ಅಜ್ಜಿ ಎನ್ನುವುದೇ ನಮ್ಮ ಕುತೂಹಲದ ವಿಷಯ. ಹೊಸ್ತಿಲ ಪೂಜೆ ದಿನ ರಾತ್ರಿ ಹಣತೆಯಲ್ಲಿ ದೇವರಿಗೆ ದೀಪ ತೋರಿಸಬೇಕು. ಅಜ್ಜಿ ದಿನ ಕೋಳಿ ಸಾರು, ಉದ್ದಿನ ದೋಸೆ ಖಾಯಂ. ಕೆಲವರ ಮನೆಯಲ್ಲಿ ಕೆಸುವಿನ ಪಲ್ಯ, ಬಸಳೆ ಕೂಡ ಮಾಡುತ್ತಾರೆ. ಅಜ್ಜಿಯ ಇನ್ನೊಂದು ವಿಶೇಷ ಉಂಡ್ಲು ಕಾಯಿ. ಕುಚಲಕ್ಕಿ, ಬೆಲ್ಲಿಗೆಯಿಂದ ತಯಾರಿಸಿದ ಈ ತಿಂಡಿಯನ್ನು ಅಜ್ಜಿ ದಿನ ಮಾತ್ರ ಮಾಡುವುದು ಬೇರೆ ದಿನ ಮಾಡುವುದಿಲ್ಲ.

ಹೊಸ್ತಿಲ ಪೂಜೆ ಮಾಡಿ ಅಜ್ಜಿ ಎಂದು ಕರೆಸಿಕೊಳ್ಳುವವರಿಗೆ ಅಜ್ಜಿ ದಿನ ವಿಶೇಷ ಆದ್ಯತೆ. ಆದರೆ ಅಜ್ಜಿಯನ್ನು ಓಡಿಸುವುದು ಆ ದಿನದ ವಿಶೇಷ. ಅಜ್ಜಿ ದಿನ ಮಾಡಿದ ಎಲ್ಲ ಖಾದ್ಯಗಳನ್ನು ಹೊಸ್ತಿಲ ಮೇಲಿಟ್ಟು ದೀಪದಾರತಿಯನ್ನು ಹೊಸ್ತಿಲಿಗೆ ತೋರಿಸುತ್ತಾರೆ. ದೀಪವನ್ನು ಹೊಸ್ತಿಲ ಮೇಲೆಯಿಟ್ಟು ಪೂಜೆ ಮಾಡಿದ ಬಳಿಕ ಬೇರೆಯಾಗಿ ಊಟಕ್ಕೆ ಅವಕಾಶ. ಒಮ್ಮೆಯೂ ಅಜ್ಜಿಯಾಗದ ನಾನು, ರಾತ್ರಿ ಹೊಸ್ತಿಲ ಪೂಜೆ ಎಷ್ಟು ಬೇಗ ಆಗುತ್ತದೆ ಎಂದು ಕಾಯುವುದು ಇಂದಿಗೂ ರೂಢಿ. ಹೊಸ್ತಿಲ ಪೂಜೆ ಆಗುವುದರ ಒಳಗೆ ಒಂದೆರಡು ದೋಸೆ ಗುಟ್ಟಾಗಿ ಹೊಟ್ಟೆ ಸೇರುತಿತ್ತು.

ಕುಂದಾಪುರದಲ್ಲಿ ಇಂದಿಗೂ ಬಹುತೇಕ ಮನೆಯಲ್ಲಿ ಈ ಸಂಸ್ಕೃತಿಯನ್ನು ಮುಂದುವರೆಸಿಕೊಂಡು ಬಂದಿದ್ದಾರೆ. ಬೇರೆ ಬೇರೆ ಮನೆಯಲ್ಲಿ ಆಚರಿಸುವ ವಿಧಾನಗಳು ಭಿನ್ನವಿರಬಹುದು. ಆದರೆ ಅಜ್ಜಿ ದಿನದ ಕಾಯುವಿಕೆ, ಅಜ್ಜಿ ಯಾರು ಎನ್ನುವ ಕುತೂಹಲ ಪ್ರತಿ ಅಜ್ಜಿಗೂ ಮುಂದುವರಿಕೆ.

●

ಜ್ಞಾನದಿಂದಲೇ ಇಹವು, ಜ್ಞಾನದಿಂದಲೇ ಪರವು, ಜ್ಞಾನವಿಲ್ಲದಲೆ ಸಕಲವೂ
ತನಗಿದ್ದು ಹಾನಿ ಕಾಣಯ್ಯ – **ಸರ್ವಜ್ಞ**

ಹೆಣ್ಣು

✍ **ಕೆ. ಈ. ದಿಶಾ ಭಟ್**, ಪ್ರಥಮ ಬಿ.ಕಾಂ.

'ಹೆಣ್ಣು' ಎಂಬ ವಿಷಯವನ್ನು ತೆಗೆದುಕೊಂಡಾಗ ನಾವು ಅನೇಕ ರೀತಿಯಲ್ಲಿ ವಿವರಿಸಬಹುದು. ಹೆಣ್ಣು ತಾಯಿಯಾಗಿ, ಸ್ನೇಹಿತೆಯಾಗಿ, ಅಕ್ಕ-ತಂಗಿಯಾಗಿ, ಸತಿಯಾಗಿ, ಶಿಕ್ಷಕಿಯಾಗಿ – ಹೀಗೆ ಅನೇಕ ಸ್ಥಾನಗಳನ್ನು ಪಡೆದುಕೊಂಡಿದ್ದಾರೆ. 'ಮಾತೃ ದೇವೋಭವ ', ತಾಯಿಯೇ ದೇವರು ಎಂಬ ಮಾತಿದೆ. ಇಡೀ ಜಗತ್ತು ತಲೆಬಾಗುವ ಸ್ಥಾನದಲ್ಲಿ ತಾಯಿ ನಿಂತಿದ್ದಾಳೆ. ಪ್ರತಿ ನೋವನ್ನು ತಾನೇ ಸಹಿಸಿಕೊಂಡು ಹಸನ್ಮುಖಿಯಾಗಿ ಇರುತ್ತಾಳೆ.

ಹಿಂದೆ ಪುರುಷ ಪ್ರಧಾನ ಸಮಾಜವಿತ್ತು. ಆಗ ಸ್ತ್ರೀಯರನ್ನು ಅತ್ಯಂತ ಶೋಚನೀಯವಾಗಿ ನೋಡಲಾಗುತ್ತಿತ್ತು. ಮಾತ್ರವಲ್ಲದೆ ದೌರ್ಜನ್ಯ ಕೂಡ ಮಾಡಲಾಗುತ್ತಿತ್ತು. ಆಕೆ ಏನಿದ್ದರೂ ನಾಲ್ಕು ಗೋಡೆಗಳ ಮಧ್ಯದಲ್ಲಿಯೇ ತನ್ನ ಬದುಕನ್ನು ನಡೆಸಬೇಕಾಗಿತ್ತು. ಸಮಾಜದಲ್ಲಿ ಅವಳಿಗೆ ಮಾತ್ರವಲ್ಲದೆ ಅವಳ ಭಾವನೆಗಳಿಗೂ ಬೆಲೆ ಇಲ್ಲದಂತಾಗಿತ್ತು.

ಆದರೆ ಕಾಲಕ್ರಮೇಣ ಹೆಣ್ಣು ತನ್ನ ಸ್ಥಾನಮಾನ ಹೆಚ್ಚಿಸಿಕೊಂಡು ಬಂದಿರುವುದನ್ನು ಕಾಣಬಹುದು. ಸಮಾಜದಲ್ಲಿ ಪುರುಷರಂತೆ ನಾನು ಇರಬಲ್ಲೆ ಎಂದು ತೋರಲು ಮುಂದಾದಳು. ಹೆಣ್ಣು ಎಲ್ಲಾ ಕ್ಷೇತ್ರಗಳಲ್ಲೂ ತನ್ನ ಇರುವಿಕೆಯನ್ನು ತೋರಿಸಿಕೊಟ್ಟರೂ ಪುರುಷರಿಗೆ ಸರಿಸಮಾನವಾಗಿ ನಿಂತಿದ್ದರೂ ಕೂಡ ಕೆಲವೊಂದು ಸಂದರ್ಭದಲ್ಲಿ ಈ ಸಮಾಜ ಅಥವಾ ಸಮಾಜದಲ್ಲಿರುವ ಕೆಲವು ವ್ಯಕ್ತಿಗಳು ಆಕೆಯನ್ನು ತಲೆತಗ್ಗಿಸುವಂತೆ ಮಾಡುತ್ತಿರುವುದು ನಿಜಕ್ಕೂ ವಿಪರ್ಯಾಸದ ಸಂಗತಿಯಾಗಿದೆ.

'ಹೆಣ್ಣು ಸಮಾಜದ ಕಣ್ಣು ' ಎಂಬ ಮಾತಿದೆ. ಆದರೆ ಇಂದು ಅವಳ ಸ್ಥಿತಿ ಶೋಚನೀಯವಾಗಿದೆ. ಯಾವ ಹೆಣ್ಣನ್ನು ಯಾವತ್ತೂ ಕೀಳಾಗಿ ಕಾಣಬಾರದು. ಯಾಕೆಂದರೆ ಒಂದು ಹೆಣ್ಣು ಹಿಂಸೆಯಿಂದ ಕಣ್ಣೀರು ಹಾಕಿದರೆ ಆ ಕಣ್ಣೀರಿನ ಶಾಪ ತಟ್ಟದೇ ಬಿಡುವುದಿಲ್ಲ. ಹೆಣ್ಣನ್ನು ತಾಯಿ ಎಂದು ಕರೆದಿದ್ದೇವೆ. ಅಂತಹ ತಾಯಿಗೆ ಯಾರೂ ಮೋಸ ಮಾಡಬಾರದು. ಹೆಣ್ಣಿನ ಭಾವನೆ ಅರ್ಥ ಮಾಡಿಕೊಂಡು ಅವಳಿಗೆ ಪ್ರತಿ ಸಮಯದಲ್ಲೂ ಬೆಂಬಲ ನೀಡಬೇಕು ಎನ್ನುವುದು ನನ್ನ ಮನದ ಮಾತು.

●

ಕನ್ನಡ ಕವಿತೆ

ನಾನು ಸುಟ್ಟ ಕತ್ತಲೆಯಾಗಿದ್ದಾಗ ನೀನು
ಶಾಂತಗೊಳಿಸುವ ಚಂದ್ರ...
ನಾನು ಕಾಯುವ ಕ್ಷಣವಾಗಿದ್ದಾಗ ನೀನು
ಮಳೆ ತುಂಬಿದ ಮೋಡ...
ನಾನು ತಲುಪುವ ದಾರಿಯಲ್ಲಿ
ಹೃದಯವನ್ನು ಹೃದಯಕ್ಕೆ ತರುವಂತಹ...
ಆ ಹೃದಯದ ದಾರಿ ನಿನ್ನ ಹೆಸರಿನಲ್ಲಿದೆಯೇ?

ನಾನು ಹಸಿರಾಗಿದ್ದಾಗ ನೀನು ಮನಸು ತುಂಬಿದ ಉಸಿರು
ನಾನು ಕವಿತೆಯಾಗಿದ್ದಾಗ ನೀನು ಆ ಕವಿತೆಯ ಬರಹ...
ಕನಸಿನಲ್ಲೂ ಜೊತೆಯಲ್ಲಿ ಇರುವಂತಹ
ಆ ಹೃದಯದ ಕನಸು ನಿನ್ನ ಹೆಸರಿನಲ್ಲಿದೆಯೇ?

ನಾನು ಜೊತೆಯಾಗಿದ್ದಾಗ ನೀನು ಆ ಜೊತೆಗೆ ಸಂಗಾತಿ...
ನಾನು ಗಾನವಾಗಿದ್ದಾಗ ನೀನು ಆ ಗಾನದ ಸ್ವರನುಡಿ...
ನೋವಿನಲ್ಲೂ ನಗುವಿನಂತೆಯೇ ಇರುವಂತಹ
ಆ ಹೃದಯದ ಸ್ವರನುಡಿ ನಿನ್ನ ಹೆಸರಿನಲ್ಲಿದೆಯೇ?

✍ **ಅನನ್ಯಾ ಶೆಟ್ಟಿಗಾರ್**, ಪ್ರಥಮ ಪಿ.ಯು.ಸಿ.

ವೃದ್ಧಾಶ್ರಮ ಬೇಕೆ?

✍ **ಷಣ್ಮುಖ ಅತ್ರಿ ಎಲ್. ಪಟ್ಲ,** ದ್ವಿತೀಯ ಬಿ.ಎ., ಪತ್ರಿಕೋದ್ಯಮ ವಿಭಾಗ

ಈ ಪ್ರಪಂಚದಲ್ಲಿಯೇ ಅದ್ಭುತ ಬುದ್ಧಿಶಕ್ತಿ ಹೊಂದಿರುವ ಏಕೈಕ ಜೀವಿ ಮಾನವ. ಉಳಿದ ಎಲ್ಲಾ ಪ್ರಾಣಿಗಳಿಗಿಂತ ನಿಧಾನವಾಗಿ ಮೇಲೇಳುವ ಈತನ ಮನೋಪ್ರವೃತ್ತಿಗಳು ಒಂದು ದೃಷ್ಟಿಯಲ್ಲಿ ವಿಚಿತ್ರವೇ ಸರಿ. ತಾನು ಬಯಸಿದ್ದು, ಬೇಡಿದ್ದು ಪಡೆಯುವ ಹಠ ತೊಟ್ಟಿದ್ದು, ನನ್ನದಾಗಬೇಕೆಂದು ಸಾಧಿಸುವ ಛಲ ಸರಿಗಟ್ಟಲು ಬೇರಾರಿಂದಲೂ ಸಾಧ್ಯವಿಲ್ಲ. ಮನುಷ್ಯನ ಜೀವನದ ನಾಲ್ಕು ಹಂತಗಳು ಬಾಲ್ಯ, ಬ್ರಹ್ಮಚರ್ಯ, ಗೃಹಸ್ಥ, ವಾನಪ್ರಸ್ಥ. ಈ ಜೀವನ ಪದ್ಧತಿಯನ್ನು ಅನುಸರಿಸಬೇಕೆಂಬ ಚಿಂತನೆ ಬಹಳ ಹಳೆಯದು.

ಇಂದಿನ ಜೀವನ ಶೈಲಿಯಲ್ಲಿ ವೃದ್ಧಾಪ್ಯ ಎಂಬುವುದು ಒಂದು ಶಾಪ ! ವಿಚಿತ್ರವೆಂದರೆ ತನ್ನ ಮಕ್ಕಳನ್ನು, ಹೊತ್ತು ಹೆತ್ತು, ಬೆಳೆಸಿ ಪೋಷಿಸಿ ಲಾಲಿಸಿದ ತಂದೆ-ತಾಯಿಗಳು ಇಂದು ಬೀದಿ ಪಾಲಾಗುತ್ತಿರುವುದು ಕಟು ಸತ್ಯ. ತನ್ನ ಮುದ್ದಿನ ಮಕ್ಕಳಿಗೆ ಬೇಡದ ಹೊರೆಯಾಗಿ ಒಳಗಿದ್ದು ಹೊರಗಿನವನಾಗಿ ಅಥವಾ ಮನೆ-ಮನದಿಂದ ದೂರವಾಗಿ ಬಾಳುವ ದುಸ್ಥಿತಿ ಯಾರಿಗೂ ಬರಬಾರದು. ಇಂದಿನ ಸಮಾಜಕ್ಕೆ ಇಂತಹ ಬದುಕೊಂದು ಕಪ್ಪು ಚುಕ್ಕೆಯೆಂದರೆ ಅತಿಶಯೋಕ್ತಿಯಲ್ಲ. ಇದರ ಬಗ್ಗೆ ಬೌದ್ಧಿಕವಾಗಿ, ಆರ್ಥಿಕವಾಗಿ, ಸಾಮಾಜಿಕವಾಗಿ ಬೆಳೆದಿರುವ ಮಂದಿ ಚಿಂತಿಸಬೇಕಾದದ್ದು ತೀರಾ ಅಗತ್ಯ.

ಯೌವ್ವನದಲ್ಲಿ ಅಧಿಕಾರ, ಧನ-ಕನಕಾದಿಗಳು, ನೆರೆಕರೆಯವರು, ನೆಂಟರಿಷ್ಟರು, ಬಂಧು-ಬಾಂಧವರು, ಪತಿ, ಪತ್ನಿ ಮಕ್ಕಳು ಎಲ್ಲರೂ ನಮ್ಮನ್ನು ಓಲೈಸುವವರು ಎಂದರೆ ತಪ್ಪಲ್ಲ. ಆದರೆ ಮುಂದೊಂದು ದಿನ ನಮ್ಮಲ್ಲಿ ಹರಿಯುವ ಬಿಸಿ ನೆತ್ತರು ತಣಿಯುತ್ತಿದ್ದಂತೆ ನಿಧಾನವಾಗಿ ನಮ್ಮ ಸುತ್ತಮುತ್ತಲಿನಿಂದ ಬರುವ ಪ್ರತಿಕ್ರಿಯೆಗಳು ನಮ್ಮನ್ನು ದೈಹಿಕವಾಗಿ, ಮಾನಸಿಕವಾಗಿ ಮುಪ್ಪಿನೆಡೆಗೆ ಅನಿವಾರ್ಯವಾಗಿ ಸಾಗಿಸುತ್ತವೆ ಎಂಬುದನ್ನು ನಾವು ಒಪ್ಪಿಕೊಳ್ಳಬೇಕು.

ಒಂದೊಮ್ಮೆ ಕೂಡು ಕುಟುಂಬ ಎಂದರೆ ಅವಿಭಕ್ತ ಕುಟುಂಬವಾಗಿದ್ದ ನಮ್ಮ ಮನೆತನಗಳು ಇಂದು ಒಡೆದ ಕನ್ನಡಿಯಾಗಿದೆ. ಆಧುನಿಕತೆ ಕುಟುಂಬ ವಿಭಜನೆಯಾಗಿ ವಿಭಕ್ತ ಕುಟುಂಬ ವ್ಯವಸ್ಥೆಗೆ ಕಾರಣವಾಗಿದೆ. ಮುಂದೊಂದು ದಿನ ಮನೆಯಲ್ಲಿ ನಾವು ಒಬ್ಬಂಟಿಯಾಗಿ ಇರಬೇಕಾಗಬಹುದು. ಇದರಿಂದ ಮೈಕ್ರೋ ಕುಟುಂಬಕ್ಕೆ ಹೊಸ ಅರ್ಥ ಬರುವುದು ಖಂಡಿತ. ಇದಕ್ಕೆ ಬೇರಾರೂ ಕಾರಣರಲ್ಲ, ನಾವೇ ಹೊಣೆಗಾರರು. ಎಷ್ಟು ವಿಚಿತ್ರ ಸಂಬಂಧಗಳು ಆಂಟಿ, ಅಂಕಲ್ ಎಂದು ತನ್ನ ಸಂಬಂಧಿಕರನ್ನು, ಕೆಲಸದವರನ್ನು ಏಕಪದದಲ್ಲಿ ಕರೆದುಕೊಳ್ಳುವ ನಮ್ಮ ಕುಟುಂಬ ಜೀವನ ವಿಷಮಸ್ಥಿತಿಯನ್ನು ತಲುಪಿದೆ. ಅಳಿವು ಉಳಿವಿನ ವ್ಯವಸ್ಥೆ ಇಂದಿನ ಯುವ ಜನಾಂಗದ ಕೈಯಲ್ಲಿದೆ ಎಂದರೆ ಆಶ್ಚರ್ಯವಲ್ಲ.

ಪ್ರಪಂಚದ ನಾಗರಿಕತೆಗಳಲ್ಲಿ ಉಚ್ಚ ಸ್ಥಿತಿಯಲ್ಲಿ ನಮ್ಮ ಬದುಕನ್ನು ಕಟ್ಟಿಕೊಂಡವರು ನಾವು. ಆದರೆ ಕಾಲದ ಕೈವಶವಾದ ನಾವು ಏನು ಮಾಡಬಲ್ಲೆವೆಂಬುದರ ಬಗ್ಗೆ ತಲೆಮೇಲೆ ಕೈ ಹೊತ್ತು ಕುಳಿತುಕೊಳ್ಳುವ ಕ್ಷಣ ನಮಗೆ ಬರಲೇಬಾರದು. ಅದಕ್ಕಾಗಿ ಒಂದಿಷ್ಟು ನಮ್ಮ ಹಿಂದು ಮುಂದು ಪರಾಮರ್ಶಿಸಬೇಕು. ಕೂಡು ಕುಟುಂಬಗಳಿಗೆ ಕೊಡಲಿ ಏಟನ್ನು ನೀಡಿದ ಪಾಶ್ಚಾತ್ಯ ಸಂಸ್ಕೃತಿ, ಶೈಕ್ಷಣಿಕ ಮತ್ತು ಸಾಮಾಜಿಕ ವ್ಯವಸ್ಥೆ, ಔದ್ಯೋಗಿಕ ಹಾಗೂ ಆರ್ಥಿಕ ಪ್ರಗತಿಗಳು ಸಾಂಸಾರಿಕ ಸುಖದ ಕಲ್ಪನೆಯನ್ನು ನುಂಗಿ ಹಾಕಿವೆ. ಭಾವನಾತ್ಮಕವಾಗಿ ಯುವ ಜನಾಂಗದವರು ಬೇರೆಯಾಗುತ್ತಿದ್ದಾರೆ ಎಂದರೆ ತಪ್ಪಿಲ್ಲ. ಕೌಟುಂಬಿಕ ವಿಚಾರಧಾರೆಗಳಾದ ಸ್ವಾವಲಂಬನೆ, ಉದ್ಯೋಗ ಬೇಟೆ, ಉನ್ನತ ಶಿಕ್ಷಣ ಹಾಗೂ ಮೇಲ್‌ಸ್ತರದ ಜೀವನಮಟ್ಟ ನಮ್ಮ ಬದುಕಿನ ಹೊಸ ಅಧ್ಯಾಯ ತೆರೆದಿದೆ. ಆದರೆ ಅದರ ಅಡಿಪಾಯವಾದ ನಮ್ಮ ಹಿರಿಯರ ಭಾವನೆ, ನೋವು-ನಲಿವು, ಅನಿಸಿಕೆ, ಬೇಡಿಕೆ, ಬಳಲಿಕೆಗಳ ಬಗ್ಗೆ ತಾಳ್ಮೆಯಿಂದ ಕೇಳಿಸಿಕೊಳ್ಳಲು ನಮಗೆ ಸಮಯವೆಲ್ಲಿದೆ? ಈ ಹೊಂದಾಣಿಕೆ ಶಿಥಿಲಗೊಂಡು ನಮ್ಮ ಸಮಾಜದ ವಯೋವೃದ್ಧರನ್ನು ಹಳೆ ಪೀಠೋಪಕರಣಗಳ ಸಾಲಿಗೆ ತಳ್ಳಿದೆ ಎಂಬುದು ಸತ್ಯ. ಜನರೇಶನ್ ಗ್ಯಾಪ್, ಅಂತಸ್ತು, ಪ್ರತಿಷ್ಠೆ, ಜೀವನಶೈಲಿ, ಸಾಮಾನ್ಯ ಜ್ಞಾನ ಎಂದು ಕರೆಯಲ್ಪಡುವ ಸಣ್ಣ ಪುಟ್ಟ ಕಾರಣಗಳು ಮನೆಗಳನ್ನು ಕೆಡಿಸುತ್ತಿವೆ. ತಂದೆ-ತಾಯಿಯರ ಜೊತೆಗೂಡಿ ಆಡುತ್ತಿದ್ದ ಮಕ್ಕಳು ಅಜ್ಜ-ಅಜ್ಜಿಯರ ಮಡಿಲಲ್ಲಿ ನಿದ್ರಿಸುತ್ತಿದ್ದ ಮೊಮ್ಮಕ್ಕಳು ಇಂದು ಬೆಳಗ್ಗಿನಿಂದ ರಾತ್ರಿಯ ತನಕ ಎಜುಕೇಶನ್, ಟಿವಿ, ಮೊಬೈಲ್, ಫೇಸ್ಬುಕ್ ಮೆಸೇಜ್, ವಾಟ್ಸಾಪ್, ಇಂಟರ್ನೆಟ್‌ಗಳಲ್ಲಿ ಕರಗಿ ಹೋಗುತ್ತಿದ್ದಾರೆ. ತಮ್ಮ ಅಮೂಲ್ಯವಾದ ಸಮಯವನ್ನು ವ್ಯರ್ಥ ಮಾಡಿಕೊಳ್ಳುತ್ತಿದ್ದಾರೆ.

ನಾವು ಇವುಗಳ ದಾಸರಾಗುತ್ತಿದ್ದೇವೆ. ಎಳವೆಯಲ್ಲಿ ನಮ್ಮ ಲಾಲನೆ-ಪಾಲನೆ, ಸ್ನಾನ, ಶೌಚಾದಿಗಳನ್ನು ಮಾಡಿಸಿ ನಮ್ಮನ್ನುದ್ಧರಿಸಿದ ಹಿರಿಯ ಚೇತನಗಳ ಜೊತೆ ಅರ್ಧ ಗಂಟೆ ಮಾತನಾಡುವ ಸಮಯ ನಮ್ಮಲ್ಲಿಲ್ಲ. ಸದಾ ಟೆನ್ಶನ್, ಕಿರಿಯರಾದ ನಾವು ಹಿರಿಯರ ಜೊತೆ ನಗುಮೊಗದಿಂದ ಮಾತನಾಡಲು ಹಿಂಜರಿಯುತ್ತೇವೆ.

ಯಾಕೆ ಹೀಗೆ? ಇದರ ಪ್ರಭಾವ ಯಾರ ಮೇಲಾದೀತು? ತನ್ನ ಮನದ ಚಿಂತೆ, ನೋವು, ಖುಷಿಗಳನ್ನು ಹೇಳಿಕೊಳ್ಳಲಾಗದೆ ನಮ್ಮ ಹಿರಿಯರು ಸಂಕಟಪಡುತ್ತಿದ್ದಾರೆ. ವಯಸ್ಸಾದ ಕಾಲದಲ್ಲಿ ದೈಹಿಕ ಅನಾರೋಗ್ಯ ಕಾಡುತ್ತಿರುವ ಇವರು ಅಪ್ರಯೋಜಕರು ಎಂಬ ಹಣೆಪಟ್ಟಿಯೊಂದಿಗೆ ದೂರವಿಡುವ ಮಕ್ಕಳಿಗೆ ಮುಂದೊಂದು ದಿನ ತಾವು ವಯೋವೃದ್ಧರಾಗಿ ಬದುಕಿನಲ್ಲಿ ತಾವು ನಡೆದು ಬಂದ ರೀತಿ ತಮಗಾಗುತ್ತಿರುವ ಅನುಭವಗಳ ಕಹಿಸತ್ಯ ಅರಿವಾಗಲು ಬಹಳ ಸಮಯ ಬೇಕಾಗಲಾರದು. ಹಿರಿಯರ ಸೇವೆಯ ಭಾಗ್ಯ ಎಲ್ಲರಿಗೂ ದಕ್ಕದು. ಅವು ನಮ್ಮ ಮಕ್ಕಳಿಗೆ ದಾರಿದೀಪ. ನಮ್ಮ ಹಿರಿಯರ ಜೊತೆಯ ಪ್ರತಿವರ್ತನೆ ನಮ್ಮ ಮಕ್ಕಳಿಂದ ಪುನರಾವರ್ತನೆಗೊಳ್ಳುತ್ತದೆ ಎಂಬುದಂತೂ ಸತ್ಯ. ನಾವು ಹಿರಿಯರೊಂದಿಗೆ ನಡೆದುಕೊಳ್ಳುವ ಸಕಾರಾತ್ಮಕ ಮತ್ತು ನಕಾರಾತ್ಮಕ ವರ್ತನೆಗಳು ನಮ್ಮ ಮುಂದಿನ ಬದುಕಿನಲ್ಲಿ ಪರಿಣಾಮ ಬೀರಬಹುದೆಂಬ ಭಯದಿಂದಾದರೂ ನಾವು ಹಿರಿಯರನ್ನು ಪ್ರೀತಿಸೋಣ.

ಹಿರಿಯ ಜೀವಗಳ ಬದುಕಿನ ಹಂತಗಳ ಬಗ್ಗೆ ನಾವು ಸ್ವಲ್ಪ ತಿಳಿದುಕೊಂಡರೆ ಒಳ್ಳೆಯದು. 70ರಿಂದ 80ರ ವಯೋಮಾನ ಅತಿ ತೀವ್ರ ಪೂರ್ಣ ಪರಾವಲಂಬಿಗಳು. ಹಾಸಿಗೆ ಹಿಡಿದ ಸ್ಥಿತಿಯ ಇವರು ತಮ್ಮ ನಿತ್ಯಕರ್ಮಗಳಿಂದ ಆಹಾರ ಸೇವನೆಗಳ ತನಕ ಅವಲಂಬಿತರು. ಇವರ ವರ್ತನೆಗಳು ವಯೋಮಾನಕ್ಕೆ ತಕ್ಕಂತೆ ಇರದೆ ಬಾಲಿಶವಾಗಿರಬಹುದು. 80ರಿಂದ ಮುಂದೆ ಅಥವಾ ಆಕಸ್ಮಿಕ ಘಟನೆಗಳಿಂದ ಇವರು ಇಂತಹ ತೀವ್ರ ಮಾನಸಿಕ ಆಘಾತ ಹಾಗೂ ದೈಹಿಕ ದುಸ್ಥಿತಿ ತಲುಪಿದ್ದಾರೆಂದು ಪೂರ್ವಾಗ್ರಹವಿಲ್ಲದೆ ತಿಳಿಯಬೇಕು. ಇವರ ಜೊತೆ ವಿಶೇಷವಾಗಿ ಪುಟ್ಟ ಮಕ್ಕಳೊಡನೆ ವರ್ತಿಸುವಂತೆ ನಾವು ವ್ಯವಹರಿಸಿ ನಗುಮುಖದಿಂದ ಅವರ ಸೇವೆಯಲ್ಲಿ ತೊಡಗಬೇಕು.

ಕನಿಷ್ಠ ನಮ್ಮ ಹೆತ್ತವರನ್ನು ಬದುಕಿರುವಾಗ ಚೆನ್ನಾಗಿ ನೋಡಿಕೊಳ್ಳೋಣ. ಸತ್ತಮೇಲೆ ಸಾವಿರ ಮಂದಿಗೆ ಊಟ ಹಾಕಿ ಉಪಚಾರ ಮಾಡಿ ಭೇಷ್ ಅನ್ನಿಸಿಕೊಳ್ಳುವುದಕ್ಕಿಂತ ಬದುಕಿರುವಾಗ ಅವರೊಡನೆ ನಗುನಗುತಾ ಬಾಳೋಣ. ಅದರಿಂದ ನಮ್ಮ ಮುಂದಿನ ಪೀಳಿಗೆಯವರು ಚೆನ್ನಾಗಿ ಬದುಕಲು ಬೇಕಾದ ಆಶೀರ್ವಾದ ಪಡೆಯೋಣ.

ತಾವು ಹೆತ್ತ ಮಕ್ಕಳನ್ನು ಬಾಲ್ಯದಲ್ಲಿ ಅಂಗನವಾಡಿಗೆ ಕಳಿಸುವಾಗ ಮಗು ಅಪ್ಪ ಅಮ್ಮ ಯಾವಾಗ ಬಂದು ಕರೆದುಕೊಂಡು ಹೋಗುವಿರಿ ಎಂಬ ಮಗುವಿನ ಮುಗ್ಧ ಮಾತಿಗೆ ಸಂಜೆ ಎನ್ನುವ ಹೆತ್ತವರು, ಕರುಳ ಕುಡಿಗಳ ಒತ್ತಡದಿಂದ ತಾವೇ ಕಟ್ಟಿದ ಮನೆಯಿಂದ ಹೊರ ಹೋಗಲೇಬೇಕಾದ ಪರಿಸ್ಥಿತಿ ಬಂದು ವೃದ್ಧಾಶ್ರಮ ಸೇರುವ ಹೊತ್ತಿಗೆ ಹೆತ್ತವರು ಕೇಳುವ ಇದೇ ಪ್ರಶ್ನೆಗೆ ಅವರ ಉತ್ತರಾಧಿಕಾರಿಗಳು ಯಾವುದೇ ಉತ್ತರವನ್ನು ನೀಡದೆ ಮೌನವಾಗಿ ಬಿಡುತ್ತಾರೆ. ಇಂಥವರಿಗೆ ಛೀಮಾರಿ ಹಾಕಲು ಪದಗಳೇ ಇಲ್ಲ. ಮಾನವೀಯತೆ ಎಲ್ಲಿದೆ? ಎಂಬ ಕಹಿಸತ್ಯ ನಮ್ಮನ್ನು ಪದೇಪದೇ ಕಾಡುತ್ತಿದೆ ಅಲ್ಲವೇ? ಈಗ ನಮಗೆ ''ವೃದ್ಧಾಶ್ರಮ ಬೇಕೇ''? ಎಂಬ ಚಿಂತನೆಯನ್ನು ತಮ್ಮ ಚಿತ್ತಕ್ಕೆ ಬಿಟ್ಟು ನನ್ನ ಮಾತುಗಳನ್ನು ಸಂಪನ್ನಗೊಳಿಸುತ್ತೇನೆ... ●

ಮೈಮೇಲೆ ಹರಕು ಬಟ್ಟೆಗಳಿದ್ದರೂ ಚಿಂತೆಯಿಲ್ಲ,
ಕೈಯಲ್ಲೊಂದು ಪುಸ್ತಕವಿರಲಿ – **ಬಂಕಿಮಚಂದ್ರ**

* * *

ಸಂಸ್ಕೃತಿಯು ಬರೀ ಪಾಂಡಿತ್ಯವಲ್ಲ; ಅದು ವಿವೇಚನೆ,
ಜೀವನದ ಪರಿಜ್ಞಾನ – **ಎಸ್. ರಾಧಾಕೃಷ್ಣನ್**

ಸೋಲಿನಿಂದಲೇ ಗೆಲುವು

✍ **ಸದಾಶಿವ ಬಿ. ಎನ್.,** ತೃತೀಯ ಬಿ.ಎ.

ಸೋಲಿನ ರುಚಿ ನೋಡದೆ ಗೆದ್ದ ಶೂರ ಯಾರೂ ಇಲ್ಲ, ಸೋಲದೆ ಗೆಲ್ಲಲು ಸಾಧ್ಯವಿಲ್ಲ. ಒಂದು ವೇಳೆ ಗೆದ್ದರೂ ಪ್ರಯೋಜನವಿಲ್ಲ. ಅದಕ್ಕಾಗಿ ಸೋತಾಗ ಅಳುವ ಬದಲು ಖುಷಿಪಡಿ. ಏಕೆಂದರೆ ಸೋಲೇ ಗೆಲುವಿನ ಮೊದಲ ಮೆಟ್ಟಿಲು. ನೀವು ಸೋತಾಗ ನಿಮ್ಮ ಗೆಲುವಿನ ಪಯಣ ಪ್ರಾರಂಭವಾಗುತ್ತದೆ. ನೀವೀಗ ಯಾವುದರಲ್ಲಾದರೂ ಸೋತಿದ್ದರೆ ಮುಂದೆ ಗೆಲುವು ನಿಮಗೆ ಕಟ್ಟಿಟ್ಟ ಬುತ್ತಿ. ಆದರೆ ಸತತ ಪ್ರಯತ್ನ ಬೇಕೇ ಬೇಕು.

ಜೀವನದಲ್ಲಿ ಅವಮಾನ ಆಗಲೇಬೇಕು. ಅವಮಾನವಾದಾಗಲೇ ನಿಮ್ಮ ಆತ್ಮಸಾಕ್ಷಿಗೆ ನೋವಾಗುತ್ತದೆ. ಗೆಲ್ಲಬೇಕು ಎನ್ನುವ ಹಠ ನಿಮ್ಮಲ್ಲಿ ಮೂಡುತ್ತದೆ. ಒಂದಲ್ಲ ಒಂದು ದಿನ ಗೆದ್ದು ಈ ದೇಶಕ್ಕೆ ನಿಮ್ಮ ಪ್ರತಿಭೆಯನ್ನು ತೋರಿಸುವಂತಾಗಬೇಕು ಎಂಬ ಹಂಬಲ ಬೆಳೆಯುತ್ತದೆ.

ಪ್ರೀತಿ–ಪ್ರೇಮ–ಪ್ರಣಯ ಎಂದು ಹಾಳಾಗದೇ ನಿಮ್ಮ ಗುರಿಯ ಕಡೆಗೆ ಗಮನಕೊಡುವಂತಾಗಬೇಕು. ಸದಾ ನಿನ್ನ ಮನದಲ್ಲಿ ನಿನ್ನ ಸಾಧನೆಯ ಕನಸು ಕಾಣುತ್ತಿರುವ ಒಂದೊಂದಾಗಿ ಸಾಧನೆಯ ಮೆಟ್ಟಿಲನ್ನು ಏರಿ ಕೊನೆಗೆ ತುತ್ತತುದಿಯನ್ನು ತಲುಪು. ಇಡೀ ಪ್ರಪಂಚವೇ ನಿನ್ನ ಕಡೆ ತಿರುಗಿ ನೋಡುತ್ತದೆ. ನಾವು ಕಾಣುವ ಕನಸು ಬೆಳಗ್ಗೆ ಮಾಯವಾಗುವ ಬದಲು ಬೆಂಬಿಡದೆ ನಮ್ಮನ್ನು ಕಾಡಿ ಒಂದು ನಿರ್ದಿಷ್ಟ ಗುರಿಯತ್ತ ನಮ್ಮ ಮನಸ್ಸನ್ನು ಕೇಂದ್ರೀಕರಿಸಬೇಕು. ಸಾಧನೆಯ ಹಸಿವು ನಮ್ಮನ್ನು ಕಾಡಿಸುತ್ತಿದ್ದರೆ, ಅದರ ರುಚಿ ನೋಡು ನೋಡುತ್ತಾ ಕೊನೆಗೆ ಊಟಾನೇ ಮಾಡಿಸಿಬಿಡುತ್ತದೆ. ಹಾಗೆ ಸತತವಾಗಿ ಪ್ರಯತ್ನ ಮಾಡುತ್ತಲೇ ಇರಬೇಕು. ಒಂದಲ್ಲ ಒಂದು ದಿನ ಗೆಲುವು ನಮ್ಮದಾಗುತ್ತದೆ.

●

ಭೂಮಿ

ನಾನು ಭೂಮಿ
ಕೆಲವರಿಗೆ ನಾನು ಹೆತ್ತ ಮಾತೆ
ಇನ್ನೂ ಕೆಲವರಿಗೆ ವ್ಯಾಪಾರದ ಯಶೋಗಾಥೆ
ವ್ಯಾಪಾರದಿಂದಾಗಿ ನಾನು ಈಗ ಬರೀ ಬರಡು ಭೂಮಿ.

ನನ್ನಲ್ಲಿತ್ತು ಲಕ್ಷಾಂತರ ಸಂಪನ್ಮೂಲ
ಈಗ ಕಾಣೆಯಾಗುತ್ತಿದೆ ಆ ಸಂಪನ್ಮೂಲಗಳದೇ ಮೂಲ
ಪ್ರಾಣಿಗಳಿಗೆ ವಾಸಿಸಲು ಕಾಡುಗಳೇ ಇಲ್ಲಾ
ಇದಕ್ಕಾಗಿ ನಾಡಿಗೆ ಬಂದು ನಾಶಮಾಡುತ್ತಿವೆ ಎಲ್ಲಾ.

ನನ್ನಲ್ಲಿದ್ದ ಮರಗಳಿಂದ ಬರುತ್ತಿತ್ತು ಒಳ್ಳೆಯ ಗಾಳಿ
ಆದರೆ ಈಗ ಮರಗಳೂ ಇಲ್ಲದೆ
ಸೇವಿಸಲೂ ಒಳ್ಳೆಯ ಗಾಳಿಯೂ ಇಲ್ಲದೆ
ಮನುಷ್ಯರ ಮೇಲೆ ನಡೆಯುತ್ತಿದೆ ಕಾಯಿಲೆಯ ದಾಳಿ.

ನನಗೆ ಇದೆ ಹಲವಾರು ಹೆಸರು
ನನ್ನಲ್ಲಿರುವ ಹಸಿರು
ಮನುಷ್ಯರೆಲ್ಲರ ಉಸಿರು
ಹಸಿರೇ ಇಲ್ಲದಿದ್ದರೆ ನಾಶವಾಗುತ್ತದೆ ಮನುಷ್ಯರ ಉಸಿರು.

ನನಗೆ ಹಾನಿ ಮಾಡಿ
ಕಟ್ಟುತ್ತಿದ್ದಾರೆ ದೊಡ್ಡ ದೊಡ್ಡ ಮಹಡಿ
ನಾನೇ ಪ್ರಕೃತಿ
ನಾನೇನಾದರೂ ಮುನಿದರೆ ಮನುಷ್ಯರ ಅವನತಿ.

– ಸಾಕ್ಷ್ಯ
ದ್ವಿತೀಯ ಬಿ.ಕಾಂ.

ಬಾಂಬೆ ಬ್ಲೆಡ್

✍ **ಅನಿತಾ,** ತೃತೀಯ ಬಿ.ಎಸ್ಸಿ

ಬಾಂಬೆ ಬ್ಲೆಡ್ ಅಂದ್ರೆ ಏನು? ಅದಕ್ಕೆ ಆ ಹೆಸರು ಹೇಗೆ ಬಂತು ತಿಳಿದಿದೆಯೇ? ರಕ್ತದ ಗುಂಪುಗಳಲ್ಲಿ A, B, AB, O (ಎ, ಬಿ, ಎಬಿ, ಒ) ಇದೆ ಎಂದು ಎಲ್ಲರಿಗೂ ತಿಳಿದ ವಿಷಯ. ಪ್ರಪಂಚ ವ್ಯಾಪ್ತಿಯಲ್ಲಿ ಇರುವ ಜನರಲ್ಲಿ ತುಂಬಾ ಜನರಿಗೆ ಈ 4 ಗುಂಪುಗಳಲ್ಲಿ ಯಾವುದೋ ಒಂದು ಗುಂಪು ಇರುತ್ತದೆ. ಅದಲ್ಲದೆ ಅದರಲ್ಲಿ ಪಾಸಿಟಿವ್, ನೆಗೆಟಿವ್ (+, −) ರಕ್ತದ ಗುಂಪುಗಳು ಇರುತ್ತದೆ. ಆದರ ಪ್ರಕಾರವೇ ವೈದ್ಯ ಪರೀಕ್ಷೆ ನಡೆಸಿ ರಕ್ತದ ಗುಂಪಿನ ಸಹಾಯದಿಂದ ರಕ್ತ ಕೊಡುವಿಕೆ ಮತ್ತು ರಕ್ತ ತೆಗೆದುಕೊಳ್ಳುವಿಕೆ ಮಾಡುತ್ತಾರೆ. ನಿಮಗೆ ಗೊತ್ತೇ!!! ಇದಲ್ಲದೆ ಇನ್ನೊಂದು ಗುಂಪಿನ ರಕ್ತವಿದೆ. ಅದೇ ಬಾಂಬೆ ಬ್ಲಡ್ ಗ್ರೂಪ್ ಅಥವಾ "HH" ಬ್ಲೆಡ್ ಗ್ರೂಪ್ ಎಂದು ಕರೆಯುತ್ತಾರೆ.

ಸಾಧಾರಣವಾಗಿ ನಮ್ಮ 50% ರಕ್ತವನ್ನು ಕೆಂಪು ರಕ್ತಕಣಗಳು ತಯಾರಿಸುತ್ತವೆ. ಉಳಿದ 1% ಬಿಳಿ ರಕ್ತಕಣಗಳು ಮತ್ತು 49% ಪ್ಲಾಸ್ಮ ಇರುತ್ತದೆ. "O" ಗ್ರೂಪ್‌ನಲ್ಲಿ ಇರುವಂತೆ ಕೆಂಪು ರಕ್ತಕಣಗಳಲ್ಲಿ ಆಂಟಿಜನ್ ಇರುವುದಿಲ್ಲ. ಪ್ಲಾಸ್ಮದಲ್ಲಿ AB ಆಂಟಿಜನ್ (ಪ್ರತಿಜನಕ) ಎರಡೂ ಇರುತ್ತದೆ. ಇದರಿಂದಾಗಿ "O" ಗ್ರೂಪ್ ರಕ್ತವನ್ನು ಬಾಂಬೆ ಬ್ಲೆಡ್ ಅಂದುಕೊಂಡು ಗೊಂದಲಕ್ಕೆ ಒಳಗಾಗುತ್ತಾರೆ.

ಅದು ತಿಳಿಯದಿರುವುದರಿಂದ ನಿಜವಾಗಿಯೂ ಬಾಂಬೆ ಬ್ಲೆಡ್ ಗ್ರೂಪ್ ಇರುವವರನ್ನು "O" ಗ್ರೂಪ್‌ನವರು ಎಂದು ಭಾವಿಸಿ ಅವರಿಗೆ ಅದೇ ರಕ್ತವನ್ನು ನೀಡಲಾಗುತ್ತಿತ್ತು. ಇದರಿಂದಾಗಿ ಬಾಂಬೆ ಬ್ಲೆಡ್ ಗ್ರೂಪಿನ ಜನರು ಸಾವಿಗೆ ಈಡಾಗುತ್ತಿದ್ದರು. ಹಾಗಾದರೆ ಬಾಂಬೆ ಬ್ಲೆಡ್ ಗ್ರೂಪ್ ಅವರನ್ನು ಕಂಡುಹಿಡಿಯಲು ಸಾಧ್ಯವಿಲ್ಲವೇ? ಅಂದ್ರೆ ಸಾಧ್ಯವಾಗುತ್ತದೆ. ರಕ್ತದಲ್ಲಿ "H" ಆಂಟಿಜನ್ ಇರುವಿಕೆ ಇದು ಬಾಂಬೆ ಬ್ಲೆಡ್ ಆಗಿರುತ್ತದೆ. ಇದರಲ್ಲಿ ಪಾಸಿಟಿವ್, ನೆಗೆಟಿವ್ (+, −) ಎಂದು ಇನ್ನೂ 2 ತರಹವಿದ್ದು, ಪಾಸಿಟಿವ್ ತುಂಬಾ ಕಡಿಮೆ ಎಂದುಕೊಂಡರೆ ನೆಗೆಟಿವ್ ಇನ್ನೂ ಕಡಿಮೆ ಜನರಲ್ಲಿ ಕಂಡುಬರುತ್ತದೆ.

ಅದೆಷ್ಟೊ ಕೋಟಿ ಮಂದಿಯಲ್ಲಿ ಬಾಂಬೆ ಬ್ಲೆಡ್ ಗ್ರೂಪ್ ನೆಗೆಟಿವ್ ಇರುವವರು ಒಬ್ಬರೇ ಇರುತ್ತಾರೆ. ಅದೇ ಪಾಸಿಟಿವ್ ಗ್ರೂಪಿನವರು ಹತ್ತುಸಾವಿರ ಮಂದಿಯಲ್ಲಿ ಒಬ್ಬರು ಇರಬಹುದು.

ಈ ಬ್ಲೆಡ್ ಗ್ರೂಪ್‌ಗೆ ಬಾಂಬೆ ಬ್ಲೆಡ್ ಎಂಬ ಹೆಸರು ಹೇಗೆ ಬಂತು ಗೊತ್ತೇ? 1952ರಲ್ಲಿ ಮುಂಬೈನ ರೈಲ್ವೆ ಉದ್ಯೋಗಿಗೆ ಒಂದು ಕತ್ತಿ ಹೊಡೆತದಿಂದಾಗಿ ತೀವ್ರ ರಕ್ತಸ್ರಾವದಿಂದಾಗಿ ಅವರಿಗೆ ರಕ್ತದ ಅವಶ್ಯಕತೆ ಇತ್ತು. ಇದರಿಂದ ರಕ್ತದ ಗುಂಪು ಪರೀಕ್ಷಿಸಿದರು. ಆದರೆ ವೈದ್ಯರು ಎಷ್ಟೇ ಪರೀಕ್ಷಿಸಿದರೂ ಅವರ ರಕ್ತದ ಗುಂಪು ಯಾವುದು ಎಂದು ತಿಳಿಯಲಾಗಲಿಲ್ಲ. ಇದರಿಂದಾಗಿ ಕೆಂಪು ರಕ್ತದಲ್ಲಿರುವ "H" ಆಂಟಿಜನ್ ಗುರುತಿಸಿ ಅದು ಹೊಸ ರಕ್ತದ ಗುಂಪು ಎಂದು '' ಡಾ। ವೈ. ಎಂ. ಭೇಂಡೆ" ಅವರ ಅಧ್ಯಯನದ ಮೂಲಕ ತಿಳಿಯಿತು. ಈ ಬ್ಲೆಡ್ ಗ್ರೂಪ್ ಬಾಂಬೆಯಲ್ಲಿ ಮೊಟ್ಟಮೊದಲು ಕಂಡುಹಿಡಿಯಲಾದ ಕಾರಣ ಬಾಂಬೆ ಬ್ಲೆಡ್ ಎಂಬುದಾಗಿ ಕರೆಯಲಾಗುತ್ತದೆ.

●

ನಡತೆ ಮತ್ತು ಜ್ಞಾನ ಹೃದಯದ ಎರಡು ರೆಕ್ಕೆಗಳು – **ಬುದ್ಧ**

ಅಪ್ಪನ ಕಿಚ್ಚು ಎದೆಯ ಜೀವನ

✍ **ಏಂಜೆಲ್**, ದ್ವಿತೀಯ ಬಿ.ಎ.

''ಅಪ್ಪನನ್ನು'' ಯಾರಿಗೂ ಸರಿಸಮವಾಗಿ ಹೋಲಿಸಲು ಸಾಧ್ಯವಿಲ್ಲ. ಅಪ್ಪನ ಎದುರುಗಡೆ ಎಲ್ಲ ಬಂಗಾರವೂ ಶೂನ್ಯ. ತನ್ನ ಇಡೀ ಜೀವ-ಜೀವನವನ್ನು ಮಕ್ಕಳಿಗೆಂದು ಮುಡಿಪಾಗಿ ಇಡುವ ಅಪ್ಪ, ಎಂತಹ ಪರಿಸ್ಥಿತಿಯಲ್ಲೂ ನಾನು ಇದ್ದೇನೆಂದು ಹೇಳಿ ಅದೇ ರೀತಿಯಾಗಿ ತೋರಿಸಿಕೊಟ್ಟ ಅಪ್ಪನಿಗೆ ಎಷ್ಟು ಕೃತಜ್ಞತೆ ಹೇಳಿದರೂ ಸಾಲದು. ಕಣ್ಮಣಿಯಾಗಿಕಾಯ್ದು, ತಂದೆಗೆ- ತಂದೆಯಾಗಿ, ತಾಯಿಗೆ- ತಾಯಿಯಾಗಿ ನಿಂತು ಎರಡೂ ಪಾತ್ರ ನಿಭಾಯಿಸಲು ಶಕ್ತಿ, ಅರ್ಹತೆ, ಯೋಗ್ಯತೆ ಸಾಮರ್ಥ್ಯ ತಂದೆಗೆ ಇದೆ. ಮಗು ಹುಟ್ಟಿದಾಗ ಖುಷಿ ಪಟ್ಟು ಮುದ್ದಿಟ್ಟು ಕೂಡಲೇ ಸಾವಿರಾರು ಕನಸುಗಳನ್ನು ಕಟ್ಟುವ ಅಪ್ಪ, ಒಂದೊಂದು ಹೆಜ್ಜೆ ಇಡುವ ದಿನಗಳನ್ನು ಗಮನಿಸುವ ಅಪ್ಪ, ಎದೆಗೆ ಒರಗಿಸಿ ಹೆಗಲ ಮೇಲೆ ಕೂರಿಸಿ ಆಟ ಆಡಿಸುವ ಮುದ್ದು ಮುದ್ದಿನ ಅಪ್ಪ. ಈ ಪ್ರೀತಿ ಊಹಿಸಲು ಅಸಾಧ್ಯ. ತನ್ನ ಮಕ್ಕಳು ಬೆಳೆಯುತ್ತಿದ್ದಂತೆ ಒಳ್ಳೆ ಗುಣ ಹಾಗೂ ಕಲಿಕೆ ಎಲ್ಲವನ್ನೂ ಕೊಟ್ಟು ಆಕಾಶದ ನಕ್ಷತ್ರಗಳು ಎತ್ತರದಲ್ಲಿ ಫಳ ಫಳ ಹೊಳೆಯುವ ರೀತಿಯಲ್ಲಿ ಹೊಳೆಯಬೇಕು ಎನ್ನುವ ಅಪಾರ ಆಸೆ ಅಪ್ಪನದ್ದು. ಮಕ್ಕಳಿಗೆಂದು ಎಲ್ಲವನ್ನೂ ತ್ಯಾಗ ಮಾಡಿ ತನ್ನ ದೇಹದ ಹಂಗನ್ನು ತೊರೆದು ಬದುಕುತ್ತಿರುವ ವ್ಯಕ್ತಿ ಯಾರೆಂದರೆ ಅದು ಅಪ್ಪ ಮಾತ್ರ.

ಎಲ್ಲವನ್ನು ಕಳೆದುಕೊಂಡರೂ ಬಡತನ ಬಂದು ಎರಗಿದರೂ, ಕಿತ್ತು ತಿನ್ನುವ ದರಿದ್ರ ಎರಗಿದರೂ, ಬಂಧು-ಬಳಗ-ಸಮಾಜ ತೊರೆದರೂ ಮಕ್ಕಳನ್ನು ಕೈಬಿಡದೆ ಅವರಿಗೆಂದು ಎಲ್ಲವನ್ನು ಅನುಭವಿಸಿ, ತನ್ನ ಕಣ್ಣೀರನ್ನು ಒರೆಸಿಕೊಂಡು ಗಂಟಲಲ್ಲಿ ಗಂಜಿ ನೀರಿನ ರೀತಿಯಲ್ಲಿ ನೋವನ್ನು ನುಂಗಿಕೊಂಡು ಮಕ್ಕಳ ಜೀವನಕ್ಕೋಸ್ಕರ ಬದುಕುವ ಏಕೈಕ ವ್ಯಕ್ತಿ ಅಪ್ಪ. ತನ್ನ ಮಕ್ಕಳು ಯಾರ ಕಾಲಿನ ಅಡಿಯಲ್ಲಿ ಇರಬಾರದು, ಎಲ್ಲರಿಗಿಂತಲೂ ಮಿಗಿಲಾಗಿ ಮಿಂಚಬೇಕು ಎನ್ನುವ ಧ್ಯೇಯ ಹಾಗೂ ಕಿಚ್ಚಿನ ಹೃದಯ ಇರುವ ತಂದೆ. ತನ್ನ ದೇಹದ ಅರ್ಧ ಮೂಳೆಗಳನ್ನು ಸವೆಯಿಸಿ ಪ್ರತಿ ಬೆವರಿನ ಒಂದೊಂದು ಹನಿಯೂ ಕೂಡ ರಕ್ತದ ರೀತಿಯಲ್ಲಿ ಸುರಿಸಿದ ಮಹಾನ್ ವ್ಯಕ್ತಿ ಅಪ್ಪ. ಯಾರು ಕೈ ಬಿಟ್ಟರೂ ನಕಾರಾತ್ಮಕ ಮಾತನಾಡಿದರೂ ಕಿವಿಗೆ ಹಾಕಿಕೊಳ್ಳದೆ ಮಕ್ಕಳನ್ನು ಪ್ರಮಾಣ ತಪ್ಪದೆ ಸಾಕಿದ ಅಪ್ಪ. ಮಕ್ಕಳಿಗೆ ಕೇಡು ಆಗುವ ಸಂದರ್ಭದಲ್ಲಿ ಗರ್ಜಿಸುವ ಸಿಂಹ ಆಗಿರುವುದು ಅಪ್ಪ ಮಾತ್ರ. ಮಕ್ಕಳಿಗೆ ಖಡ್ಗವಾಗಿ ನಿಲ್ಲುವ ಹಾಗೂ ಯುದ್ಧದಲ್ಲಿ ರಣವೀರನಾಗಿ ಗೆಲ್ಲುವ ಧ್ವಜ ಎತ್ತಿ ಹಾರಿಸುವ ಪರಾಕ್ರಮಶಾಲಿಯೇ ಅಪ್ಪ.

●

ಹೊರ ಹೊರಗಾಡಿದರೇನುಂಟು, ಒಳವರಿದು ನೋಡಿದರಲ್ಲವೆ ದೇವನುಂಟು

– **ರತ್ನಾಕರ ವರ್ಣಿ**

* * *

ದೇವರನ್ನು ಪ್ರೀತಿಸುವವರು ಎಲ್ಲರನ್ನೂ ಪ್ರೀತಿಸುತ್ತಾರೆ – **ಗುರುನಾನಕ**

ಶಾಂಭವಿ

✍ **ಕೆ. ಎನ್. ಕಾರ್ತಿಕ್,** ದ್ವಿತೀಯ ಬಿ.ಎ., ಪತ್ರಿಕೋದ್ಯಮ ವಿಭಾಗ

ಕರಾವಳಿ... ನದಿ, ಸಾಗರ, ಸಮುದ್ರಗಳೊಡಗೂಡಿದ ಸೃಷ್ಟಿಯ ಅದ್ಭುತ... ಕಡಲಿನ ಪ್ರಶಾಂತ ವಾತಾವರಣ ಪರಿಸರ ಪ್ರೇಮಿ ಮನಸ್ಸಿಗೆ ಮುದ ನೀಡುತ್ತದೆ. ನದಿಯ ಪ್ರಶಾಂತತೆ ನೋಡುಗರ ಕಣ್ಣಿಗೆ ತಂಪೆರೆಯುತ್ತದೆ. ಇಳಿ ಸಂಜೆಯ ನದಿ ತೀರದ ಸುಂದರ ನೋಟ ಪ್ರವಾಸಿಗರಿಗೆ ಅಚ್ಚುಮೆಚ್ಚು. ಇಲ್ಲಿನ ಒಂದೊಂದು ನದಿಗಳು ಒಂದೊಂದು ವೈಶಿಷ್ಟ್ಯ. ಇತ್ತೀಚೆಗೆ ಕರಾವಳಿ ಜನ ಭೇಟಿ ನೀಡಲು ಹೆಚ್ಚು ಇಷ್ಟಪಡುವ ನದಿಯೇ ಶಾಂಭವಿ.

ಶಾಂಭವಿ ನದಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಹರಿಯುತ್ತದೆ. ಚಿಕ್ಕಮಗಳೂರು ಜಿಲ್ಲೆಯ ಕುದುರೆಮುಖ ಈ ನದಿಯ ಉಗಮ ಸ್ಥಾನ. ಶಾಂಭವಿ ನದಿಯು ಸಿಹಿ, ಉಪ್ಪು ನೀರುಗಳ ಮಿಶ್ರಣ. ಆ ಕಾರಣಕ್ಕಾಗಿ ಇಲ್ಲಿನ ನದಿ ಮೀನುಗಳಿಗೆ ಬೇಡಿಕೆ ತುಸು ಹೆಚ್ಚು. ಹಲವರ ಪ್ರಕಾರ ಈ ನದಿಗೆ ಮೀನುಗಳು ಮರಿ ಇಡುವ ಉದ್ದೇಶಕ್ಕಾಗಿ ಬರುತ್ತವೆ. ಕ್ಯಾವಜ್, ಮುಡಾವ್, ಪಾರೆ, ಕಾಣೆ, ಏರಿ, ತೊರಕೆ, ಸಿಗಡಿ ಸೇರಿದಂತೆ ನೂರಕ್ಕೂ ಹೆಚ್ಚು ಮೀನು ಸಂಕುಲ ಈ ನದಿಯಲ್ಲಿ ಕಂಡುಬರುತ್ತದೆ. ಇಲ್ಲಿ ಕೇವಲ ಮೀನುಗಳು ಮಾತ್ರ ಅಲ್ಲ, ಮರ್ವಾಯಿ, ಅಜಿರ್, ಕಲ್ಲಾ ಎನ್ನುವ ಚಿಪ್ಪು ರೂಪದ ಆಹಾರ ಪದಾರ್ಥಗಳು ಕೂಡ ಸಿಗುತ್ತವೆ. ಇಲ್ಲಿನ ಮೀನುಗಳಿಗೆ ಮಳೆಗಾಲದ ಸಮಯದಲ್ಲಿ ಮಾರುಕಟ್ಟೆ ಬೇಡಿಕೆ ಹೆಚ್ಚು. ಹಾಗಾಗಿ ಶಾಂಭವಿ ತೀರದ ಮೀನುಗಾರರಿಗೆ ಶಾಂಭವಿ ನದಿ ಅನ್ನದಾತ ಎಂದೇ ಹೇಳಬಹುದು.

ದಿನದಲ್ಲಿ 3–4 ಬಾರಿ ಇಲ್ಲಿನ ನೀರು ಇಳಿಕೆಯಾಗುತ್ತದೆ. ಈ ಸಮಯದಲ್ಲಿ ಶಾಂಭವಿ ನದಿ ಮತ್ತೆ ನಂದಿನಿ ನದಿ ಸಂಗಮವಾಗುವ ಸ್ಥಳದಲ್ಲಿ ಮರುವಾಯಿ ಹೆಕ್ಕಲೆಂದೇ ಒಂದಷ್ಟು ಜನ ಆಗಮಿಸುತ್ತಾರೆ. ಈ ನದಿ ಸಮುದ್ರಕ್ಕೆ ಸೇರುವ 7 ಗಂಟೆಯ ಹೊತ್ತು ಬಹು ಅಪಾಯಕಾರಿ. ಆ ಸಮಯದಲ್ಲಿ ನದಿಗೆ ಇಳಿಯುವ ಜನರ ಸಂಖ್ಯೆ ಕೂಡ ಕಮ್ಮಿ.

ಇಷ್ಟೇ ಅಲ್ಲ, ಈ ನದಿಯಲ್ಲಿ ಮೀನು ಸಾಕಾಣಿಕೆ ಮತ್ತು ಸಿಗಡಿ ಸಾಕಾಣಿಕೆ ಕೂಡ ನಡೆಯುತ್ತೆ. ಬೋಟಿಂಗ್, ಸರ್ಫಿಂಗ್ ನಡೆಯುತ್ತೆ. ಮೂಲ್ಕಿಯ ಕೊಳಚಿ ಕಂಬಳ ಬಳಿ 'ಮಂತ್ರ ಸರ್ಫ್ ಕ್ಲಬ್' ಮತ್ತು 'ಕಯಕ ಬಾಯ್' ಎಂಬ ಸೆಂಟರ್‌ಗಳಿವೆ.

ಪ್ರಾಕೃತಿಕ ಸೌಂದರ್ಯದ ಜೊತೆಗೆ ಶಾಂಭವಿ ನದಿಗೆ ಪೌರಾಣಿಕ ಹಿನ್ನಲೆ ಕೂಡ ಇದೆ. ಈ ನದಿಗೆ ಹತ್ತಿರದಲ್ಲಿರುವ ಬಪ್ಪನಾಡು ದೇವಸ್ಥಾನಕ್ಕೆ ಮತ್ತೆ ನದಿಗೆ ನಂಟಿದೆ. ಬಪ್ಪ ಬ್ಯಾರಿಗೆ ದೇವಿ ಲಿಂಗದ ರೂಪದಲ್ಲಿ ಸಿಕ್ಕಿದ್ದು ಇದೇ ನದಿಯಿಂದ ಎಂಬ ಐತಿಹ್ಯವಿದೆ.

ಒಮ್ಮೆ ಬನ್ನಿ... ಮೀನು ಪ್ರಿಯರಾಗಿ, ಪ್ರಕೃತಿ ಪ್ರೇಮಿಗಳಾಗಿ, ನದಿ ತೀರದ ನಿಜ ಸೌಂದರ್ಯ ಸವಿಯಲು ಶಾಂಭವಿ ನದಿ ತೀರಕ್ಕೆ ಭೇಟಿ ಕೊಡಿ.

●

ವರ್ತಕನು ಗಿರಾಕಿಗಳು ಕೊಡುವ ಪ್ರತಿಯೊಂದು ನಾಣ್ಯವನ್ನು ಬಾರಿಸಿ, ಪರೀಕ್ಷಿಸಿ ಸ್ವೀಕರಿಸುವಂತೆ, ಗುರುವು ಉಪದೇಶಿಸುವ ನುಡಿಗಳನ್ನು ಶಿಷ್ಯನು ಚೆನ್ನಾಗಿ ವಿಮರ್ಶಿಸಿ ಸರಿಯಾದುದನ್ನು ಮಾತ್ರ ಸ್ವೀಕರಿಸಬೇಕು – **ಪರಮಹಂಸರು**

* * *

ಪ್ರಾರ್ಥನೆ ಬರೀ ನಾಲಗೆಯ ನುಡಿಯಲ್ಲ, ಅದು ಅಂತಃಕರಣದ ಮಹಾಪೂರ – **ಗಾಂಧೀಜಿ**

ಹನಿಗವಿತೆ

✍ **ಪ್ರಜ್ವಲ್ ತೋಳಾರ್,** ತೃತೀಯ ಬಿ.ಕಾಂ.

ಆಗಸದ ತಾರೆಯನೇಕೆ ಎಣಿಸಲಿ ನಾ
ಹೊಳೆಯುವ ನಕ್ಷತ್ರವೆ ನನ್ನ ಬಳಿಯಿರುವಾಗ,
ಚಂದಿರನೊಡನೆ ನನಗೇನಿದೆ ಕೆಲಸ
ಬೆಳದಿಂಗಳ ಸ್ಥಾವರವೆ ನನ್ನ ಎದುರಿರುವಾಗ,
ಕಾಮನಬಿಲ್ಲಿನ ಸುಂದರತೆ ಯಾಕೋ ಮಾಸಿದೆ
ಸೌಂದರ್ಯರಾಶಿಯಾದ ನೀ ಇರುವಾಗ,
ಹಿಮಾಲಯದ ಸೆಳೆತವೇಕೋ ಕಳೆಗುಂದಿದೆ
ನಿನ್ನ ಕಣ್ಣಲ್ಲಿನ ಮಾದಕತೆಯ ನೋಡಿದಾಗ.
ಪ್ರಕೃತಿಯ ವಿಸ್ಮಯಗಳೇಕೋ ಕಡಿಮೆಯಾಗಿದೆ
ನಿನ್ನ ಮೊಗದ ಅಂದವ ನೋಡುವಾಗ
ನಾ ತಿಳಿದ ಪದಗಳೇಕೋ ಸಾಲದೆ ಹೋಗುತಿದೆ
ನಿನ್ನ ಅಂದದ ಬಗ್ಗೆ ಬರೆಯಲು ಹೊರಟಾಗ।

* * *

ಬದುಕಿನ ಈ ಯಾತ್ರೆಯಲ್ಲಿ
ಕಾಲವೆಂಬ ಮಾಯಾವಿಯು
ತರಹ ತರಹದ ಭ್ರಮೆಯ ಸೃಷ್ಟಿಸಿ
ಚಕ್ರವ್ಯೂಹವ ಹೆಣೆದಿದ್ದಾನೆ
ಭಾವನೆಯೆಂಬ ಅಸ್ತ್ರ ಬಳಸಿ
ಸಮಯಕ್ಕಾಗಿ ಕಾದುಕುಂತಿಹರು
ಭಾವನೆಗಳ ಮಾರುವ ಸಂಚುಕೋರರು
ನಮ್ಮವರೆಂಬ ಭ್ರಮೆಯ ಹುಟ್ಟಿಸಿ
ನನ್ನತನದ ಸತ್ವವ ಕರಗಿಸಿ
ನಡುನೀರಲ್ಲೆ ಬಿಟ್ಟು ಹೋಗುವರು
ಆಸೆಗಳ ಪಟ್ಟಿಯ ಬದಿಗಿಟ್ಟು
ಸ್ನೇಹ ಪ್ರೀತಿಯ ಗಾಳ ತೆಗೆದಿಟ್ಟು
ಭಾವನೆಗಳ ಭ್ರಾಂತಿಯ ಕಳಚಿಟ್ಟು
ನಾ ನಿರ್ಲಿಪ್ತನಾಗಿ ಸಾಗಬೇಕು
ಕಾಲದ ಜೇಡರಬಲೆಗೆ ಸಿಲುಕದೆ.

* * *

ಸಂತಸವೆಂಬ ಎರಡು ಗುಡ್ಡದ ನಡುವೆ
ಸಂಕಷ್ಟಗಳೆಂಬ ಪ್ರಪಾತವಿದೆ.
ಕಷ್ಟವೆಂದು ಕಂಬನಿ ಮಿಡಿಯದೆ
ಅನುಭವವೆಂದು ಪಯಣ ಸಾಗಬೇಕು.
ತಿರುವುಮುರುವುಗಳಿವೆ
ಗೆಲುವಿನ ಗಮ್ಯದ ಈ ಹಾದಿಯಲಿ.
ಘಾಟಿಯೆಂದು ಕೊರಗುವ ಹೊರತು,
ಸವಾಲು ಎಂದು ಬದುಕ ಸವಿಯಬೇಕು.
ನಮ್ಮ ಬದುಕಿನ ವಾಹನದ
ಚಾಲಕನು ಎಂದಿಗೂ ನಾನೆ.
ನನ್ನಾಸೆಯ ಗಮ್ಯದೆಡೆಗೆ
ಬದುಕಿನ ಬಂಡಿಯ ಸಾಗಿಸಬೇಕು.

* * *

ನಾ ಬರೆದ ಕವಿತೆ ಮೆಚ್ಚುವವರಿಲ್ಲ
ಬೆನ್ನು ತಟ್ಟಿ ಪ್ರೋತ್ಸಾಹಿಸುವವರಿಲ್ಲ
ಆದರೂ ಲೇಖನಿ ಹಿಡಿದು ನಾ ಬರೆಯುವೆ
ನನ್ನ ಮನವ ನಾ ಮೆಚ್ಚಿಸುವೆ
ನನ್ನ ಬರಹ ಬರಿ ಕವಿತೆಯಲ್ಲ
ಮನ ಹೇಳುತಿರುವ ಮಾತು
ಮುತ್ತಿನಂತೆ ಜೋಡಿಸುತ್ತಿರುವುದು ಪದವಲ್ಲ
ಹೃದಯ ಹಾಡುತ್ತಿರುವ ಹಾಡು
ಸಮಾಜವೆಂಬ ಸಮಾಧಿಯಲ್ಲಿ ಮಾತೆಂಬ ಶವ
ಆದಕ್ಕಿರುವುದು ಊಸರವಳ್ಳಿಯ ಭಾವ
ಆಗೊಂದು ಈಗೊಂದು ಮುಂದೊಂದು ಹಿಂದೊಂದು
ಮನದ ಮಾತು ಆಡಲಾಗದು ಎಂದು
ಮನದ ಮಾತು ಹೊರಬಂದಿತು
ಈ ನನ್ನ ಕವಿತೆಯಾಗಿ
ಸಮಾಜದ ಬೇಲಿಯ ತುಂಡರಿಸಿತು
ನನ್ನ ಮನದ ಜ್ವಾಲಾಮುಖಿಯಾಗಿ

* * *

ಬಿರುಗಾಳಿ ಬೀಸುತ್ತಿದೆ ಮನದಲ್ಲಿ
ಬರೀ ದ್ವಂದ್ವಗಳೇ ಬದುಕಿನಲ್ಲಿ
ಹೇಗೆ ಸಾಗಲಿ ನಾ ಈ ದಾರಿಯಲ್ಲಿ
ಯಾವುದು ಮುಖ್ಯ ಈ ಜೀವನದಲ್ಲಿ
ಎರಡು ದಾರಿಗಳಿವೆ ನನ್ನ ಮುಂದೆ
ಜಗತ್ತನೆ ಗೆಲ್ಲಬಲ್ಲ
ಹಣ ಒಂದು ರಸ್ತೆಯಲ್ಲಿ

ನಿಂತಲ್ಲೆ ಜಗ ತೋರಿಸುವ
ಪ್ರೀತಿ ಮಗದೊಂದು ದಾರಿಯಲ್ಲಿ
ಎತ್ತ ಸಾಗಲಿ ನಾನು
ತಿಳಿಯದೆ ನಿಂತು ನೋಡುತ್ತಿರುವೆ
ಹಣದ ಹಿಂದೆ ಓಡಿದವರು
ಪ್ರೀತಿಗಾಗಿ ಅಲೆಯುತಿರುವರು
ಪ್ರೀತಿಯೆಂದು ನಡೆದವರು
ಹಣವಿಲ್ಲದೆ ತಿರಸ್ಕರಿಸಲ್ಪಟ್ಟರು
ಬದುಕಿನ ಈ ದ್ವಂದ್ವದಲ್ಲಿ
ಗೆದ್ದವರು ಕೆಲವರು
ಆಯ್ದುಕೊಳ್ಳಲೇಬೇಕು ಒಂದನ್ನು
ಹಣ ಮಾಡಲೇ ಪ್ರೀತಿ ಗಳಿಸಲೆ
ಹಣ ಗಳಿಸಿದರೆ ಮಾತ್ರ ಗೌರವ
ಪ್ರೀತಿ ಪಡೆದರೆ ಮಾತ್ರ ನೆಮ್ಮದಿ
ಸಂಘರ್ಷಗಳ ಈ ಮಾಯಾಜಾಲ
ಎಲ್ಲದಕ್ಕೂ ಕಾರಣ ಈ ಕಾಲ

* * *

ನಾನು ನಾನೇ ಆಗಿರುವಾಗ
ನನ್ನ ನಾನು ಹೇಗೆ ಅರಿಯಲಿ?
ನಾ ನೋಡುವ ಜಗವೊಂದು
ನನ್ನನ್ನೇ ಕೇಂದ್ರೀಕರಿಸಿದಾಗ
ನಾನ್ಯಾರೆಂದು ಹೇಗೆ ತಿಳಿಯಲಿ?
ನನ್ನೊಳಗಿನ ನಾನೊಬ್ಬ
ತಲೆಮರೆಸಿ ಅವಿತಿರುವನು!
ನನ್ನೊಳಗಿನ ಬೇರೊಬ್ಬ
ಮುಖವಾಡದೊಡನೆ ನಿಂತಿಹನು!
ನನ್ನೊಳಗಿನ ನನ್ನನ್ನು
ಕಾಣಬಲ್ಲೆನ ನಾನೂ?
ನಾನರಿಯದ ನಾನೊಬ್ಬ
ನನಗರಿವಿಲ್ಲದೆ ಒಳಗಿರುವರು!
ಸರಿಯಾದ ಸಮಯ ಬಂದೊಡನೆ
ನಾನಾರೆಂದು ಹೇಳುವರು!
ಅರಿಷಡ್ವರ್ಗದ ಪರದೆಯು ಕಿತ್ತೊಡನೆ
ನನ್ನ ನಾನು ಕಾಣುವೆನು.

BOX JELLY FISH

✍ **Rachana Shetty,** II B.A.

It's a myth that black cobra is the most toxic animal on earth. But the fact is box jelly fish is the most toxic animal on earth. Box jelly fish are cnidarians invertebrates distinguished by their cube shaped medusae. There are at least 51 species of box jelly fish known as of 2018. They are grouped into two orders and eight familites. A few new species have since been described and it is likely that additional undescribed species remain. Their scientific name is ueboza.

They are pale blue and transparent in colour and get their name from the cube like shape of their bell. It is separated into section including the stomach and the gastric pockets. The gonads are also inside the bell. They are eight with four on each half of the divided bell cavity. Box jellies have a more developed nervous system than other types of jelly fish. They are invertebrates meaning they have no backbone and they absorb oxygen from water through membranes. A fully grown box jelly fish can measure up to 20 cm along each box side 30 cm to 12 cm in diameter and the tentacles can grow up to 3 m in length. Its weight can reach 2 kg. Its diet consists primarily of small fish, crustauns, marine larvae and planktons. It even preys on other jelly fish not of its own species. In adult or the medusa stage they release eggs and sperms inside the bell of the female and the eggs develop there. The eggs develop into larvae called planulae which swim for few days until they attach to rocks or coral. They can lay as many as 45,000 eggs in a single night. Box jelly fish do not have long lives. They may spend less than a year in the medusa form and only a few months as a polyp. This entire cycle can take place over the course of two years or less. Mostly they are found in warm coastal waters around the world. The lethal varieties are found primarily in the Indo-pacific region and northern Australia. This includes the Australian box jelly fish which is considered the most venomous marine animal.



For the first time it was found by North Queensland toxicologist and radiologist Doctor Hugo Flecker on "January 20, 1955." When a 5 year old boy died after being stung in shallow water at Cardwell, North Queensland. Flecker found 3 types of jelly fish. Their venom

is considered to be among the most deadly in the world. Containing toxins that attack the heart, nervous system and skin cells. It is so overpoweringly painful, human victims have been known to go into shock and drown or die of heart failure before even reaching shore. Researchers at the University of Hawaii's Department of Tropical Medicine found the venom causes cells to become porous enough to allow potassium leakage, causing hyperkalemia. Which can lead to cardiovascular collapse and death as quickly as within 2 to 5 minutes. Some 20 to 40 people die from stings by box jelly fish annually in Philippines alone according to the U.S. National Sciences foundation. A ten-year-old girl has become the first person ever to have survived an attack from a lethal box jelly fish. They don't purposely attack humans. Most stings occur when people accidently touch a box jelly fish. Box jelly fish sting treatment or first aid measures are carefully remove the casualty from the water, avoid rubbing the sting area, immediately douse the sting area with vinegar for at least 30 seconds. If vinegar is not available carefully remove tentacles off skin and rinse well with sea water.

Measures to avoid box jelly fish are by wearing protective clothing to create a barrier between your skin and box jelly fish, use a special lotion that protect skin.

●

JOURNEY OF LIFE

✍ **Rakshitha Amin,** III B.C.A.

Life is a journey filled with opportunities, hardships, heartaches and it will test our courage. You never really know how the journey of your life is going to be. You meet so many people ………. you meet them everyday, occasionally, rarely and you also come across few whom you don't want to meet ever again….

It's quite complicated!

But you meet very few people whose presence comforts you in a very different way. We love people in a different way and they get different places in our life. They stay there only if they understand what their places in our life is. Not everyone can understand that and people tend to go away from you, that hurts the most. It feels like insecurity. Every thing will pop up in mind but none of this matters if you equally love all the people whom you consider as important to you. It is equally important for those people to understand what they are to you and what you are to them.

●

DOCUMENTING UNSUNG HEROES AND LESSER KNOWN EVENTS OF FREEDOM MOVEMENT

✍ **Shivakumar Eberi & Team,** III B.A.

We Indians are proudly celebrating the 75 years of country's Independence this year. It has been a great moment for us to celebrate our Freedom. The celebrations and commemorations began on March 12th 2021 when our honourable Prime Minister Sri Narendra Modiji declared the celebrations of Azadi ka Amrit Mahotsav open at the Sabarmati Ashram of Mahatma Gandhi. It was the day when Mahatma Gandhi had started the historic Salt March in 1930 that was followed by Salt Satyagraha. In that event the Prime Minister had given a call to document numerous unsung heroes who have sacrificed for our Freedom. Following that call by the PM our College began to collect information about numerous unsung heroes of the freedom struggle. The Gandhian Study Centre of our College took the lead and involved the students studying Certificate Course in Gandhian Studies, students of Journalism and students of History for this purpose. I was also a student who participated in gathering information about the Freedom Struggle.

Our team looked into various sources and materials related to freedom movement and tried to prepare a list of people and events that were not known to the public. That was discussed at the Gandhian Study Centre to get a clear picture about years and historic facts. Our College had a theme named as "Amrutavagali Swatantrya" and an orientation was given both online and offline to the participants. As per our first list we could get some information about a few freedom fighters like Hiriyadka Ramaraya Mallya, S. U. Paniyadi, Santyar Ananthapadmanabha Bhat, Tonse Mukunda Pai, Kubera Panduranga Rao, R. S. Shenai, M. Vittal Kamath, A. V. Baliga, Satyamitra Bangera, Kochikar Pandurang Pai, Nayampalli Anand Rao, Udupi Govind Rao, Kadabettu Srinivas Pai, Tonse Upendra Pai, Malpe Vaman Bhat, K. Janardana Shenai, Nagesh Shenai, Vasudeva Shenai, Devendra Shenai, Pangala Upendra Nayak, Pangala Manjunath Nayak, Pangala Manorama Bai, Pangala Nagappa Nayak, P. G. Acharya, Tonse Vasudeva Shenai, Ambabai Pai, Balkattabeedu Krishnayya Hegde, Tonse Raghunath Pai, Nanalal Govindji, Katapadi Srinivas Kamath, Vasudeva Prabhu, B. G. Prabhu, Antayya Shetty, Bageerathi Bai, Girijabai, H. Keshava Pai, P. Gopal Nayak, N. Vasudeva Rao, Koraga Shetty, H. Devaraya Bhandary, Bantakallu K. Lakshminarayana Sharma, Kalyanapura Kogga Pai, Nagesh Shenai Badagupete, Airodi Ramdas Pai, Malpe Shankaranarayana Samaga, U. Govindrayacharya, U. Haridasa Acharya, Ramanatha Pai, M. Abdul Khadar, Yogeshwara Holla, Hiriyadka Gopal Rao, Pangala Vittala Shenoy, Kukkikatte Govinda Nayak, and U. Ramarao Badkillaya. As a pilot initiative we prepared a write up on Bantakallu Lakshminarayana Sharma and also documented a lesser known event of the Quit India Movement where Sri U. Shesha, a common man had defied the prohibitory orders to hoist the National Tricolor on the 40 feet tall Manasthambha of Anantheshwara Temple in Udupi. Likewise we were able to collect information regarding how the first Independence Day was celebrated in 1947 in Udupi. The information was also shared with the media so that the people become aware about the history of the freedom struggle.

An important event that fuelled nationalist spirit among youth to gain freedom from imperial bondage was Quit India Movement declared by Mahatma Gandhi on August 8, 1942.

Exactly after 79 years of that historic day, Gandhian Study Centre (GSC), MGM College, Udupi, initiated a programme to document the unsung heroes and events connected to Quit India and Freedom Movements in Udupi.

After Gandhiji declared the Quit India resolution on August 8, 1942, the movement had spread across India.

In Udupi too, the movement gained momentum with the participation of common people who were inspired by Gandhiji's message of fearlessness.



U. Shesha who defied British and hoisted tricolor upon the monolith pillar in front of Anantheshwara Temple, Udupi

The students who enrolled in Certificate Courses at Gandhian Study Centre visited the places in and around Udupi where the freedom movement was witnessed.

This continued for one year and the academic dissemination of the documented research published next year when the nation celebrated 75 years of Independence.

Mr. Vinith Rao of Gandhian Study Centre informed that one among the unsung events that took place in Udupi was in Car Street and the unsung hero was a common man – U. Shesha trained under S. U. Paniyadi (who participated in non-cooperation movement).

U. Shesha had dared to defy prohibitory orders against hoisting of tricolor in Car Street of Udupi.

Hoisting of tricolor was also an offence as declared by British administration. But, a band of youth of Udupi had decided to defy it non-violently. They had openly written to the authorities that they would hoist the Indian flag in Car Street which was a prominent place then. As a result, the authorities had imposed prohibitory orders and the police force was deployed there round the clock.

But in the darkness of midnight, U. Shesha climbed the 40 feet tall monolith pillar of Anantheshwara temple and hoisted the flag.

Police had to helplessly watch the flag fluttering for some days there.

MGM College students visited this place and documented it. Details on how Hiriyadka Ramaraya Mallya used to publish articles critical of British rule in his 'Sathyagrahi' newspaper will be studied by them, and other landmark places in Udupi where freedom struggle had gained nationalist temper will be visited by the students for documentation purposes, Vinith Rao added.

Here are the sample of our basic collections on the unsung heroes and lesser known events:

1. Unsung Freedom Fighter: Late Bantakallu Lakshminarayana Sharma (1919-2015)

Lakshminarayana Sharma of Bantakal (originally from Katapadi), Udupi, was a devout patriot from his childhood. He was inspired by the thoughts of Swami Vivekananda, Lokmanya Balgangadhar Tilak, Mahatma Gandhi. Leaders like Karnad Sadashiva Rao, S. U. Paniyadi also influenced him. As a young boy he used to participate in the morning marches (prabhat pheri) and was inspired by the spirit of Swadeshi. He had accompanied the Satyagrahis during the Salt Satyagraha in 1930 and had participated in preparation of salt at the sea shore near Katpadi.

Enroute to Udupi, Gandhiji had visited Katpadi on 25-02-1934. Gandhiji had given a message there. Lakshminarayana Sharma was fortunate enough to see Gandhiji from a very close distance and also listen to his small speech. Inspired by Gandhiji's speech, Sharma dedicated himself into the freedom movement. On 25th February 1934, he had followed Gandhiji up to Udupi and had witnessed his speech in Udupi. His mind was full of thoughts and action plan on freedom movement and constructive work. Thereafter he became completely devoted to the Freedom movement. Influenced by Gandhiji's message on Hindi, he studied Hindi and worked in Bangalore. He used spinning wheel (Charkha) from his childhood and he had continued the same to spin 840 feet of thread in Bangalore. This had earned him the membership of Congress. In 1939 he worked as a Congress Volunteer and had also worked for Khadi Prachar. Later, he worked in a Khadi Bhandar. During the freedom movement he had participated in various activities. Before Quit India Movement he was arrested and was sent to Central jail. Later he was kept in Tumkur jail for 9 months. As Quit India Movement was launched by Gandhiji on 8th August 1942 Gandhiji was arrested and kept in Agha Khan Palace Jail in Poona. This incident had made the youngsters to go to Poona to secure the release of Gandhiji. Sharma was one such person who had travelled to Poona by train without ticket after 1942 to see Gandhiji and secure his release. Along with 5 others, he had undertaken a padayathra holding the tricolor flag of Indian National Movement that was accepted as a flag of national identity and oneness. He was more vociferous while shouting 'Bharath Matha Ki Jai, Mahatma Gandhiji Ki Jai' and this had landed him in jail there. He was released from jail after a month. Later, he had also participated in Mysore Satyagraha that had urged the Mysore Rulers to integrate into Indian rule. After Independence he participated in the Bhoodan Movement of Vinobhaji who was a disciple of Gandhiji.

2. Documentation of the Event: First Independence Day Celebrations in Udupi (14th August midnight, and 15th Aug., 1947)

The first Independence Day was celebrated in Udupi in a special manner. As documented by the Gandhian Study Centre, MGM College, Udupi, based upon the archival sources and recollection of eyewitnesses, it was a round the

clock celebration in Udupi. The celebrations started on the evening of 14th August 1947 (Thursday) and continued for the next 24 hours. The event began by 7.30 p.m. on 14th August and continued upto 7.30 p.m. the next day i.e. 15th August. All the Temples, 8 Maths, Church, Mosque, houses and roads were tastefully decorated to mark the occasion. The people of Udupi held special prayers to invoke the blessings of the almighty for the free India.

The Car Street of Krishna Temple was a major place of attraction then as it was the central part of Udupi. The main function to mark the occasion of the transfer of power and the birth of freedom was organized in the Car Street. Car Street was a sacred place with patriotic fervor. It was an active place of patriotic activities during the freedom movement since 1920. It was an epicentre of action and had seen great instances of people's mobilization during Non-cooperation Movement, Swadeshi Campaign, Salt Satyagraha, Civil Disobedience Movement, Quit India Movement, and anti-war demonstrations against World War II.

On 14th August 1947 evening onwards the people of Udupi Town and nearby villages began converging near Car Street to witness the historic midnight hour. A performance of Taalamaddale 'Swarajya Vijaya' which was composed by Sri M. V. Hegde for the occasion was organized and staged by the members of Yuva Mitra Mandala in the outer premises of Shree Anantheshwara Temple in the Car Street of Udupi. The taalamaddale had the characters of Gandhi, Nehru, Sardar Patel and the prasanga had explained how the freedom was achieved.

At the stroke of the midnight hour the nagari/drums and the bells of the Krishna Math and adjoining Temples were sounded… This was followed by the loud bangs of kadonis (fireworks that explode with very loud sound). The Paryaya Swamiji of Krishna Math Sri Lakshmeendra Theertha Swamiji of Shiroor Math along with Swamijis of seven other Maths and the Pontiff of Bhandarkeri Math accompanied by the people marched around the Car Street along with the Freedom Fighters and Satyagrahis of Udupi and hoisted the National Flag. At the same time a trained parrot had also unfurled the miniature of the National Flag after lowering a miniature of Union Jack (British Flag). There was a light drizzle of rain that was seen as a good omen added to the festivities of the occasion.

On the morning of 15th August a well disciplined Prabhat Pheri (Morning march) started from the precincts of the Shree Krishna Math and marched through the Car Street towards Ajjarkadu Gandhi Maidan. Ajjarkadu was an active centre of the National Movement since 1919. As the march passed through various localities and reached Ajjarkad a large number of people had joined it. The cries of victory and slogans of patriotism were filled in the air. Seva dal volunteers and school children sang the National songs and the National Anthem as the National Flag was unfurled by Smt. P. Manorama Bai, a prominent freedom fighter of Udupi. Government authorities were present. Sweets were distributed at various schools. A special programme was also held at the People's Hall of the Board High School. In the evening Police band was played and there was a cultural show at Ajjarkad in the presence of the Taluk Magistrate and other prominent personalities of the town. Festivities continued at various places in the town till 7.30 p.m. that day.

References:

i. Collections at Gandhian Study Centre, MGM College, Udupi.

ii. Rashtrabandhu Newspaper Collection – 1947 from RG Pai Research Library, MGM College Campus, Udupi.

iii. Interviews about Bantakallu Lakshminarayana Sharma.

●

INSPIRING WORDS OF SWAMI VIVEKANANDA

✍ **Shivakumar Eberi,** III B.A. (EHE)

Swami Vivekananda was born on 12 January 1863 in Kolkata. His childhood name was Narendranath Datta. In his very short life upto 4 July 1902, he had achieved wonders and had emerged as the greatest moral and spiritual influencer of all times from India. As an Indian Hindu monk he made the world to know about the greatness of Hinduism and India. He was a saint with a rational and scientific bent of mind. As a chief disciple of the 19th century Indian mystic Ramakrishna, he was a key figure in the introduction of the Indian *Darshanas* (teachings, practices) of Vedanta and Yoga to the Western world. He created interfaith awareness, bringing Hinduism to the status of a major world religion during the late 19th century. He was a major Hindu social reformer who contributed to the awakening of nationalism in colonial India. Swamiji was a great speaker and writer whose words were inspiring to many followers and also non-followers. His speech in Chicago which began with the words "Sister and brothers of America…" will be always remembered. It is interesting to note that the words and works of Swami Vivekananda had influenced and inspired great personalities like Bal Gangadhar Tilak, Rabindranath Tagore, Mahatma Gandhiji, Subhas Chandra Bose, Aurobindo Ghose, Bagha Jatin, Chakravarti Rajagopalachari, Babu Rajendra Prasad, Sardar Patel, Sarvepalli Radhakrishnan, Jawaharlal Nehru, Jamsetji Tata, Maharaja of Mysore, Jagadish Chandra Bose, Annie Besant, Romain Rolland, Lal Bahadur Shastriji and many more leaders including our present Prime Minister Narendra Modi.

If we look into the autobiography of Subhas Chandra Bose we come across these words written by Netaji: "I was barely fifteen when Vivekananda entered my life. Then there followed a revolution within and everything was turned upside down. It was, of course, a long time before I could appreciate the full significance of his teachings or the greatness of his personality, but certain impressions were stamped indelibly on my mind from the outset. Both from his portraits as well as from his teachings, Vivekananda appeared before me as a full blown personality. Many of the questions which vaguely stirred my mind, and of which I was to become conscious later on, found in him a satisfactory solutions." Such was the influence and the power of the words and works of Swamiji. These words became a source of encouragement to follow Swami Vivekananda.

I had studied some lessons during my school years that had highlighted the contributions of Swami Vivekananda. He is a role model and youth icon. I got to read about him at the Swami Vivekananda Chintana Vedike Section of Gandhian Study Centre. Swami Vivekananda Chintana Vedike was inaugurated in our College on 12-01-2021 to mark the Swami Vivekananda Jayanthi and National Youth Day. This Vivekananda Forum was started in the College by our Principal Dr. Devidas S. Naik who himself was inspired by Swami Vivekananda. Mr. Vinith Rao who teaches Gandhian Studies and Sustainable development as the faculty and coordinator of Gandhian Study Centre is the Convenor of Swami Vivekananda Chintana Vedike. He introduced me to the collections of books on and by Swami Vivekananda. Vinith

sir used to quote the words of Gandhiji and Netaji Subhas Chandra Bose while speaking about Vivekananda. Words of Subhas Chandra Bose on Swami Vivekananda were inspiring and meaningful to me. Gandhian Study Centre had a study circle on Swami Vivekananda last year under the theme ‘Architects of Awakened India.’ I was an active participant in the activities of the Centre. I was asked to collect the important quotations from the works of Swami Vivekananda for the ‘Sadvichara Series’ of Swami Vivekananda Chintana Vedike. This made me to search for inspirational quotes from the books at our reading room and I borrowed them from the College Library. I would like to share some of them with you all.

1. **About Strength and Weakness:**

   “Strength is life, weakness is death; strength is felicity, life eternal, immortal. Weakness is constant strain and misery. Let positive, strong, helpful thoughts enter into your brains from very childhood…” said Swamiji.

2. **Significance of our Thoughts:**

   “It is our own mental attitude which makes the world what it is for us. Our thought make things beautiful, our thoughts make things ugly. The whole world is in our own minds. Learn to see things in the proper light. First, believe in this world…”

3. **The Essence of Religion:**

   “The essential thing in religion is making the heart pure; the Kingdom of Heaven is within us, but only the pure in heart can see the King. While we think of the world, it is only the world for us; but let us come to it with the feeling that the world is God, and we shall have God.”

   “The greatest religion is to be true to your own nature. Have faith in yourselves!”

4. **Do Better and Be Happy:**

   “Strike a light, sit not in darkness and sorrow. Do always better and be happy.”

   “Blame neither man, nor God, nor anyone in the world. When you find yourselves suffering, blame yourselves, and try to do better.”

5. **Knowledge is inherent in us:**

   “Knowledge, again, is inherent in man. No knowledge comes from outside; it is all inside. What we say a man “knows”, should, in strict psychological language, be what he “discovers” or “unveils” what a man “learns” is really what he “discovers”, by taking the cover off his own soul, which is a mine of infinite knowledge. We say Newton discovered gravitation. Was it sitting anywhere in a corner waiting for him? It was in his own mind; the time came and he found it out. All knowledge that the world has ever received comes from the mind; the infinite library of the universe is in your own mind. The external world is simply the suggestion, the occasion, which sets you to study your own mind, but the object of your study is always your own mind. The falling of an apple gave the suggestion to Newton, and he studies his own mind. He rearranged all the previous links of thought in his mind and discovered a new link among them, which we call the law of gravitation. It was not in the apple nor in anything in the centre of the earth. All knowledge, therefore, secular or spiritual, is in the human mind. In many cases it is not discovered, but remains covered, and when the covering is being slowly taken off, we say, “We are learning”, and the advance of knowledge is made by the advance of this process of uncovering.”

6. **Knowledge, Prophet and Scientist:**

   “Knowledge can never be created, it can

only be discovered; and every man who makes a great discovery is inspired. Only, when it is a spiritual truth he brings, we call him a prophet; and when it is on the physical plane, we call him a scientific man, and we attribute more importance to the former, although the source of all truth is one.”

7. Swami Vivekananda’s Message for Youth:

“I have faith in my country, and especially in the youth of my country. My hope is in you. With an immense amount of feeling and enthusiasm in the blood, will come heroes who will march from one corner of the earth to the other, preaching and teaching the eternal spiritual truths of our forefathers. And this is the great work before you. Each one of you has a glorious future if you dare believe me. Have tremendous faith in yourselves, like the faith I had when I was a child, and which I am working out now. Have that faith, each one of you, in yourself – that eternal power is lodged in every soul – and you will revive the whole of India. We will then go to every country under the sun, and our ideas will before long be a component of the many forces that are working to make up every nation in the world.

8. All Power is within You:

“All power is within you; you can do anything and everything. Believe in that, do not believe that you are weak; do not believe that you are half-crazy lunatics, as most of us do nowadays. You can do anything and everything, without even the guidance of any one. Stand up and express the divinity within you.”

9. Arise, Awake:

“Arise, awake, and stop not till the goal is reached.”

By reading the words of Swami Vivekananda we get inspired naturally as they reach straight in to our minds and hearts. From the above quotations you can easily understand the concept of knowledge, power, discovery, strength and the definition of the prophet and a scientist. That is the greatness of Swami Vivekananda.

References:

i. Complete Works of Swami Vivekananda.
ii. Viveka Vani.
iii. Sources at Swami Vivekananda Chintana Vedike, MGM College, Udupi.
iv. Wikipedia.

MY YSI JOURNEY

✍ **Seema P. Bangera,** I B.Sc. (BZC)

I and my friends were enlisted by our NSS officers to represent our Mahatma Gandhi Memorial College, Udupi at the YSI-21 Conference. YSI stands for Youth Social Innovation. It was a wonderful project organized by the Srushti Degree College, Bangalore in collaboration with Bangalore North University and Gandhi Bhavan, Bangalore. This project mainly helped me and my peers to develop our personality and skills. At first I had no idea about this project or the significance of its name. There were 3 stages in this project namely, 1) Pre-workshop Events, 2) Test Your Idea, 3) Share at YSI Conference.



Pre-Workshop Event:

Due to the COVID-19 pandemic all the events were conducted through online mode. Like me many students and faculty members from different institutions of Karnataka were present. We had to carry out different activities or programmes for all the 5 days in connection with this stage.

